# ಪಾರ್ವಣಶ್ರಾದ್ಧತಿಥಿನಿರ್ಣಯ

ಲೇಖಕ :

ಆಸ್ಥಾನವಿದ್ವಾನ್ ಎಸ್. ವಿಟ್ಠಲಶಾಸ್ತ್ರೀ,

ವೇದಾಂತಶಿರೋಮಣಿ, ವೇದಾಂತವಿಶಾರದ, ವಿದ್ಯಾವಾಚಸ್ಪತಿ

ಮೈಸೂರು.

—∽—

ಬೆಲೆ : 0—8—0

# ಪಾರ್ವಣಶ್ರಾದ್ಧತಿಥಿನಿರ್ಣಯ

ಲೇಖಕ :

ಆಸ್ಥಾನವಿದ್ವಾನ್ ಎಸ್. ವಿಟ್ಠಲಶಾಸ್ತ್ರೀ,

ವೇದಾಂತಶಿರೋಮಣಿ, ವೇದಾಂತವಿಶಾರದ, ವಿದ್ಯಾವಾಚಸ್ಪತಿ

**ಮೈಸೂರು.**

ಒಂದನೆಯ ಮುದ್ರಣ ೧೦೦೦ ಪ್ರತಿಗಳು.

(ಇದರ ಹಕ್ಕು ಲೇಖಕರಿಂದ ಕಾದಿರಿಸಲ್ಪಟ್ಟಿದೆ.)

1950

ಆಧ್ಯಾತ್ಮಪ್ರಕಾಶ ಮುದ್ರಣಾಲಯ,

ಹೊಳೆನರಸೀಪುರ.

**ಬೆಲೆ : 0—8—0**

# ವಿಷಯಾನುಕ್ರಮಣಿಕೆ


| | | ಪುಟ |
|---|---|---|
| ೧ | ಮೊದಲ ಮಾತು | iv–ix |
| ೨ | ಸಮ್ಮತಿಪತ್ರಗಳು | x–xvi |
| ೩ | ಶ್ರುತ್ಯಾದಿಪ್ರಮಾಣವಚನಗಳು | ೧–೫ |
| ೪ | ಶಿಷ್ಟಾಚಾರ | ೫–೬ |
| ೫ | ಏಕದೇಶಿಗಳಿಗೆ ಸಮ್ಮತವಾದ ವಚನಗಳು ಮತ್ತು ಅವುಗಳ ವಿಮರ್ಶೆ | ೬–೧೦ |
| ೬ | ಸಾಯಾಹ್ನವ್ಯಾಪ್ತಿವಿಚಾರ | ೧೦–೧೫ |
| ೭ | ಕರ್ಮಕಾಲವ್ಯಾಪ್ತತಿಥಿಯು ಕರ್ಮತಿಥಿ | ೧೫–೧೬ |
| ೮ | ಶ್ರಾದ್ಧಕರ್ಮಕಾಲವಿಚಾರ | ೧೬–೧೭ |
| ೯ | ಅಪರಾಹ್ಣನಿರ್ಣಯ | ೧೮ |
| ೧೦ | ಗೌಣಕಾಲ | ೧೮–೧೯ |
| ೧೧ | ಕೇವಲಸಾಯಾಹ್ನದಲ್ಲಿರುವ ತಿಥಿಯ ಗ್ರಾಹ್ಯತ್ವ ವಿಚಾರ | ೨೦–೨೧ |
| ೧೨ | ಅಪರಾಹ್ಣವ್ಯಾಪ್ತಿಗೆ ಬೋಧಾಯನರ ಉಕ್ತಿ | ೨೧–೨೨ |
| ೧೩ | ಅಪರಾಹ್ಣವ್ಯಾಪ್ತಿಗೆ ಎಲ್ಲಿಯೂ ನಿಷೇಧವಿಲ್ಲ | ೨೨–೨೩ |
| ೧೪ | ಕೇವಲ ಸಾಯಾಹ್ನದಲ್ಲಿರುವ ತಿಥಿನಿಷೇಧ | ೨೩–೨೪ |
| ೧೫ | ಉದಯದಿಂದ ಸಾಯಾಹ್ನದವರೆಗೂ ತಿಥಿ ಇಲ್ಲದಿರುವಾಗ ಹೇಗೆ ನಿರ್ಣಯಿಸಬೇಕು ? | ೨೪ |
| ೧೬ | ಉಪಸಂಹಾರ | ೨೪–೨೫ |
| ೧೭ | ಪರಿಶಿಷ್ಟ | ೨೬–೩೬ |

# ಮೊದಲ ಮಾತು

---o---

ಶ್ರೀಮತ್ಸರ್ವಧಾರಿ ಸಂ॥ ಕಾರ್ತಿಕ ಬ॥ ೬॥ ಸೋಮವಾರ ೨೭ಘಳಿಗೆ ೩೮ವಿಘಳಿಗೆಗಳೂ ಅದೇ ಬ॥ ೭॥ ಭೌಮವಾರ ೨೨ಘಳಿಗೆ ೨೦ವಿಘಳಿಗೆಗಳೂ ಇದ್ದವು. ತರೀಕೆರೆಯಲ್ಲಿರುವ ಬೋಧಾಯನಶಾಖೆಯವರಾದ ಮ॥ ರಾ॥ ರಾ॥ ಶಂಕರಯ್ಯನವರು ಆ, ಕಾ॥ ಬ॥ ೭ಯ ಶ್ರಾದ್ಧವನ್ನು ಸಪ್ತಮೀ ಭೌಮ ವಾರವೇ, ವೇ॥ ಬ್ರ॥ ಶ್ರೀ॥ ಮಳಲಿ ರಾಮಭಟ್ಟರನ್ನು ಪುರೋಹಿತರನ್ನಾಗಿಟ್ಟು ಕೊಂಡು ನೆರವೇರಿಸಿದರು. ಅನಂತರ ತರೀಕೆರೆಯಲ್ಲಿರುವ ದೊಡ್ಡಮನೆ ವೇ॥ ಬ್ರ॥ ಶ್ರೀ॥ ಅನಂತಶಾಸ್ತ್ರಿಗಳೂ ಚಿ॥ ರಾ॥ ಟಿ. ಹಿರಿಯಣ್ಣಶಾಸ್ತ್ರಿಯೂ ನನಗೆ "ಬೋಧಾಯನರು ಪಾರ್ವಣಶ್ರಾದ್ಧತಿಥಿನಿರ್ಣಯವನ್ನು ಹೇಗೆ ಮಾಡಬೇಕು ? ಮೇಲೆ ಹೇಳಿದ ಸಪ್ತಮಿಯ ಶ್ರಾದ್ಧವು ಎಂದಾಗುತ್ತದೆ? '' –ಎಂದು ಮುಂತಾಗಿ ಪತ್ರವನ್ನು ಬರೆದರು. ಆದಕ್ಕೆ ನಾನು ನಮ್ಮ ಅಣ್ಣನವರಾಗಿದ್ದ ಶ್ರೀ॥ ಕೃಷ್ಣ ಶಾಸ್ತ್ರಿಗಳು ಹೇಳಿದ್ದಂತೆ, ಬೋಧಾಯನರಿಗೆ ಸಾಯಾಹ್ನದಲ್ಲಿರುವ ತಿಥಿಯಾಗ ಬೇಕೆಂದೂ, ಮೇಲೆ ತಿಳಿಸಿರುವ ಸಪ್ತಮೀ ಭೌಮವಾರದಲ್ಲಿ ಸಪ್ತಮಿಯು ಸಾಯಾಹ್ನದಲ್ಲಿಲ್ಲದಿರುವದರಿಂದಲೂ ಹಿಂದಿನ ಸೋಮವಾರವಿರುವದರಿಂದಲೂ ಹಿಂದಿನ ಸೋಮವಾರವೇ ಸಪ್ತಮೀಶ್ರಾದ್ಧವಾಗಬೇಕಾಗಿತ್ತೆಂದೂ ಹಾಗೆ ನಡೆ ಯದೇ ಇರುವದರಿಂದ ಉಕ್ತಕಾಲದಲ್ಲಿ ಪುನಃ ಶ್ರಾದ್ಧವನ್ನು ಮಾಡಬೇಕಾಯಿ ತೆಂದೂ ಪತ್ರವನ್ನು ಅವರಿಗೆ ಬರೆದೆನು. ಅವರು ಮ॥ ರಾ॥ ರಾ॥ ಶಂಕರಯ್ಯ ನವರಿಗೆ ಈ ವಿಷಯವನ್ನು ತಿಳಿಸಿ ಉಕ್ತದಿನದಲ್ಲಿ ಪುನಃ ಶ್ರಾದ್ಧವನ್ನು ಅವರಿಂದ ಮಾಡಿಸಿದರು. ಆಗ ವೇ॥ ಬ್ರ॥ ಶ್ರೀ॥ ಮಳಲಿ ರಾಮಭಟ್ಟರು "ಅಪರಾಹ್ಣದ ಲ್ಲಿಲ್ಲದ ಸಾಯಂಕಾಲದಲ್ಲಿ ಮಾತ್ರ ಬಂದಿರುವ ತಿಥಿಯನ್ನು ಪಾರ್ವಣಶ್ರಾದ್ಧ ತಿಥಿಯನ್ನಾಗಿ ಬೋಧಾಯನರು ಗ್ರಹಿಸಬೇಕೆಂದು ಎಲ್ಲಿ ಹೇಳಿದೆ ? ತಾವೇ ಬೋಧಾಯನಶಾಖೆಯವರೆಂದು ಹೇಳಿಕೊಂಡಿರುವ ಶ್ರೀಕಾಲಮಾಧವರು ಅಪರಾಹ್ಣವ್ಯಾಪ್ತತಿಥಿಯನ್ನೇ ಪಾರ್ವಣಶ್ರಾದ್ಧತಿಥಿಯನ್ನಾಗಿ ಹೇಳಿರುವ ವಚನವಿದೆಯಲ್ಲ ? " ಎಂದು ನನಗೆ ಕಾಗದವನ್ನು ಬರೆದರು. ಇದರಿಂದ

ಪ್ರೇರಿತನಾಗಿ ನಾನು ಈ ವಿಷಯದಲ್ಲಿ ವಿಚಾರವನ್ನು ಪ್ರಾರಂಭಿಸಿದೆನು. ಇದಕ್ಕೆ ಕಾರಣರಾದ ವೇ|| ಬ್ರ|| ಶ್ರೀ|| ಮಳಲಿ ರಾಮಭಟ್ಟರಿಗೆ ನಾನು ಕೃತಜ್ಞನಾಗಿರುತ್ತೇನೆ.

ಧರ್ಮಶಾಸ್ತ್ರಗಳನ್ನು ಮುಂದುಮುಂದಕ್ಕೆ ನೋಡುತ್ತ ಹೋದಹಾಗೆಲ್ಲ ಬೋಧಾಯನರಿಗಾಗಲಿ ಅಥವಾ ಮತ್ತೆ ಯಾರಿಗಾದರೂ ಆಗಲಿ ಅಪರಾಹ್ಣದಲ್ಲಿಲ್ಲದ ಕೇವಲ ಸಾಯಾಹ್ನದಲ್ಲಿ ಬಂದಿರುವ ತಿಥಿಯುಳ್ಳ ದಿನವು ಪಾರ್ವಣಶ್ರಾದ್ಧಕ್ಕೆ ಗ್ರಾಹ್ಯವಲ್ಲವೆಂಬುದು ಹೆಚ್ಚುಹೆಚ್ಚಾಗಿ ವ್ಯಕ್ತವಾಗುತ್ತಬಂದಿತು. ಶಾಸ್ತ್ರೋಕ್ತವಾದದ್ದನ್ನು ಬಿಟ್ಟು ನಮಗೆ ತಿಳಿದಂತೆ ಮಾಡುವ ಆಚಾರವು ಎಂದಿಗೂ ಸರಿಯಾದದ್ದು ಆಗಲಾರದಾದ್ದರಿಂದ ಈ ವಿಷಯದಲ್ಲಿ ದೊಡ್ಡವರ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕೆಂಬ ಇಚ್ಛೆಯಿಂದ ನನಗೆ ಪರಿಚಿತರಾದ ಕೆಲವು ಪಂಡಿತರಿಗೂ, ತರೀಕೆರೆಯು ಶ್ರೀಕೂಡ್ಲಿ ಶೃಂಗೇರಿ ಸಂಸ್ಥಾನಕ್ಕೆ ಸೇರಿದುದಾದ್ದರಿಂದ ಶ್ರೀಮಜ್ಜಗದ್ಗುರು ಶ್ರೀಕೂಡ್ಲಿಶೃಂಗೇರಿ ಮಹಾಸಂಸ್ಥಾನಾಧಿಪತಿಗಳಾದ, ಶ್ರೀಮತ್ಪರಮಹಂಸೇತ್ಯಾದಿಬಿರುದಾಂಕಿತರಾದ **ಶ್ರೀ ಸಚ್ಚಿದಾನಂದ ಶಂಕರ ಭಾರತೀಸ್ವಾಮಿಗಳಿಗೂ,** ನನ್ನ ವಿಚಾರದ ಫಲಿತಾಂಶವನ್ನು 16-3-1949 ರಲ್ಲಿ ಅರಿಕೆಮಾಡಿಕೊಂಡೆನು. 21-5-49ರಲ್ಲಿ ಶ್ರೀಗಳಿಂದ ಬಂದ ನಿರೂಪದಲ್ಲಿ "ಪರಂಪರಾಗತಕ್ರಮದಂತೆ ಸಾಯಾಹ್ನವ್ಯಾಪ್ತತಿಥಿಯಲ್ಲಿಯೇ (ಅಂದರೆ ಅಪರಾಹ್ಣದಲ್ಲಿಲ್ಲದ ಸಾಯಾಹ್ನದಲ್ಲಿ ಮಾತ್ರ ಬಂದಿರುವ ತಿಥಿಯಲ್ಲಿ) ಬೋಧಾಯನರು ಪಾರ್ವಣಶ್ರಾದ್ಧವನ್ನು ಅನುಷ್ಠಿಸುವದು ಯುಕ್ತತಮವು" ಎಂಬ ಅಭಿಪ್ರಾಯವಿತ್ತು. ಇದು ತರೀಕೆರೆ ವೇ|| ಬ್ರ|| ಸತ್ಕವಿರತ್ನ ಟಿ. ಚಿದಂಬರಪಂಡಿತರು, ವೇ||ಬ್ರ|| ಶ್ರೀ|| ಶಿವಮೊಗ್ಗಾದಲ್ಲಿರುವ ಪಾಠಶಾಲಾಧ್ಯಾಪಕರಾದ ಕೇಶವಘನಪಾಠಿಗಳು, ವೇ|| ಬ್ರ|| ಶ್ರೀ|| ಮತ್ತೂರು ನಾರಾಯಣಶ್ರೌತಿಗಳು– ಇವರೇ ಮುಂತಾದವರ ಅಭಿಪ್ರಾಯದ ಆಧಾರದ ಮೇಲೆ ಹೊರಡಿಸಿರುವ ನಿರೂಪ. ಈ ನಿರೂಪವು ಕರಗತವಾದಬಳಿಕ ನಾನು ಬೇರೆಬೇರೆ ಕಡೆಯಲ್ಲಿರುವ ಬೋಧಾಯನರ ಶಿಷ್ಟಾಚಾರವು ಹೇಗಿದೆ ? ಎಂಬುದನ್ನು ತಿಳಿಯುವದಕ್ಕಾಗಿ ಪತ್ರಮುಖದಿಂದ ವ್ಯಾವಹಾರ ನಡೆಸಿದ್ದರಲ್ಲಿ ಎಲ್ಲಾ ಕಡೆಯಲ್ಲಿಯೂ ಬೋಧಾಯನರಲ್ಲಿಯೂ ಅಪರಾಹ್ಣವ್ಯಾಪ್ತತಿಥಿಯನ್ನೇ ಗ್ರಹಿಸುತ್ತಿರುವ ಆಚಾರವು ಇದೆ ಎಂದು ತಿಳಿಯಬಂದಿತು.

ಇದನ್ನೆಲ್ಲ ಕ್ರೋಡೀಕರಿಸಿ ಒಂದು ಲೇಖನವನ್ನು ಬರೆದು ಶ್ರೀಮನ್ಮಹಾರಾಜರವರ ಸಂಸ್ಕೃತ ಕಾಲೇಜಿನಲ್ಲಿ ಮೈಸೂರು ಪಂಡಿತಮಂಡಲದ ಆಶ್ರಯದಲ್ಲಿ ಶ್ರೀಯುತ ರಾಜಸೇವಾಪ್ರಸಕ್ತ ಅಂಬಳೆ ಸುಬ್ರಹ್ಮಣ್ಯಯ್ಯರ್ ಬಿ. ಎ., ವಿಶ್ರಾಂತ ಎಕ್ಸೈಜು ಕಮೀಷನರ್– ಇವರ ಅಧ್ಯಕ್ಷತೆಯಲ್ಲಿ ಒಂದು ಸಭೆಯನ್ನು ಏರ್ಪಡಿಸಿ ಸಭಿಕರ ಮುಂದೆ ನನ್ನ ಅಭಿಪ್ರಾಯಗಳನ್ನೆಲ್ಲ ಇಟ್ಟೆನು. ಆಗ ನೆರದಿದ್ದ ಸಭೆಯವರೆಲ್ಲರೂ ಏಕಕಂಠರಾಗಿ ನನ್ನ ಅಭಿಪ್ರಾಯವನ್ನು ವಿಮರ್ಶಿಸಿ ಅನುಮೋದಿಸಿ "ಬೋಧಾಯನಾದಿ ಸರ್ವರಿಗೂ ಅಪರಾಹ್ಣವ್ಯಾಪ್ತತಿಥಿಯೇ ಮುಖ್ಯವಾದ ಪಾರ್ವಣಶ್ರಾದ್ಧತಿಥಿಯು. ಉದಯದಿಂದ ಅಥವಾ ಅಪರಾಹ್ಣದಿಂದ ಸಾಯಾಹ್ನದವರೆಗೂ ಇರುವ ತಿಥಿಯು ಶ್ರೇಷ್ಠತಿಥಿಯು. ಅಪರಾಹ್ಣದಲ್ಲಿಲ್ಲದ ಸಾಯಾಹ್ನದಲ್ಲಿ ಮಾತ್ರ ಬಂದಿರುವ ತಿಥಿಯು ಸಾಮಾನ್ಯವಾಗಿ ಪಾರ್ವಣಶ್ರಾದ್ಧತಿಥಿಯಾಗುವದಿಲ್ಲ. ಎರಡು ದಿನಗಳಲ್ಲಿಯೂ ಅಪರಾಹ್ಣವ್ಯಾಪ್ತಿಯಿಲ್ಲದಿದ್ದಾಗ ಮಾತ್ರ ಸಾಯಾಹ್ನದಲ್ಲಿ ಬಂದಿರುವ ತ್ರಿಮುಹೂರ್ತವಿರುವ ತಿಥಿಯು ಗ್ರಾಹ್ಯವಾದದ್ದು" ಎಂದು ಮುಂತಾದ ನಿರ್ಣಯಗಳನ್ನು ಮಾಡಿದರು. ಅದರ ನಕಲು ಒಂದನ್ನು ಮೇಲೆ ತಿಳಿಸಿರುವ ಶ್ರೀಶ್ರೀಗಳವರಿಗೆ 12–6–49ರಲ್ಲಿ ಕಳುಹಿಸಿದೆನು. ಜಾಗ್ರತೆಯಾಗಿ ಶಾಸ್ತ್ರೀಯವಾದ ತೀರ್ಮಾನವನ್ನು ಅಪ್ಪಣೆಕೊಡಿಸಬೇಕೆಂದು ಪುನಃ 24–7–49ರಲ್ಲಿ ಶ್ರೀಗಳನ್ನು ಪ್ರಾರ್ಥಿಸಿದೆನು. ಮತ್ತೆ 11–8–49ರಲ್ಲಿ ಪ್ರಾರ್ಥನಾಪತ್ರವನ್ನು ಬರೆದೆನು. ಈಚೆಗೆ ಶ್ರೀಶ್ರೀಗಳವರು ವಿರೋಧಿ ಸಂ॥ ಭಾದ್ರಪದ ಶು॥ ೧೫॥ ಬುಧವಾರ (ತಾ॥ 7–9–49)ರಲ್ಲಿ ನನ್ನನ್ನೂ, ಪ್ರತಿಪಕ್ಷದ ಅಭಿಪ್ರಾಯವುಳ್ಳ ಕೆಲವರನ್ನೂ ಸನ್ನಿಧಾನಕ್ಕೆ ಕರೆಯಿಸಿಕೊಂಡು ಈ ವಿಷಯವನ್ನು ಸನ್ನಿಧಾನದಲ್ಲಿ ಪರಾಂಬರಿಸಿ ಎರಡೂ ಪಕ್ಷದ ಅಭಿಪ್ರಾಯಗಳನ್ನು ಲಿಖಿತ ಮೂಲಕವಾಗಿ ತೆಗೆದುಕೊಂಡು "ವಿಮರ್ಶೆಮಾಡಿ ಉತ್ತರವನ್ನು ಕಳುಹಿಸುತ್ತೇವೆಂದು" ಅಪ್ಪಣೆಕೊಡಿಸಿದರು. 29–10–49ರಲ್ಲಿ ಪುನಃ ಶ್ರೀಶ್ರೀಗಳವರನ್ನು ನಿರೂಪವನ್ನು ದಯಪಾಲಿಸಬೇಕೆಂದು ನಾನು ಪ್ರಾರ್ಥಿಸಿಕೊಂಡೆನು. ಮತ್ತೆ 18–1–50ರಲ್ಲಿ "ಏಕದೇಶಿಗಳಲ್ಲಿ ಕೆಲವರ ಆಚಾರವೂ ಅಪರಾಹ್ಣವ್ಯಾಪ್ತತಿಥಿಯನ್ನು ಗ್ರಹಿಸುವದೇ ಆಗಿತ್ತು. ಈಚೆಗೆ ಸುಮಾರು 12ವರ್ಷಗಳಿಂದ ಬದಾಲಾಯಿಸಿದ್ದಾರೆಂದು ತಿಳಿದುಬಂದಿದೆ'ಎಂದು ಮುಂತಾದ ವಿಷಯಗಳನ್ನು ಬರೆದು ಜಾಗ್ರತೆಯಾಗಿ ವಿಚಾರಮಾಡಿ ಉತ್ತರವನ್ನು ದಯಪಾಲಿಸಬೇಕೆಂದು ಬರೆದೆನು. ಪುನಃ 29–6–50ರಲ್ಲಿ "ಈ ವಿಷಯವನ್ನು ಪ್ರಿಂಟುಮಾಡಿಷಬೇಕಾಗಿದೆ; ಆದುದರಿಂದ

ಜಾಗ್ರತೆಯಾಗಿ ನಿರೂಪಣವನ್ನು ದಯಪಾಲಿಸಬೇಕೆಂದು" ಪ್ರಾರ್ಥಿಸಿದೆನು. ಕೊನೆಯದಾಗಿ ಜಗದ್ಗುರು ಶ್ರೀ ಶೃಂಗೇರಿ ಮಠಾಧಿಪತಿಗಳಾದ ಶ್ರೀಮತ್ಪರಮ ಹಂಸೇತ್ಯಾದಿ ಬಿರುದಾಂಕಿತರಾದ **ಶ್ರೀಮದಭಿನವವಿದ್ಯಾತೀರ್ಥಸ್ವಾಮಿ ಗಳವರಿಂದ** ಬಂದ ನಿರೂಪಣದ ನಕಲನ್ನು ಕಳುಹಿಸಿ ತಮ್ಮ ಘನವಾದ ನಿರೂಪವನ್ನು ದಯಪಾಲಿಸಬೇಕೆಂದು 10-7-1950ರಲ್ಲಿ ಪ್ರಾರ್ಥಿಸಿಕೊಂಡೆನು. ಅವರಿಂದ ಇದುವರೆಗೂ ಯಾವ ನಿರೂಪವೂ ಬಂದಿರುವದಿಲ್ಲ. ಶ್ರೀಶ್ರೀಗಳವರು ಪಕ್ಷಗಳೆರಡರ ಬಲಾಬಲವನ್ನು ತೂಗಿ ನೋಡಿರುವದರಿಂದ ಶಾಸ್ತ್ರಾಚಾರ ಗಳಿಗೆ ಸಮ್ಮತವಾದ ನನ್ನ ಅಭಿಪ್ರಾಯವು ಅವರಿಗೂ ಸಮ್ಮತವೆಂದೇ ನಾನು ನಂಬಿರುತ್ತೇನೆ.

ಹೊಳೆನರಸೀಪುರದಲ್ಲಿರುವ ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯವರ್ಯ ರಾದ **ಶ್ರೀಶ್ರೀ ಸಚ್ಚಿದಾನಂದಸರಸ್ವತೀಸ್ವಾಮಿಗಳವರ** ಸನ್ನಿಧಿಯಲ್ಲಿಯೂ, ಶ್ರೀಮತ್ಪರಮಹಂಸೇತ್ಯಾದಿ ಬಿರುದಾಂಕಿತರಾದ **ಶ್ರೀ ಶ್ರೀಧರಸ್ವಾಮಿಗಳ** ಸನ್ನಿಧಿಯಲ್ಲಿಯೂ ಸಂಪೂರ್ಣವಾಗಿ ಈ ವಿಚಾರವನ್ನೆಲ್ಲ ಓದಿ ಹೇಳಿ ಅವರಿಬ್ಬರ ಸಮ್ಮತಿಪೂರ್ವಕವಾದ ಆಶೀರ್ವಾದವನ್ನು ಪಡೆದಿರುತ್ತೇನೆ.

ಶ್ರೀಮತ್ಪರಮಹಂಸ ಪರಿವ್ರಾಜಕೇತ್ಯಾದಿ ಬಿರುದಾಂಕಿತರಾದ ಜಗದ್ಗುರು ಶ್ರೀ ಶೃಂಗೇರಿ ಮಠಾಧಿಪತಿಗಳಾದ ಶ್ರೀಮದಭಿನವವಿದ್ಯಾತೀರ್ಥಸ್ವಾಮಿಗಳವರ, ಅಪರಾಹ್ಣವ್ಯಾಪ್ತತಿಥಿಯೇ ಮುಖ್ಯಪಾರ್ವಣಶ್ರಾದ್ಧತಿಥಿಯೆಂಬ ಅನುಗ್ರಹ ರೂಪವಾದ, ಆಶೀರ್ವಾದವನ್ನು ಪಡೆದಿರುತ್ತೇನೆ.

ಈ ವಿಚಾರವನ್ನು ಓದಿಸಿ ಕೇಳಿ ತಮ್ಮ ಸಮ್ಮತಿಯನ್ನು ಕೊಟ್ಟಿರುವ ಮಹನೀಯರೆಲ್ಲರಿಗೂ ನಾನು ಕೃತಜ್ಞನಾಗಿರುತ್ತೇನೆ. ಆ ಮಹನೀಯರ ಹೆಸರುಗಳನ್ನೂ ಇಲ್ಲಿ ಬರೆದಿರುತ್ತೇನೆ.:—

೧. ಶ್ರೀಯುತ ರಾಜಸೇವಾಪ್ರಸಕ್ತ ಅಂಬಳೆ ಸುಬ್ರಹ್ಮಣ್ಯಯ್ಯರ್ ರವರು ಬಿ.ಎ., ವಿಶ್ರಾಂತ ಎಕ್ಸೈಜು ಕಮೀಷನರು.

೨. ವೇ॥ ಬ್ರ॥ ಶ್ರೀ॥ ಪುರಾಣರತ್ನಂ, ಮಹಾವಿದ್ವಾನ್, ಧರ್ಮಾಧಿಕಾರಿಗಳು ಹೊಳವನಹಳ್ಳಿ ಶೇಷಾಚಾರ್ಯರವರು.

೩. ವೇ॥ ಬ್ರ॥ ಶ್ರೀ॥ ಜ್ಯೌತಿಷರತ್ನಂ, ಮಹಾವಿದ್ವಾನ್, ಧರ್ಮಾಧಿಕಾರಿಗಳು ಕರೂರು ಶೇಷಾಚಾರ್ಯರು, ವಿಶ್ರಾಂತ ಜ್ಯೌತಿಷಪ್ರಧಾನೋಪಾಧ್ಯಾಯರು.

೪. ವೇ॥ ಬ್ರ॥ ಶ್ರೀ॥ ವೇದರತ್ನಂ, ಮಹಾವಿದ್ವಾನ್, **ಕಟ್ಟೆಮಳಲುವಾಡಿ ವೆಂಕಟರಾಮಾವಧಾನಿಗಳು.** ವಿಶ್ರಾಂತ ವೇದಭಾಷ್ಯಪ್ರಧಾನೋಪಾಧ್ಯಾಯರು.

೫. ವೇ॥ ಬ್ರ॥ ಶ್ರೀ॥ ಪಂಡಿತಮಾರ್ತಾಂಡ, ವೈದಿಕರತ್ನಂ, ಪಂಡಿತರತ್ನಂ, ಮಹಾವಿದ್ವಾನ್, **ಕನ್ನಂಬಾಡಿ ಗೋಪಾಲಕೃಷ್ಣಶಾಸ್ತ್ರಿಗಳು.**
ವಿಶ್ರಾಂತ ಸಾಹಿತ್ಯೋಪಾಧ್ಯಾಯರು.

೬. ವೇ॥ ಬ್ರ॥ ಶ್ರೀ॥ ಪಂಡಿತರತ್ನಂ, ಮಹಾವಿದ್ವಾನ್, **ದೊಡ್ಡಬಳ್ಳಾಪುರದ ವಾಸುದೇವಾಚಾರ್ಯರು.** ದ್ವೈತವೇದಾನ್ತಪ್ರಧಾನೋಪಾಧ್ಯಾಯರು.

೭. ವೇ॥ ಬ್ರ॥ ಶ್ರೀ॥ ಪಂಡಿತರತ್ನಂ, ಮಹಾವಿದ್ವಾನ್, ವೇದಭೂಷಣ **ಧಾಲೀನರಸಿಂಹಭಟ್ಟರು,** ಋಗ್ವೇದಪ್ರಧಾನೋಪಾಧ್ಯಾಯರು.

೮. ವೇ॥ ಬ್ರ॥ ಶ್ರೀ॥ ಪಂಡಿತರತ್ನಂ, ಆಸ್ಥಾನ ಮಹಾವಿದ್ವಾನ್, **ಪಿ. ಆರ್. ಶಿವಸುಬ್ರಹ್ಮಣ್ಯಶಾಸ್ತ್ರಿಗಳು.** ಧರ್ಮಶಾಸ್ತ್ರಪ್ರಧಾನೋಪಾಧ್ಯಾಯರು.

೯. ವೇ॥ ಬ್ರ॥ ಶ್ರೀ॥ ಪಂಡಿತರತ್ನಂ, ಮಹಾವಿದ್ವಾನ್, ಪಂಡಿತಪ್ರವರ, ಪಂಡಿತರಾಜ **ಎಮ್. ಎಸ್. ವೇಂಕಟೇಶಶಾಸ್ತ್ರಿಗಳು,**
ಅದ್ವೈತವೇದಾನ್ತಪ್ರಧಾನೋಪಾಧ್ಯಾಯರು,

೧೦. ವೇ॥ ಬ್ರ॥ ಶ್ರೀ ಮಹಾವಿದ್ವಾನ್, ಉಭಯ ವೇದಾನ್ತಪ್ರವರ್ತಕಾಚಾರ್ಯ, **ಆತ್ಮಗೂರು ದೀಕ್ಷಾಚಾರ್ಯರು,** ವಿಶಿಷ್ಟಾದ್ವೈತ ಪ್ರಧಾನೋಪಾಧ್ಯಾಯರು.

೧೧. ವೇ॥ ಬ್ರ॥ ಶ್ರೀ॥ ಮಹಾವಿದ್ವಾನ್, **ಆರ್. ಡಿ. ಕುಪ್ಪಮ್,**

೧೨. **ಸುಬ್ರಹ್ಮಣ್ಯಶಾಸ್ತ್ರಿಗಳು,** ವಿಶ್ರಾನ್ತಮೀಮಾಂಸಾಪ್ರಧಾನೋಪಾಧ್ಯಾಯರು.

೧೩. ವೇ॥ ಬ್ರ॥ ಶ್ರೀ॥ ಪಂಡಿತಪ್ರವರ ವಿದ್ವಾನ್ **ಎ. ಎಸ್. ರಾಮಚಂದ್ರಶಾಸ್ತ್ರಿಗಳು,** ಬೆಂಗಳೂರು ಶಂಕರಮಠದ ವೇದಾನ್ತಪ್ರಧಾನೋಪಾಧ್ಯಾಯರು.

೧೪. ವೇ॥ ಬ್ರ॥ ಶ್ರೀ॥ ಆಸ್ಥಾನವಿದ್ವಾನ್, **ಪಿ. ಚಂದ್ರಶೇಖರಭಟ್ಟರು,** ಮಹಾರಾಜಾ ಕಾಲೇಜು ಸಂಸ್ಕೃತೋಪಾಧ್ಯಾಯರು.

೧೫. ವೇ॥ ಬ್ರ॥ ಶ್ರೀ॥ ಆಸ್ಥಾನವಿದ್ವಾನ್, ಸಾಹಿತ್ಯವೇದಾನ್ತ ವಿದ್ವಾನ್ **ಎನ್. ವಿ. ಪದ್ಮನಾಭಾಚಾರ್ಯರು,** ಟ್ರೈನಿಂಗ್ ಕಾಲೇಜು ಪಂಡಿತರು.

೧೬. ವೇ॥ ಬ್ರ॥ ಶ್ರೀ॥ ವೇದರತ್ನಂ ಮಹಾವಿದ್ವಾನ್, **ಗುಂಡಾವಧಾನಿಗಳು,** ವಿಶ್ರಾನ್ತಯಜುರ್ವೇದ ಪ್ರಧಾನೋಪಾಧ್ಯಾಯರು.

೧೭. ವೇ॥ ಬ್ರ॥ ಶ್ರೀ॥ ಜ್ಯೌತಿಷವಿದ್ವಾನ್, **ಟಿ. ಆರ್. ಚೆನ್ನಿಗರಾಯಪುರಾಣಿಕರು,** ಜ್ಯೌತಿಷಸಹಾಯೋಪಾಧ್ಯಾಯರು

೧೮. ವೇ॥ ಬ್ರ॥ ಶ್ರೀ॥ ಸತ್ಯಮಂಗಲಂ ಸುಬ್ರಹ್ಮಣ್ಯವಾಧ್ಯಾಯರು

೧೯. ವೇ॥ ಬ್ರ॥ ಶ್ರೀ॥ ಅರಮನೆ ದೊಡ್ಡಪುರೋಹಿತರು, ನಂಜುಂಡಶಾಸ್ತ್ರಿಗಳು.

೨೦. ವೇ॥ ಬ್ರ॥ ಶ್ರೀ॥ ಆಸ್ಥಾನವಿದ್ವಾನ್, ಹಾನಗಲ್ಲು ಗಣೇಶಶಾಸ್ತ್ರಿಗಳು

೨೧. ವೇ॥ ಬ್ರ ಶ್ರೀ॥ ಬಿ. ಸೂರ್ಯನಾರಾಯಣಶಾಸ್ತ್ರಿಗಳು,
ಮಹಾರಾಜ ಹೈಸ್ಕೂಲು ಸಂಸ್ಕೃತಪಂಡಿತರು.

೨೨. ಶ್ರೀಯುತ ಎಮ್. ಆರ್. ವೆಂಕಟಸುಬ್ಬಶಾಸ್ತ್ರಿಗಳು, ಎಮ್. ಎ., ಬಿ. ಟಿ.
ಸಂಸ್ಕೃತಕಾಲೇಜು ಪ್ರಿನ್ಸಿಪಾಲರು,

೨೩. ವೇ॥ಬ್ರ॥ಶ್ರೀ॥ ಶ್ರೀಯುತ ಹೆಚ್. ಎನ್. ರಾಘವೇಂದ್ರಾಚಾರ್ಯರು, ಎಮ್. ಎ.,
ಪಿಹೆಚ್. ಡಿ., ಭಾರತತತ್ತ್ವಶಾಸ್ತ್ರದ ಅಸಿಸ್ಟೆಂಟ್ ಪ್ರೊಫೆಸರ್.

೨೪. ವೇ॥ ಬ್ರ॥ ಶ್ರೀ॥ ಶ್ರೌತಿ ಗಣೇಶ ಸುಬ್ರಾಯಭಟ್ಟರು,
ಕೋಡ್ಲೆಕೆರೆ ಗೋಕರ್ಣ, ಕಾರವಾರ ಜಿಲ್ಲೆ.

೨೫. ವೇ॥ ಬ್ರ॥ ಶ್ರೀ॥ ಸುಬ್ರಹ್ಮಣ್ಯಶರ್ಮಾ, ಸಿದ್ದಾಪುರ.

## ಈ ಗ್ರಂಥದ ವಿಷಯದಲ್ಲಿ
# ವಿದ್ವಜ್ಜನರ ಸಮ್ಮತಿ ಪತ್ರಗಳು

### ೧. ಪ್ರಶಸ್ತಿಪತ್ರಮ್

ಶ್ರೀ ಲಕ್ಷ್ಮೀಹಯವದನ ಪರಬ್ರಹ್ಮಣೇ ನಮಃ

೧. ಬೋಧಾಯನೀಯ ಪಾರ್ವಣ ಪೈತೃಕ ತಿಥಿನಿರ್ಣಯಾಭಿಧಂ ಗ್ರನ್ಥಮ್ ।
ಶ್ರೀ ವಿಟ್ಠಲಶಾಸ್ತ್ರಿಬುಧಪ್ರವರೈ ರಚಿತಂ ಸಮಗ್ರಮದ್ರಾಕ್ಷಮ್ ॥

೨. ಮನುಯಾಜ್ಞವಲ್ಕ್ಯಬೋಧಾಯನಯಮಹಾರೀತಶಙ್ಖಮುಖಮುನಯಃ
ಸರ್ವೇಽಪಿ ಸ್ಮೃತಿಕಾರಾಃ ಪಿತೃಕರ್ಮಣಿ ಚಾಪರಾಹ್ಣಸಂಸಕ್ತಾಮ್ ॥

೩. ತಿಥಿಮೇವಾಹುಸ್ಸ್ಪಷ್ಟಂ ಸಮ್ಮತಿಪನ್ನೋ ಹಿ ವಿಷಯೋಽಯಮ್ ।
ಬೋಧಾಯನೋ ನ ಕುತ್ರಾಪ್ಯಾಹ ತಿಥಿಂ ಸಾಯಮನುಷಕ್ತಾಮ್ ॥

೪. ಬೋಧಾಯನ ಭ್ರಾನ್ತಾಜ್ಞಾಃ ಕೇಚನ ಜಲ್ಪನ್ತಿ ಪಿತ್ರ್ಯಕರ್ಮತಿಥಿಮ್ ।
ಸಾಯಂವ್ಯಾಪ್ತಾಂ ನ ಹಿ ತಾಮಪರಾಹ್ಣವ್ಯಾಪಿನೀಂ ಪರಾಕೃಷ್ಯಾಃ ॥

೫. ಇದಮತ್ರೋದಾಹರಣಂ ಷಷ್ಠ್ಯಾಸ್ತೇ ಸಾರ್ಧಸಪ್ತ ~~[illegible]~~ । ವಿಂಶತಿಃ
ತದುಪರಿಜಾತಾಸಪ್ತಮ್ಯಪರೇದ್ಯುರ್ವರ್ತತೇ ಘಟೀರ್ಯಾವತ್ ॥

೬. ದ್ವಾವಿಂಶತಿಮತ್ರಾಹುಃ ಪಿತೃಕರ್ಮಣಿ ಸಪ್ತಮೀ ಪರೇದ್ಯುರ್ವಿಜಾ ।
ಗ್ರಾಹ್ಯಾ ನ ಪೂರ್ವದಿನಜಾ ಸಾ ತಿಥಿರಿತಿ ನಾತ್ರ ಸಂದೇಹಃ ॥

೭. ಏವಂ ಸ್ಥಿತೇ ಚ ಕೇಚನ ವಾಚಾಟಾಃ ಪೂರ್ವಘಸ್ರಜಾ ಗ್ರಾಹ್ಯಾ ।
ಪಿತ್ರ್ಯೇ ಸಾಯಂವ್ಯಾಪ್ತಾ ಸಪ್ತಮ್ಯೇವೇತಿ ಕಥಯನ್ತಿ ॥

೮. ತೇಷಾಂ ಭ್ರಮಾಪನೋದನಕೃತೇ ಕೃತೇಯಂ ಕೃತಿರ್ಬುಧಪ್ರವರೈಃ ।
ಶ್ರೀವಿಟ್ಠಲಾಹ್ವಶಾಸ್ತ್ರಿಭಿರನೇಕವಿದ್ವತ್ಸುಸಮ್ಮತಾ ಸರಲಾ ॥

೯. ಬಹ್ವ್ಯಶ್ಶ್ರುತಯಃ ಸ್ಮೃತಯಃ ಪುರಾಣವಚನಾನಿ ಚ ಪ್ರಮಾಣತಯಾ ।
ಸಮುದಾಹೃತಾನಿ ಶಾಸ್ತ್ರಿಭಿರೇಭಿರಿತಿ ವ್ಯಕ್ತಮೇವೇದಮ್ ॥

೧೦. ಇತಿ ಗರ್ಭಪುರಾಭಿಜನೋ ಜ್ಯೌತಿಷರತ್ನಂ ಕವೀನ್ದ್ರಶೇಷಸುಧೀಃ ।
ಧರ್ಮಾಧಿಕಾರಿಪದಗಃ ಕೃತಿಮೇತಾಂ ಶ್ಲಾಘತೇ ಪ್ರಹೃಷ್ಟಮನಾಃ ॥

ಏವಮಾವೇದಕಃ

ವಿರೋಧಿ ಸಂ॥ ಆಷಾಢ ಕೃಷ್ಣ ೯
ಬುಧವಾಸರಃ,
20—7—1949

ಮಹಾವಿದ್ವಾನ್ ಕರೂರು ಶೇಷಾಚಾರ್ಯಃ
ಜ್ಯೌತಿಷರತ್ನಂ, ಧರ್ಮಾಧಿಕಾರೀ,
ಮಹಾರಾಜ ಸಂಸ್ಕೃತಮಹಾಪಾಠಶಾಲಾ
ವಿಶ್ರಾನ್ತ ಜ್ಯೌತಿಷ ಪ್ರಧಾನೋಪಾಧ್ಯಾಯಃ

## ೨. ಅಭಿಪ್ರಾಯಃ

ಪಾರ್ವಣಶ್ರಾದ್ಧಸ್ಯ ಸರ್ವಸ್ಯ ಪಿಣ್ಡಪಿತೃಯಜ್ಞವಿಕೃತಿತ್ವಾತ್ "ಅಪರಾಹ್ಣೇ ಪಿಣ್ಡಪಿತೃಯಜ್ಞೇನ ಚರನ್ತಿ', ಇತಿ ವಿಹಿತಸ್ಯ ಅಪರಾಹ್ಣಸ್ಯ ಅತಿದೇಶಪ್ರಾಪ್ತತ್ವಾತ್ಸೋಽವಶ್ಯಂ ಗ್ರಾಹ್ಯಃ ಇತಿ ಮೀಮಾಂಸಾ ಮರ್ಯಾದಾ । ಇತ್ಥಂ

ಮೈಸೂರು,
೧೦—೬—೧೯೪೯

ಪಂಡಿತರತ್ನಂ, ಮಹಾವಿದ್ವಾನ್,
ಪಿ. ಆರ್. ಶಿವಸುಬ್ರಹ್ಮಣ್ಯ ಶಾಸ್ತ್ರೀ
ಮಹಾರಾಜ ಸಂಸ್ಕೃತ ಕಾಲೇಜು
ಧರ್ಮಶಾಸ್ತ್ರ ಪ್ರಧಾನೋಪಾಧ್ಯಾಯಃ

## ೩. ಶ್ರೀ ಮಹಾಗಣಪತಿ ಪ್ರಸನ್ನ

ವೇ|| ಶಾ|| ಸಂ|| ಆಸ್ಥಾನ ವಿದ್ವಾನ್ ಎಸ್. ವಿಟ್ಠಲಶಾಸ್ತ್ರಿಗಳ ಸನ್ನಿಧಿಗೆ ಶ್ರೀ ಗಣೇಶ ಸುಬ್ರಾಯಭಟ್ಟ[redacted]ಅನೇಕ ಪ್ರಣಾಮಗಳು

ಮೃತತಿಥಿಯು ಒಂದೇ ದಿನದ ಅಪರಾಹ್ಣದಲ್ಲಿ ಪೂರ್ಣ ಅಥವಾ ಏಕದೇಶವ್ಯಾಪ್ತಿ ಇದ್ದರೆ ಆ ದಿನವೇ ಸಾಂವತ್ಸರಿಕ ಮತ್ತು ಮಾಸಿಕಶ್ರಾದ್ಧವನ್ನು ಬೋಧಾಯನರೂ ಮಾಡುವದು ನಿಸ್ಸಂದಿಗ್ಧವಾದ ವಿಷಯ. ಎರಡು ದಿನಗಳಲ್ಲಿಯೂ ಅಪರಾಹ್ಣವ್ಯಾಪ್ತಿ ಇದ್ದರೆ ಯಾವ ದಿನದಲ್ಲಿ ಅಪರಾಹ್ಣದಲ್ಲಿ ಅಧಿಕವ್ಯಾಪ್ತಿ ಇರುತ್ತದೋ ಆ ದಿನ ಶ್ರಾದ್ಧಕ್ಕೆ ಗ್ರಾಹ್ಯ. ಎರಡೂ ದಿನ ಅಪರಾಹ್ಣದಲ್ಲಿ ಸಮವ್ಯಾಪ್ತಿಯಿದ್ದರೆ ಅಥವಾ ಎರಡೂ ದಿನ ಪೂರ್ಣ ಅಪರಾಹ್ಣವ್ಯಾಪ್ತಿಯಿದ್ದರೆ ಮುಂಚಿನ ದಿನ ಮಾಡುತ್ತಾರೆ. ಅಥವಾ ಮೃತತಿಥಿಯ ಪರಮ ಘಟಿಗಿಂತ ಮುಂದಿನ ತಿಥಿಯ ಪರಮಘಟಿಯು ಕಮ್ಮಿಯಿದ್ದರೆ ಪೂರ್ವದಿನದಲ್ಲಿ ಇಲ್ಲವಾದರೆ ಪರದಿನದಲ್ಲಿ ಮಾಡುತ್ತಾರೆ. ಎರಡೂ ದಿನ ಅಪರಾಹ್ಣವ್ಯಾಪ್ತಿ ಇಲ್ಲದಿದ್ದರೆ ಮಾತ್ರ ಗೌಣಕಾಲವೆಂದು ಪರಿಗೃಹೀತವಾದ ಸಾಯಾಹ್ನದ ಸಂಪೂರ್ಣ ಅಥವಾ ಏಕದೇಶವ್ಯಾಪ್ತಿ ಇರುವ ಪೂರ್ವದಿನದಲ್ಲಿ ಪಾರ್ವಣಶ್ರಾದ್ಧವನ್ನು ಬೋಧಾಯನರು ಮಾಡುತ್ತಾರೆ. ನಮ್ಮಲ್ಲಿ ಈ ರೀತಿ ಆಚರಣೆ ಇರುತ್ತದೆ. ಇದು ಸ್ಮೃತಿವಚನಗಳ ಆಧಾರದಿಂದ ವಿರಚಿತವಾದ "ಕಾಲಮಾಧವ" ಆದಿ ಗ್ರಂಥಗಳಲ್ಲಿ ಹೇಳಿರುತ್ತದೆ ತರೀಕೆರೆ ಪ್ರಾಂತದ ಆಚರಣೆಗೆ ಏನಾದರೂ ಉಕ್ತಿ ಇರುವ ಸಂಭವ ಕಡಿಮೆ ಇರಬೇಕು.

ಆಶ್ವಿನ ವದ್ಯ ೩ ರವಿವಾರ
ಶ್ರೀ ಕ್ಷೇತ್ರ ಗೋಕರ್ಣ

ಇಂತೀ ಸಾಷ್ಟಾಂಗ ಪ್ರಣಾಮಗಳು
ಗೋಕರ್ಣ ಗಣೇಶ ಸುಬ್ರಾಯಭಟ್ಟ
ಕೋಡ್ಲೆಕೆರೆ.

# ಳ. ಶ್ರೀರಸ್ತು

ವಿದಿತಮೇವೇದಂ ಸರ್ವೇಷಾಂ ಪಿತ್ರೋಃ ಪ್ರತ್ಯಾಬ್ದಿಕಂ ಅಪರಾಹ್ಣವ್ಯಾಪಿನ್ಯಾಮೇವ ತಿಥೌ ಕರ್ತವ್ಯಮಿತಿ । ತತ್ರ ಪ್ರಮಾಣಭೂತಾನಿ ವಚನಾನಿ ನಿಬನ್ಧೇಷು ಪ್ರಸಿದ್ಧಾನ್ಯೇವೇತಿ ನಾತ್ರೋದಾಹ್ರಿಯನ್ತೇ । ಯದ್ಯಪಿ "ಸಿನೀವಾಲ್ಯಪರಾಹ್ಣೇ ಚೇದೃಗಾಪಸ್ತಮ್ಬಸಾಮಿನಾಮ್ । ಸಾಯಾಹ್ನೇ ದ್ವಿತ್ರಿನಾಡೀ ಚೇತ್ಸ್ಯಾ ಬೋಧಾಯನ ಕಾಣ್ವಯೋಃ ॥ ಚತುರ್ದಶೀ ದಿನಾನ್ತೇ ತು ಚತುಸ್ತ್ರಿಘಟಿಕಾ ಯದಿ । ಅಮಾಭೂತೇ ಚ ಕರ್ತವ್ಯಂ ಶ್ರಾದ್ಧಂ ವಾಜಸನೇಯಿಭಿಃ" ॥ ಇತ್ಯಾದಿವಚನಮಹಿಮ್ನಾ ಸಾಯಾಹ್ನವ್ಯಾಪಿನ್ಯಾಮೇವ ತಿಥೌ ಬೋಧಾಯನಕಾಣ್ವಯೋಃ ಶ್ರಾದ್ಧಂ ಕರ್ತವ್ಯಮಿತಿ ಪ್ರತೀಯತೇ ತಥಾಪಿ ತಚ್ಛ್ರಾದ್ಧಂ ದರ್ಶಶ್ರಾದ್ಧರೂಪಮೇವ; ನ ತು ಪಿತ್ರೋಸ್ಸಾಂವತ್ಸರಿಕಂ ಶ್ರಾದ್ಧಮ್ । "ಉದಿತೇ ದೈವತಂ ಭಾನೌ ಪಿತ್ರ್ಯಂ ಚಾಸ್ತಮಿತೇ ರವೌ । ದ್ವಿಮುಹೂರ್ತಂ ತ್ರಿರಹ್ನಶ್ಚ ಸಾ ತಿಥಿರ್ಹವ್ಯಕವ್ಯಯೋಃ" । ಇತಿ ಬೋಧಾಯನವಚನಮಪಿ ಸಾಮಾನ್ಯಶಾಸ್ತ್ರತ್ವೇನ ಕಾಲಮಾಧವೀಯೇ ವ್ಯಾಖ್ಯಾತಂ ವರ್ತತೇ । ತಥಾ ಚ ಸಾಮಾನ್ಯವಿಶೇಷಶಾಸ್ತ್ರಪರ್ಯಾಲೋಚನಾಯಾಂ ಬೋಧಾಯನಸೂತ್ರಾಣಾಮಪಿ ಪಿತ್ರೋಃ ಪ್ರತ್ಯಾಬ್ದಿಕಂ ಶ್ರಾದ್ಧಂ ಅಪರಾಹ್ಣವ್ಯಾಪಿನ್ಯಾಮೇವ ತಿಥೌ ಕರ್ತವ್ಯಮ್; ನ ತು ತದ್ವ್ಯಾಪ್ತಿರಹಿತಸಾಯಾಹ್ನವ್ಯಾಪ್ತಿಯುತಾಯಾಂ ತಿಥೌ । ದರ್ಶಶ್ರಾದ್ಧಂ ಪರಂ ಸಾಯಾಹ್ನವ್ಯಾಪ್ತೌ ಬೋಧಾಯನಕಾಣ್ವಯೋಃ ಕರ್ತವ್ಯಮೇವೇತಿ ವಿಶೇಷೋಽವಗಮ್ಯತೇ । ಆಚಾರೋಽಪಿ ಏವಮೇವ ದೃಶ್ಯತೇ । ಕೇಚಿತ್ತು ದರ್ಶಶ್ರಾದ್ಧೇ ಪ್ರವೃತ್ತಾನಿ ಶಾಸ್ತ್ರವಚನಾನಿ ಉಪಲಕ್ಷಣೀಕೃತ್ಯ ಸರ್ವಾಸ್ವಪಿ ತಿಥಿಷು ಸರ್ವಾಣ್ಯಪಿ ಶ್ರಾದ್ಧಾನಿ ಸಾಯಾಹ್ನವ್ಯಾಪ್ತಾನಿ ಬೋಧಾಯನಸೂತ್ರಾಣಾಂ ಕರ್ತವ್ಯಾನೀತಿ ಮನ್ಯನ್ತೇ । ತದಸಾಂಗತ್ಯಂ ಸುಗೃಹೀತನಾಮಾನ ಆಸ್ಥಾನವಿದ್ವಾಂಸಃ ವಿಟ್ಠಲಶಾಸ್ತ್ರಿಣಃ ವಿಸ್ತರೇಣ ಉದಭಾವಯನ್ । ಅತಃ ತಲ್ಲಿಖಿತಗ್ರನ್ಥಪಠನೇನ ಸರ್ವಂ ವ್ಯಕ್ತಂ ಭವೇತ್ ।

ಇತಿ—ಶಂ—ಇತಿ,

ಮೈಸೂರು,
22-7-49

ಪಣ್ಡಿತರತ್ನಂ, ಪಣ್ಡಿತರಾಜ, ಆಸ್ಥಾನ ಮಹಾವಿದ್ವಾನ್,
ಮಹಾರಾಜ ಸಂಸ್ಕೃತ ಪಾಠಶಾಲಾಯಾಂ
ಅದ್ವೈತವೇದಾನ್ತ ಪ್ರಧಾನಾಧ್ಯಾಪಕಃ
ಎಮ್. ಎಸ್. ವೇಂಕಟೇಶಶಾಸ್ತ್ರೀ.

—o—

## ೫. ಅಭಿಪ್ರಾಯಪತ್ರಮ್

ಅತ್ರ ಬೋಧಾಯನಮತಾನುಗಾಃ ಅಮಾವಾಸ್ಯಾವಿಷಯೇ ಕೇವಲಂ ಸಿನೀವಾಲೀಮನುಸರನ್ತಿ । ತದ್ಭಿನ್ನವಿಷಯಕಪ್ರತ್ಯಾಬ್ದಿಕಾದಿಶ್ರಾದ್ಧವಿಷಯೇ ಅಪರಾಹ್ಣವ್ಯಾಪ್ತಿಯುಕ್ತತತ್ತತ್ತಿಥೀನ್ಪರಿಗೃಹ್ಯ ಶ್ರಾದ್ಧಾನುಷ್ಠಾನಂ ಕುರ್ವನ್ತಿ । ಶ್ರಾದ್ಧತಿಥೇರಪರಾಹ್ಣವ್ಯಾಪ್ತಿಮತ್ತ್ವಂ ಬೋಧಾಯನಾಚಾರ್ಯಾಣಾಮಭಿಮತಮಿತಿ ಸ್ಮೃತಿವಚನೇನೈವ ಜ್ಞಾಯತೇ । ಬೋಧಾಯನಸ್ಮೃತೌ

ಅಪರಾಹ್ಣದ್ವಯವ್ಯಾಪಿನ್ಯತೀತಸ್ಯ ಚ ಯಾ ತಿಥಿಃ ।
ಕ್ಷಯೇ ಪೂರ್ವಾ ತು ಕರ್ತವ್ಯಾ ವೃದ್ಧೌ ಕಾರ್ಯಾ ತಥೋತ್ತರಾ ॥ ಇತಿ

ಅನೇನ ವಚನೇನ ದಿನದ್ವಯೇಽಪರಾಹ್ಣೇ ಸಂಪೂರ್ಣವ್ಯಾಪ್ತಿಸದ್ಭಾವೇ ಪೂರ್ವತ್ರ ಪರತ್ರೇತಿ ತಿಥೇರ್ವೃದ್ಧಿಕ್ಷಯಸಮತ್ವಾಂಗೀಕಾರೇಣ ನಿರ್ಣೀತತ್ವಾತ್ ಅಪರಾಹ್ಣಸ್ಯೈವ ಮುಖ್ಯಕಾಲತ್ವಂ ಅಸ್ತಮಯವ್ಯಾಪ್ತಿತ್ವಸ್ಯ ನಾಭಿಪ್ರೇತತ್ವಂ ಚ ಸ್ಪಷ್ಟಂ ಭವತಿ । ಕಿಂ ಚ ತಿಥೇಸ್ಸಾವಯವ ಷಡ್ಘಟಿಕಾಕ್ಷಯ ಏವ । ತದಧಿಕಕ್ಷಯೋ ನ ಭವತಿ । ಅತಃ ದಿನದ್ವಯೇಽಪ್ಯಪರಾಹ್ಣವ್ಯಾಪ್ತ್ಯಭಾವೇ ಮನುಃ

ನ ದ್ವ್ಯಹವ್ಯಾಪಿನೀ ಚೇತ್ಸ್ಯಾನ್ಮೃತಾಹಸ್ಯ ತು ಯಾ ತಿಥಿಃ ।
ಪೂರ್ವವಿದ್ಧೈವ ಕರ್ತವ್ಯಾ ತ್ರಿಮುಹೂರ್ತಾ ಭವೇದ್ಯದಿ ॥

ಇತ್ಯಾದಿ ವಚನಜಾಲಂ ತು ಸಾಯಂ ತ್ರಿಮುಹೂರ್ತವ್ಯಾಪ್ತಿಯುಕ್ತತಿಥೇಃ ದಿನದ್ವಯೇಽಪ್ಯಪರಾಹ್ಣವ್ಯಾಪ್ತ್ಯಭಾವೇ ಗ್ರಾಹ್ಯತ್ವಬೋಧಕಪರಂ ನ ತು ಅಪರಾಹ್ಣವ್ಯಾಪ್ತಿತ್ವಂ ವಿಹಾಯ ಕೇವಲ ಸಾಯಾಹ್ನ ಸ್ವೀಕಾರಪರಮ್ । ಕಿಞ್ಚ ಪೂರ್ವೇದ್ಯುಸ್ಸಾಯಂ ತ್ರಿಮುಹೂರ್ತನ್ಯೂನತಾ ಪರೇದ್ಯುರಪರಾಹ್ಣವ್ಯಾಪ್ತ್ಯಭಾವಃ ಇತ್ಥಂ ಯದಿ, ಗೋಭಿಲಃ ।

ತ್ರಿಮುಹೂರ್ತಾ ನ ಚೇದ್ಗ್ರಾಹ್ಯಾ ಪರೈವ ಕುತುಪೇ ಹಿ ಸಾ ।
ಕುರ್ವೀತ ಕುತುಪೇ ಶ್ರಾದ್ಧಂ ಸಾಯಾಹ್ನವ್ಯಾಪಿನೀ ನ ಚೇತ್ ॥

ಅತ್ರ ಸಾಯಾಹ್ನವ್ಯಾಪಿನೀತ್ಯಸ್ಯ ಪದಸ್ಯ ತ್ರಿಮುಹೂರ್ತಸಾಯಾಹ್ನವ್ಯಾಪಿನೀತ್ಯರ್ಥಃ ಇತಿ ॥ ಏತದ್ದೇಶೀಯಾ ದ್ರಾವಿಡದೇಶೀಯಾಶ್ಚ ಬೋಧಾಯನಮತಾನುಸಾರಿಣಃ ಅಮಾವಾಸ್ಯಾಂ ವಿಹಾಯ ಪಾರ್ವಣಶ್ರಾದ್ಧತಿಥೀನಾಮಪರಾಹ್ಣಕಾಲವ್ಯಾಪಿತ್ವಮೇವಾನುಸರನ್ತೀಃ

ಶುಭಮ್

ಕೊಳ್ಳೇಗಾಲ
28-6-1949

ಜ್ಯೋತಿಸ್ಸಿದ್ಧಾನ್ತಕೇಸರೀ ಜ್ಯೌತಿಷವಿದ್ವಾನ್
ಆಸ್ಥಾನವಿದ್ವಾನ್
ವೆಂಕಟಸುಬ್ಬಾಶಾಸ್ತ್ರೀ

## ೬. ನಕಲು

No O. C. 86150 A. D.
14th June 1950

Office of the Officer in Charge
Sringeri Mutt & its Properties
Sringeri, Dated 12-6-1950

ವೇ|| ಬ್ರ|| ಶ್ರೀ|| ವಿದ್ವಾನ್ ವಿಟ್ಠಲಶಾಸ್ತ್ರಿಗಳವರಿಗೆ,

ನೀವು 30-5-50ರಲ್ಲಿ ಬರೆದುಕೊಂಡಿದ್ದ ವಿಜ್ಞಾಪನಾಪತ್ರವನ್ನು ಶ್ರೀ ಬಾಲಯತೀಂದ್ರರಲ್ಲಿ ಸಮರ್ಪಿಸಲಾಯಿತು. ಶ್ರೀಗಳವರ ಆಸ್ಥಾನ ವಿದ್ವಾಂಸರಲ್ಲಿ ನೀವು ಹಿಂದೆ ಕಳುಹಿಸಿದ್ದ ಲೇಖನವನ್ನು ವಿಮರ್ಶಿಸಿ ಅಪರಾಹ್ಣ ವ್ಯಾಪ್ತತಿಥಿಯಲ್ಲೇ ಪಾರ್ವಣಶ್ರಾದ್ಧವನ್ನು ಮಾಡುವದು ಉಚಿತವೆಂದು ನಿಶ್ಚಯಿಸಿ ತಮಗೆ ಈ ಅಂಶವನ್ನು ತಿಳಿಸುವಂತೆ ಅಪ್ಪಣೆಯಾಗಿರುವದನ್ನು ಸೂಚಿಸಲಾಗಿರುತ್ತೆ. ಇಲ್ಲಿ ವಿಮರ್ಶೆಮಾಡಿ ನಿರ್ಣಯಮಾಡಿದ ಅಂಶಗಳನ್ನು ಇದರೊಂದಿಗೆ ಬೇರೆ ಕಾಗದದಲ್ಲಿ ವಿಸ್ತೃತವಾಗಿ ಬರೆದುಕಳುಹಿಸಲಾಗಿದೆ. ಇತಿ

**C. Suryanarayana Rao**
Officer in charge
Sringeri Mutt & its Properties

Sringeri
12-6-1950

ಶ್ರೀ

## ಪಾರ್ವಣಶ್ರಾದ್ಧತಿಥಿನಿರ್ಣಯ

೧. ಪಂಚಧಾವಿಭಕ್ತವಾದ ಅಹಃಪ್ರಮಾಣದ ಚತುರ್ಥಭಾಗವೇ ಅಪರಾಹ್ಣವು. ಈ ಅಪರಾಹ್ಣವೇ ಗ್ರಹಣಾದಿ ನೈಮಿತ್ತಿಕ ಶ್ರಾದ್ಧವ್ಯತಿರಿಕ್ತವಾದ ಪಾರ್ವಣಶ್ರಾದ್ಧಕ್ಕೆ ಮುಖ್ಯಕಾಲವಾಗಿರುವದು. ಮತ್ತು ಕುತುಪಕಾಲ (ಅಹಸ್ಸಿನ ಅಷ್ಟಮ ಮುಹೂರ್ತ) ವೇ ಉಪಕ್ರಮಕಾಲವಾಗಿರುವದು. ಶ್ರುತಿಸ್ಮೃತಿಸಿದ್ಧವಾದ ಸಕಲ ಶಿಷ್ಟಜನಾದೃತವಾದ ಪಂಚಧಾವಿಭಾಗಪಕ್ಷವೇ ಗ್ರಾಹ್ಯವಾದದು.

೨. ಸಾಯಾಹ್ನವೆಂದರೆ ಮೇಲೆ ಹೇಳಿದಂತೆ ಪಂಚಧಾವಿಭಕ್ತವಾದ ಅಹಸ್ಸಿನ ತ್ರಿಮುಹೂರ್ತಾತ್ಮಕವಾದ ಪಂಚಮಭಾಗವು. ಅಪರಾಹ್ಣದ್ವಯದಲ್ಲೂ ಶ್ರಾದ್ಧತಿಥಿಯು ಇಲ್ಲದಿದ್ದಲ್ಲಿ ಇಂತಹ ಸಾಯಾಹ್ನವನ್ನು ತಿಥಿಯು ಪೂರ್ಣವಾಗಿ ವ್ಯಾಪಿಸಿದ್ದರೆ ಅದೇ ಶ್ರಾದ್ಧತಿಥಿಯಾಗುವದು. ಇಂತಹ ಸಾಯಾಹ್ನದ ಏಕದೇಶವ್ಯಾಪ್ತಿ ಇದ್ದ ತಿಥಿಯು ಶ್ರಾದ್ಧತಿಥಿಯಾಗುವದಿಲ್ಲ. ಸಾಯಾಹ್ನೈಕದೇಶಸ್ಪರ್ಶವಿದ್ದಲ್ಲಿ ಅಪರಾಹ್ಣವ್ಯಾಪ್ತಿ ಇರುವ ಪರದಿನವೇ ಶ್ರಾದ್ಧತಿಥಿಯಾಗುವದು.

೩. ಬೋಧಾಯನರಿಗೆ ಅಷ್ಟಾವಿಂಶತಿನಾಡೀಯುಕ್ತವಾದ ತಿಥಿಯು ಗ್ರಾಹ್ಯವೆಂದೂ, ಆಪಸ್ತಂಬರಿಗೆ ಸಪ್ತವಿಂಶತಿನಾಡೀಯುಕ್ತವಾದ ತಿಥಿಯು ಗ್ರಾಹ್ಯವೆಂದೂ ಕ್ವಚಿತ್ ಹೇಳಿದ್ದರೂ ಅದು ಪೂರ್ಣತಿಥಿಯ ಪ್ರಶಂಸಾಪರವಾಕ್ಯವು. ಅಪರಾಹ್ಣವ್ಯಾಪ್ತತಿಥಿಯೇ ಬೋಧಾಯನರಿಗೂ ಗ್ರಾಹ್ಯವೆಂದು ಬೋಧಾಯನಶಾಖೆಯವರೇ ಹೇಳಿರುತ್ತಾರೆ.

೪. ಉದಯದಿಂದಾಗಲೀ ಅಥವಾ ಅಪರಾಹ್ಣದಿಂದಾಗಲೀ ಪ್ರಾರಂಭಿಸಿ ಸಾಯಾಹ್ನದಲ್ಲೂ ಇದ್ದಲ್ಲಿ ಆ ತಿಥಿಯು ಗ್ರಾಹ್ಯವೆಂಬುದು ಶಾಸ್ತ್ರಸಮ್ಮತವೇ ಆಗಿರುತ್ತದೆ. ಅಪರಾಹ್ಣದಲ್ಲಿಲ್ಲದೇ ಕೇವಲ ಸಾಯಾಹ್ನದಲ್ಲಿದ್ದ ತಿಥಿಯು ಗ್ರಾಹ್ಯವಲ್ಲ.

೫. ಪರದಿನದಲ್ಲಿ ಅಪರಾಹ್ಣವ್ಯಾಪ್ತಿ ಇದ್ದರೂ ಪೂರ್ವದಿನದಲ್ಲಿ ಕೇವಲ ಸಾಯಾಹ್ನವ್ಯಾಪ್ತಿ ಇರುವ ತಿಥಿಯಲ್ಲಿ ಶ್ರಾದ್ಧವನ್ನಾಚರಿಸುವದು ಶಾಸ್ತ್ರಸಮ್ಮತವಾಗಿರುವದಿಲ್ಲವೆಂದು ತೋರುತ್ತದೆ.

೬. ಈ ವಿಷಯಗಳು ವೈದ್ಯನಾಥೀಯಾದಿ ಗ್ರಂಥಗಳಲ್ಲಿ ವಿಶದವಾಗಿರುತ್ತವೆ.

ಇತಿ ಶಂ.

**C. Suryanarayana Rao**
Officer in charge
Sringeri Mutt & its Properties.

॥ ಶ್ರೀ ದಿಗ್ವಿಜಯರಾಮೋ ವಿಜಯತೇ ॥

ಬ್ರ॥ ಶ್ರೀ॥ ವೇದಾಂತಶಿರೋಮಣೀತ್ಯಾದಿ ಬಿರುದಾಂಕಿತರಾದ

**ಆಸ್ಥಾನವಿದ್ವಾನ್ ಎಸ್. ವಿಟ್ಠಲಶಾಸ್ತ್ರಿಗಳವರಿಗೆ**

ಹೊಳೆನರಸೀಪುರದ ಅಧ್ಯಾತ್ಮಪ್ರಕಾಶಕಾರ್ಯಾಲಯದ

**ವೈ. ನರಸಪ್ಪನ ವಿಜ್ಞಾಪನೆಗಳು—**

ತಾವು ಇಲ್ಲಿಗೆ ದಯಮಾಡಿಸಿದ್ದಾಗ ಶ್ರೀ ಸಚ್ಚಿದಾನಂದಸರಸ್ವತೀಸ್ವಾಮಿಗಳವರ ಸನ್ನಿಧಿಯಲ್ಲಿ ತಾವು ರಚಿಸಿರುವ "ಪಾರ್ವಣಶ್ರಾದ್ಧತಿಥಿನಿರ್ಣಯ" ಎಂಬ ಪ್ರಕರಣವನ್ನು ಓದಿದ್ದು ಸರಿಯಷ್ಟೆ. ಅದರ ವಿಷಯಕ್ಕೆ ತಮಗೆ ಹೀಗೆಂದು ಬರೆಯಬೇಕೆಂದು ನನಗೆ ಶ್ರೀಶ್ರೀ ಗಳವರು ಅಪ್ಪಣೆ ಮಾಡಿರುತ್ತಾರೆ:—

ಈ ಚಿಕ್ಕ ಗ್ರಂಥವು ಶ್ರುತಿಸ್ಮೃತಿನಿಬಂಧಗ್ರಂಥಗಳ ಆಧಾರದ ಮೇಲೆ ಬರೆದದ್ದಾಗಿರುತ್ತದೆ. ಶಿಷ್ಟಾಚಾರಸಮ್ಮತಿಯನ್ನೂ ಹೇರಳವಾಗಿ ಕೊಟ್ಟು ಎಲ್ಲಾ ವಚನಗಳಿಗೂ ಏಕವಾಕ್ಯತೆಯನ್ನು ಮಾಡುವದಕ್ಕೆ ನೀವು ಮಾಡಿರುವ ಪ್ರಯತ್ನವು ಅಭಿನಂದನೀಯವಾಗಿದೆ. ಮುಖ್ಯವಾಗಿ ಕರ್ಮವು ಶಾಸ್ತ್ರೈಕಪ್ರಮಾಣದಿಂದ ನಿರ್ಣಯಿಸತಕ್ಕದ್ದಾದ್ದರಿಂದ ಈ ವಿಷಯದಲ್ಲಿ ರಾಗದ್ವೇಷಾದಿಗಳಿಗೆ ಎಡೆಗೊಡದೆ ಕರ್ಮಶ್ರದ್ಧೆಯುಳ್ಳವರೆಲ್ಲರೂ ತತ್ತ್ವವನ್ನು ಗ್ರಹಿಸಿ ಅನುಷ್ಠಾನಕ್ಕೆ ತರಲಿ ಎಂದು ಶ್ರೀಶ್ರೀಗಳವರು ಹಾರೈಸುತ್ತಾರೆ.

ಹೊಳೆನರಸೀಪುರ,
25-7-1950

ಇಂತೀ
**ವೈ. ನರಸಪ್ಪ**
ಅಧ್ಯಕ್ಷ, ಅ. ಪ್ರ. ಕಾರ್ಯಾಲಯ.

# ಪಾರ್ವಣ ಶ್ರಾದ್ಧ ತಿಥಿ ನಿರ್ಣಯ

ಪಾರ್ವಣಶ್ರಾದ್ಧವನ್ನು ಮೃತತಿಥಿಯ ದಿನದಲ್ಲಿ ಮಾಡಬೇಕೆಂಬದು ಸಾಮಾನ್ಯನಿಯಮ; ಆದರೆ ತಿಥಿಯು ಶ್ರಾದ್ಧದಿನದಲ್ಲಿ ಯಾವ ಭಾಗದಲ್ಲಿ ಇರಬೇಕೆಂಬುವದಕ್ಕೆ ವಿಶೇಷವಚನಗಳು ಬೇಕಾಗುತ್ತವೆ. ಈ ಬಗ್ಗೆ ಶ್ರುತಿಸ್ಮೃತಿಗಳಲ್ಲಿ ವಿಹಿತವಾಗಿರುವದು ಅಪರಾಹ್ಣವ್ಯಾಪ್ತತಿಥಿಯು. ಇದಕ್ಕೆ ಪ್ರಮಾಣವಚನಗಳನ್ನು ಈ ಕೆಳಗೆ ಉದಾಹರಿಸುತ್ತೇನೆ:

## ೧. ಶ್ರುತಿ

ಶತಪಥಬ್ರಾಹ್ಮಣ ಅಧ್ಯಾಯ ೧ ಬ್ರಾಹ್ಮಣ ೩ ಅವಾನ್ತರಬ್ರಾಹ್ಮಣ ೩ ಮಂತ್ರ ೮—

**"ಅಪರಾಹ್ಣಃ ಪಿತೃಣಾಮ್ | ತಸ್ಮಾದಪರಾಹ್ಣೇ ದದಾತಿ"**

ಅರ್ಥ :— ಅಪರಾಹ್ಣವು ಪಿತೃಗಳದ್ದು ; ಆದುದರಿಂದ ಅಪರಾಹ್ಣದಲ್ಲಿ (ಪಿಂಡಾದಿಗಳನ್ನು) ಕೊಡಬೇಕು.

## ೨. ಸೂತ್ರ

ಬೋಧಾಯನ ಸೂತ್ರಕಾರರು ಪಾರ್ವಣಶ್ರಾದ್ಧದ ವಿಷಯದಲ್ಲಿ ಶ್ರಾದ್ಧತಿಥಿನಿರ್ಣಯವನ್ನು ಮಾಡಿಲ್ಲ. ಆದುದರಿಂದ ಶಾಖಾಂತರದಲ್ಲಿ ಹೇಳಿರುವದಕ್ಕೆ ಅವರು ವಿರುದ್ಧರಾಗಿದ್ದಾರೆಂಬುದಕ್ಕೆ ಆಧಾರವಿಲ್ಲ. **"ಅನುಕ್ತಮನ್ಯತೋ ಗ್ರಾಹ್ಯಮ್"** ಎಂಬ ನ್ಯಾಯದಿಂದ ಆಪಸ್ತಂಬಾದಿಸೂತ್ರಕಾರರು ಹೇಳಿರುವ ಅಪರಾಹ್ಣವನ್ನೇ ಬೋಧಾಯನರೂ ಗ್ರಹಿಸಬೇಕು.

ಆಪಸ್ತಂಬಧರ್ಮಸೂತ್ರದ ದ್ವಿತೀಯಪ್ರಶ್ನೆಯ ಸಪ್ತಮ ಪಟಲದಲ್ಲಿ **"ಅಪರಪಕ್ಷಸ್ಯ ಅಪರಾಹ್ಣಃ ಶ್ರೇಯಾನ್"** (ಅಪರಪಕ್ಷಕ್ಕೆ ಅಂದರೆ ಲಕ್ಷಣೆಯಿಂದ ಪಿತೃಕರ್ಮಕ್ಕೆ ಅಪರಾಹ್ಣವು ಉತ್ತಮವಾದದ್ದು) ಎಂದು ಸಾಮಾನ್ಯವಾಗಿ ಅಪರಾಹ್ಣವನ್ನು ಹೇಳಿರುತ್ತದೆ.

## ೩. ಸ್ಮೃತಿಗಳು

ಬೋಧಾಯನಸ್ಮೃತಿಯಲ್ಲಿ ಶ್ರಾದ್ಧತಿಥಿನಿರ್ಣಯವನ್ನೂ ಕಾಲನಿರ್ಣಯವನೂ ಮಾಡಿಲ್ಲ; ಆದರೆ "ಪುರುಷಾರ್ಥಚಿಂತಾಮಣಿ"ಯಲ್ಲಿಯೂ "ಕಾಲಮಾಧವೀಯ"ದಲ್ಲಿಯೂ ಒಂದು ತಿಥಿಯು ಎರಡು ದಿನಗಳಲ್ಲಿಯೂ ಅಪರಾಹ್ಣದಲ್ಲಿ ಸಮವ್ಯಾಪ್ತಿಯುಳ್ಳದ್ದಾಗಿದ್ದರೆ ಯಾವ ದಿನವನ್ನು ಗ್ರಹಿಸಬೇಕು? ಎಂಬ ಪ್ರಶ್ನೆಯನ್ನು ತೆಗೆದು ಅದಕ್ಕೆ ಉತ್ತರವಾಗಿ ಬೋಧಾಯನರ ವಾಕ್ಯವು ಒಂದು ಹೀಗಿದೆ :

**ಅಪರಾಹ್ಣದ್ವಯವ್ಯಾಪಿನ್ಯತೀತಸ್ಯ ಚ ಯಾ ತಿಥಿ: ।**
**ಕ್ಷಯೇ ಪೂರ್ವಾ ಚ ಕರ್ತವ್ಯಾ ವೃದ್ಧೌ ಕಾರ್ಯಾ ತಥೋತ್ತರಾ ॥**

ಅರ್ಥ :— ಮೃತನ ತಿಥಿಯು ಎರಡು ದಿನಗಳಲ್ಲಿಯೂ ಅಪರಾಹ್ಣದಲ್ಲಿ (ಸಮ) ವ್ಯಾಪ್ತಿಯುಳ್ಳದ್ದಾಗಿದ್ದರೆ (ಮುಂದಿನ ತಿಥಿಯು) ಕ್ಷಯತಿಥಿಯಾಗಿದ್ದರೆ ಪೂರ್ವತಿಥಿಯೂ ವೃದ್ಧಿತಿಥಿಯಾಗಿದ್ದರೆ ಉತ್ತರತಿಥಿಯೂ ಗ್ರಾಹ್ಯವು.

ಇದರಿಂದ ಇತರರಂತೆ ಬೋಧಾಯನರೂ ಅಪರಾಹ್ಣವ್ಯಾಪ್ತತಿಥಿಯನ್ನೇ ಪಾರ್ವಣಶ್ರಾದ್ಧತಿಥಿಯನ್ನಾಗಿ ಹೇಳಿರುತ್ತಾರೆಂದು ಗೊತ್ತಾಗುತ್ತದೆ. ಪ್ರತ್ಯೇಕವಾಗಿ ಬೋಧಾಯನರಿಗೇ ಎಲ್ಲಿಯೂ ಇನ್ನು ಏನನ್ನೂ ಈ ವಿಷಯದಲ್ಲಿ ಹೇಳಿಲ್ಲ.

೧. ನಿರ್ಣಯಸಿಂಧುಃ ೩೩೫ ; ಕಾಲಾದರ್ಶೇ —

**ಪ್ರತ್ಯಾಬ್ದಿಕೇತ್ವೇವಮೇವ ತಿಥಿರ್ಗ್ರಾಹ್ಯಾಪರಾಹ್ಣಿಕೀ ।**
**ಉಭಯತ್ರ ತಥಾತ್ವೇ ತು ಮುಹರ್ತ್ತೇನ ವಿನಿರ್ಣಯ: ॥**

ಅರ್ಥ :— ಪ್ರತ್ಯಾಬ್ದಿಕಶ್ರಾದ್ಧದಲ್ಲಿಯೂ ಇದೇ ರೀತಿಯಾಗಿ ಅಪರಾಹ್ಣವ್ಯಾಪ್ತಿಯುಳ್ಳ ತಿಥಿಯನ್ನೇ ಗ್ರಹಿಸಬೇಕು. ಎರಡು ದಿನಗಳಲ್ಲಿಯೂ ಅಪರಾಹ್ಣವ್ಯಾಪ್ತಿಯಿದ್ದರೆ ಹೆಚ್ಚು ವ್ಯಾಪ್ತಿಯುಳ್ಳ ತಿಥಿಯನ್ನು ಗ್ರಹಿಸಬೇಕು.

೨. (ನಿರ್ಣಯಸಿಂಧುಃ ೩೩೫) ಪೃಥ್ವೀಚಂದ್ರೋದಯೇ ವೃದ್ಧಗೌತಮಃ —

**ಅಪರಾಹ್ಣವ್ಯಾಪಿನೀ ಯಾ ಪಾರ್ವಣೇ ಸಾ ತಿಥಿರ್ಭವೇತ್ ॥**

ಅರ್ಥ :— ಯಾವ ತಿಥಿಯು ಅಪರಾಹ್ಣವ್ಯಾಪಿನಿಯಾಗಿದೆಯೋ ಆ ತಿಥಿಯು ಪಾರ್ವಣಶ್ರಾದ್ಧತಿಥಿಯಾಗುತ್ತದೆ.

೩. ( ಕಾಲಮಾಧವೀಯಃ ೧೦೦ ) ಹಾರೀತಃ —

**ಅಪರಾಹ್ಣ: ಪಿತೄಣಾಂ ತು ಯಾಪರಾಹ್ಣಾನುಯಾಯಿನೀ।**
**ಸಾ ಗ್ರಾಹ್ಯಾ ಪಿತೃಕಾರ್ಯೇಷು ನ ಪೂರ್ವಾಸ್ತಾನುಯಾಯಿನೀ ॥**

ಅರ್ಥ :— 'ಪಿತೃಗಳಿಗೆ ಅಪರಾಹ್ಣವು' ಎಂಬುದಾಪರೋ ಯಾವ ತಿಥಿಯು ಅಪರಾಹ್ಣವನ್ನು ಅನುಸರಿಸಿ ಸಾಯಾಹ್ನದಲ್ಲಿಯೂ ಇರುತ್ತದೆಯೋ ಆ ತಿಥಿಯು ಪಿತೃಕಾರ್ಯಕ್ಕೆ ಗ್ರಾಹ್ಯತಿಥಿಯು. ಅಷ್ಟವನ್ನು ಅನುಸರಿಸಿದ ಪೂರ್ವತಿಥಿಯು ಗ್ರಾಹ್ಯತಿಥಿಯಲ್ಲ.

೪. (ಧರ್ಮಪ್ರವೃತ್ತಿಃ ೩೦೧) ಸಿನ್ಧುಸಾರೇ—

**ಪಾರ್ವಣೇ ತ್ವಪರಾಹ್ಣವ್ಯಾಪಿನೀ ತಿಥಿರ್ಗ್ರಾಹ್ಯಾ ।**

ಅರ್ಥ :— ಪಾರ್ವಣಶ್ರಾದ್ಧತಿಥಿಯಲ್ಲಾದರೋ ಅಪರಾಹ್ಣವನ್ನು ವ್ಯಾಪಿಸಿರುವ ತಿಥಿಯು ಗ್ರಾಹ್ಯವಾದದ್ದು.

೫. (ಸ್ಮೃತಿನಿರ್ಣಯಃ ೩೩೫, ೩೩೬) ಪೃಥ್ವೀಚಂದ್ರೋದಯೇ ವೃದ್ಧಗೌತಮಃ—

**ಅಪರಾಹ್ಣವ್ಯಾಪಿನೀ ಯಾ ಪಾರ್ವಣೇ ಸಾ ತಿಥಿರ್ಭವೇತ್ ।**

ಅರ್ಥ :— ಪಾರ್ವಣಶ್ರಾದ್ಧದಲ್ಲಿ ಅಪರಾಹ್ಣವನ್ನು ಯಾವ ತಿಥಿಯು ವ್ಯಾಪಿಸಿದೆಯೋ ಆ ತಿಥಿಯು ಶ್ರಾದ್ಧತಿಥಿಯಾಗುತ್ತದೆ.

## ೪. ನಿಬಂಧಗ್ರಂಥಗಳು

೧ ಬೋಧಾಯನಸೂತ್ರಾನುಯಾಯಿಗಳಾದ ಕಾಲಮಾಧವರು—ಕಾಲಮಾಧವಃ ೮೭—

**ಯದಾ ಕುತುಪಾಪರಾಹ್ಣೋಭಯವ್ಯಾಪಿನೀ ನ ಸಂಭವತಿ ತದಾ ಕೇವಲಾ ಅಪರಾಹ್ಣವ್ಯಾಪಿನ್ಯಪಿ ತಿಥಿರ್ಗ್ರಹೀತವ್ಯಾ । ಪಿತ್ರ್ಯರ್ಥೇ ಚಾಪರಾಹ್ಣಿಕೀತಿ ಭವಿಷ್ಯತ್ಪುರಾಣೇಽಭಿಧಾನಾತ್ ॥**

ಅರ್ಥ :— ಕುತುಪಕಾಲ ಮತ್ತು ಅಪರಾಹ್ಣಕಾಲ ಈ ಎರಡು ಕಾಲಗಳನ್ನೂ ವ್ಯಾಪಿಸಿರುವ ತಿಥಿಯು ದೊರೆಯದಿದ್ದಾಗ 'ಪಿತೃಗಳಿಗೆ ಅಪರಾಹ್ಣವ್ಯಾಪ್ತತಿಥಿಯು' ಎಂದು ಭವಿಷ್ಯತ್ಪುರಾಣದಲ್ಲಿ ಹೇಳಿರುವದರಿಂದ ಬರೀ ಅಪರಾಹ್ಣವ್ಯಾಪ್ತವಾದದ್ದಾದರೂ ಆಗಿರುವ ತಿಥಿಯನ್ನು ಗ್ರಹಿಸಬೇಕು.

೨. ನಿರ್ಣಯಸಿಂಧು ೩೩೫— **ಪಾರ್ವಣಂ ತ್ವಪರಾಹ್ಣೇ ಕಾರ್ಯಮ್ ।**

ಅರ್ಥ :— ಪಾರ್ವಣಶ್ರಾದ್ಧವು ಅಪರಾಹ್ಣದಲ್ಲಿ ಮಾಡತಕ್ಕದ್ದು.

೩. ಧರ್ಮಸಿಂಧು ೩೦೧— **ಪಾರ್ವಣೇ ತ್ವಪರಾಹ್ಣವ್ಯಾಪಿನೀ ಗ್ರಾಹ್ಯಾ ।**

ಅರ್ಥ :— ಪಾರ್ವಣಶ್ರಾದ್ಧದಲ್ಲಾದರೋ ಅಪರಾಹ್ಣವ್ಯಾಪಿನಿಯಾದ ತಿಥಿಯು ಗ್ರಾಹ್ಯವು.

೪. ಧರ್ಮಪ್ರವೃತ್ತಿಃ ೩೧—

**ದ್ವ್ಯಪರಾಹ್ಣಯೋರ್ಯದಿ ತದಾ ಯೋಽಧಿಕಾ ಸಾ ಮತಾ ।**

ಅರ್ಥ:— ಅಪರಾಹ್ಣವ್ಯಾಪ್ತವಾದ ಎರಡು ತಿಥಿಗಳಲ್ಲಿ ಅಧಿಕವ್ಯಾಪ್ತವಾದ ತಿಥಿಯು ಅಭಿಪ್ರೇತವಾದದ್ದು.

೫. ಶ್ರಾದ್ಧಮಂಜರೀ ೯—

**ಪಾರ್ವಣಶ್ರಾದ್ಧೇ ಸಂಪೂರ್ಣಾ ಅಪರಾಹ್ಣವ್ಯಾಪಿನೀ ಗ್ರಾಹ್ಯಾ ।**

ಅರ್ಥ :— ಪಾರ್ವಣಶ್ರಾದ್ಧದಲ್ಲಿ ಸಂಪೂರ್ಣಾಪರಾಹ್ಣವ್ಯಾಪಿನಿಯಾದ ತಿಥಿಯು ಗ್ರಾಹ್ಯವು.

೬. ಸ್ಮೃತ್ಯರ್ಥಸಾಗರಃ ೬೧—

**ಮೃತಾಹೇ ಚ ಅಪರಾಹ್ಣವ್ಯಾಪಿನ್ಯೇವ ತಿಥಿರ್ಗ್ರಾಹ್ಯಾ । ಅಪರಾಹ್ಣಃ ಪಿತೄಣಾಂ ಸ್ವಯಂಭುವಾ ದತ್ತಃ । ನಾಸ್ತಮಯಃ ॥**

ಅರ್ಥ :— ಮೃತಾಹದಲ್ಲಿ ಅಪರಾಹ್ಣವ್ಯಾಪಿನಿಯಾದ ತಿಥಿಯನ್ನೇ ಗ್ರಹಿಸಬೇಕು. ಏಕೆಂದರೆ ಅಪರಾಹ್ಣವು ಪಿತೃಗಳಿಗೆ ಬ್ರಹ್ಮನಿಂದ ಕೊಡಲ್ಪಟ್ಟ ಕಾಲವು. ಅಸ್ತಮಯವು ಅಲ್ಲ.

೭. ಚತುರ್ವರ್ಗಚಿಂತಾಮಣಿಃ ಶ್ರಾದ್ಧಕಲ್ಪಃ ೧೧೭೨—

**ಅಥ ಶ್ರಾದ್ಧಸಂಪದಃ । ಮನುವಸಿಷ್ಠಯಮಹಾರೀತಶಾತಾತಪಾಃ ಅಪರಾಹ್ಣಸ್ತಿಲಾದರ್ಭಾಃ ....ಶ್ರಾದ್ಧಕರ್ಮಸು ಸಂಪದಃ ॥**

ಅರ್ಥ :— ಅಪರಾಹ್ಣವೂ, ಎಳ್ಳುಗಳು ಮತ್ತು ದರ್ಭೆಗಳು_ ಇವು ಶ್ರಾದ್ಧಕರ್ಮದ ಸಂಪತ್ತುಗಳು.

೮. ಸ್ಮೃತಿಸಾರೋದ್ಧಾರಃ ೧೮೩—

**ಅಥ ಪಾರ್ವಣನಿರ್ಣಯಃ – ಇಯಂ ಚ ಸರ್ವಾಪಿ ಅಪರಾಹ್ಣವ್ಯಾಪಿನೀ ಗ್ರಾಹ್ಯಾ ॥**

ಅರ್ಥ :— ಇನ್ನು ಪಾರ್ವಣನಿರ್ಣಯವು. ಈ ಎಲ್ಲ ಅಪರಾಹ್ಣವ್ಯಾಪಿನಿಯಾದ ತಿಥಿಯು ಗ್ರಾಹ್ಯವು.

೯. ಸ್ಮೃತ್ಯರ್ಥಸಾಗರ: ೧೭ ಪ್ರತಿಸಾಂವತ್ಸರಶ್ರಾದ್ಧನಿರ್ಣಯಃ—

**ದಿವಸಂ ಪ್ರಾತಸ್ಸಂಗಮೇತ್ಯಾದಿ ಪಂಚಧಾ ವಿಭಜೇತ್ ॥ ತತ್ರ ಸೂರ್ಯೋದಯಮಾರಭ್ಯ ಆಸಾಯಾಹ್ನಂ ಮೃತತಿಥಿಃ ಸ್ಪೃಶೇಚ್ಚೇತ್ಸಾ ತಿಥಿಃ ಪಾರ್ವಣೇ ಉತ್ತಮಾ। ತದಭಾವೇ ಅಪರಾಹ್ಣವ್ಯಾಪ್ತಾ ॥**

ಅರ್ಥ :— ಹಗಲನ್ನು ಪ್ರಾತಃ, ಸಂಗವ, ಮಧ್ಯಾಹ್ನ, ಅಪರಾಹ್ಣ ಮತ್ತು ಸಾಯಾಹ್ನ ಎಂದು ಐದು ಭಾಗಗಳನ್ನಾಗಿ ಮಾಡಬೇಕು. ಅಲ್ಲಿ ಮೃತತಿಥಿಯು ಸೂರ್ಯೋದಯದಿಂದ ಆರಂಭಿಸಿ ಸಾಯಾಹ್ನದವರೆಗೂ ವ್ಯಾಪಿಸಿದ್ದರೆ ಆ ತಿಥಿಯು ಪಾರ್ವಣಶ್ರಾದ್ಧಕ್ಕೆ ಉತ್ತಮತಿಥಿಯು, ಇಲ್ಲದಿದ್ದರೆ ಅಪರಾಹ್ಣವನ್ನು ವ್ಯಾಪಿಸಿರುವ ತಿಥಿಯು ಗ್ರಾಹ್ಯವಾದದ್ದು.

## ೪. ಶಿಷ್ಟಾಚಾರವು ಹೇಗಿದೆ ?

ಆಚಾರದಲ್ಲಿಯೂ ಮೇಲೆ ಉದಾಹರಿಸಿರುವುದಕ್ಕೆ ಅನುಕೂಲವಾಗಿಯೇ ಎಲ್ಲರಲ್ಲಿಯೂ ಇರುತ್ತದೆ ; ಆದರೆ ಬೋಧಾಯನರಲ್ಲಿ ಕೆಲವರಲ್ಲಿ ಮಾತ್ರ ಅಂದರೆ ತರೀಕೆರೆ, ಭದ್ರಾವತಿ, ಚನ್ನಗಿರಿ, ಯಳ್ಳಂಬಳಸೆ- ಗ್ರಾಮಗಳಲ್ಲಿ ಕೆಲವರಲ್ಲಿ ಮಾತ್ರ ಮಾರನೆಯ ದಿವಸದಲ್ಲಿ ಅಪರಾಹ್ಣದಲ್ಲಿದ್ದರೂ ಸಾಯಂಕಾಲದಲ್ಲಿ ಒಂದು ಘಳಿಯಾದರೂ ಮೃತತಿಥಿಯು ಇಲ್ಲದಿದ್ದರೆ ಅದನ್ನು ಬಿಟ್ಟು ಹಿಂದಿನ ದಿನದಲ್ಲಿ ಅಪರಾಹ್ಣದಲ್ಲಿಲ್ಲದಿದ್ದರೂ ಸಾಯಂಕಾಲದಲ್ಲಿ ಮಾತ್ರವೇ ಹುಟ್ಟಿರುವ ತಿಥಿಯನ್ನು ಪಾರ್ವಣಶ್ರಾದ್ಧತಿಥಿಯನ್ನಾಗಿ ಎಣಿಸಿ ಅನುಷ್ಠಾನ ಮಾಡುವ ಪದ್ಧತಿ ಈಗ ಇದೆ. ನಾನು ವಿಚಾರಿಸಿದ್ದರಲ್ಲಿ ತರೀಕೆರೆಯವರಲ್ಲಿಯೇ ಕೆಲವರೂ ಬೇರೆಬೇರೆ ಪ್ರಾಂತಗಳಲ್ಲಿರುವ ಸಕಲ ಬೋಧಾಯನರೂ ಅಪರಾಹ್ಣವ್ಯಾಪ್ತತಿಥಿಯನ್ನೇ ಪಾರ್ವಣಶ್ರಾದ್ಧತಿಥಿಯನ್ನಾಗಿ ಗ್ರಹಿಸುತ್ತಿದ್ದಾರೆಂಬುದು ಈ ಕೆಳಗೆ ಕಂಡ ಮಹನೀಯರ ಪತ್ರದಿಂದಲೂ ಸಾಕ್ಷಾತ್ತಾಗಿ ಹೇಳಿದ ಮಾತಿನಿಂದಲೂ ತಿಳಿದು ಬಂದಿರುತ್ತದೆ. ಮತ್ತು ಈಗ ಬರೀ ಸಾಯಂಕಾಲದಲ್ಲಿ ಬಂದಿರುವ ತಿಥಿಯನ್ನು ಗ್ರಹಿಸುವ ತರೀಕೆರೆಯವರೂ ಹಿಂದೆ ಅಪರಾಹ್ಣವ್ಯಾಪ್ತ ತಿಥಿಯನ್ನೇ ಗ್ರಹಿಸಿದ್ದರು ಎಂದೂ ವೇ॥ಬ್ರ॥ಶ್ರೀ॥ ಮಳಲಿ ಕೃಷ್ಣಭಟ್ಟರಿಂದ ತಿಳಿದುಬಂದಿದೆ.

### ಪತ್ರವನ್ನು ಬರೆದ ಮಹನೀಯರುಗಳು

ವೇ॥ ಬ್ರ॥ ಶ್ರೀ॥ ಗಳಾದ

೧. ಆಸ್ಥಾನವಿದ್ವಾನ್ ಕೊಳ್ಳೇಗಾಲದ ವೆಂಕಟಸುಬ್ಬ ಶಾಸ್ತ್ರಿಗಳು,
ಜ್ಯೋತಿಸ್ಸಿದ್ಧಾಂತಕೇಸರಿ, ಜ್ಯೌತಿಷವಿದ್ವಾನ್, ಕೊಳ್ಳೇಗಾಲ.

ವೇ॥ ಬ್ರ॥ ಶ್ರೀ॥ ಗಳಾದ

೨. ಜರಗೇನಹಳ್ಳಿ ರಾಮಶಾಸ್ತ್ರಿಗಳು,
ಬೋಧಾಯನ ಪುರೋಹಿತರು, ಬೆಂಗಳೂರು,

೩. ಬೋಧಾಯನಸೂತ್ರದ ಶ್ರೌತಿ ಗಣೇಶ ಸುಬ್ರಾಯಭಟ್ಟರು,
ಕೋಡ್ಲೆ ಕೆರೆ, ಗೋಕರ್ಣ.

೪. ಬೋಧಾಯನ ಸುಬ್ರಹ್ಮಣ್ಯಶರ್ಮಾ, ಸಿದ್ದಾಪುರ.

## ಪ್ರತ್ಯಕ್ಷವಾಗಿ ಹೇಳಿದವರು

ವೇ॥ ಬ್ರ॥ ಶ್ರೀ॥ ಗಳಾದ

೧. ಬೋಧಾಯನಶಾಖೆಯ ಮಹಲಿಂಗಭಟ್ಟರು, ವೇದಾಂತವಿದ್ವಾನ್, ಮೈಸೂರು.

೨. ಗುಂಬಳ್ಳಿ ರಾಮಕೃಷ್ಣಶಾಸ್ತ್ರಿಗಳು. ಬೋಧಾಯನ ಪುರೋಹಿತರು, ಮೈಸೂರು.

೩. ಸತ್ಯಮಂಗಲದ ಸುಬ್ರಹ್ಮಣ್ಯ ಉಪಾಧ್ಯಾಯರು, ಮೈಸೂರು.

೪. ಸುಬ್ರಹ್ಮಣ್ಯ ಉಪಾಧ್ಯಾಯರು, ಬೋಧಾಯನ ಪುರೋಹಿತರು, ಬೆಂಗಳೂರು,

೫. ಶ್ರೀ॥ ತರೀಕೆರೆಯವರೇ ಆದ ಕೃಷ್ಣಶಾಸ್ತ್ರಿಗಳು,
ರಿಟೈರ್ಡ್ ರೆವೆನ್ಯೂ ಇನ್‌ಸ್ಪೆಕ್ಟರ್, ಚಿತ್ರದುರ್ಗ.

೬. ಗುಬ್ಬಿಚಿಕ್ಕನಹಳ್ಳಿ ಸುಬ್ಬಣ್ಣನವರು, ಬೋಧಾಯನ ಪುರೋಹಿತರು,
ಬಾಣಾವರ. ತರೀಕೆರೆಯವರ ಜ್ಞಾತಿಗಳು,

೭. ಕುಡ್ಲೂರು ನಾರಾಯಣರಾಯರು. ರಿ॥ ಸ್ಕೂಲ್ ಮಾಸ್ಟರು, ಶಿವನೆ.

೮. ಶ್ರೀ॥ ಕುಡ್ಲೂರು ಶ್ರೀನಿವಾಸಯ್ಯನವರು, ಸಕ್ಕರೇಪಟ್ಣ.

ಇವರೆಲ್ಲರೂ ಅಪರಾಹ್ಣವ್ಯಾಪ್ತತಿಥಿಯನ್ನೇ ಪಾರ್ವಣಶ್ರಾದ್ಧತಿಥಿಯನ್ನಾಗಿ ಹಿಂದಿನಿಂದಲೂ ಆಚರಿಸುತ್ತಲಿದ್ದಾರೆ.

೬. ಎರಡನೆಯ ದಿವಸ ಉದಯದಿಂದ ಸಾಯಾಹ್ನದವರೆಗೂ ಮೃತತಿಥಿಯಿಲ್ಲದಿರುವಾಗ ಹಿಂದಿನ ದಿನ ಸಾಯಾಹ್ನದಲ್ಲಿ ಮಾತ್ರವೇ ಬಂದಿರುವ ತಿಥಿಯು ಪಾರ್ವಣಶ್ರಾದ್ಧತಿಥಿಯಾಗಬೇಕೆಂದು ಹೇಳುವ

## ಏಕದೇಶಿಗಳು ಆಧಾರವಾಗಿ ಇಟ್ಟುಕೊಂಡಿರುವ ವಚನಗಳು ಯಾವವು ?

(ಎಲ್ಲಿಯೋ ಒಂದೆರಡು ಕಡೆಗಳಲ್ಲಿ ಮಾತ್ರವೇ ಇಂತಹವರು ಕೆಲವರು ಇರುವದು ಕಂಡುಬಂದಿರುವದರಿಂದ ಅಪರಾಹ್ಣದಲ್ಲಿಲ್ಲದ ಸಾಯಾಹ್ನಮಾತ್ರದಲ್ಲಿರುವ ತಿಥಿಯನ್ನು ಗ್ರಹಿಸಬೇಕೆಂದು ಹೇಳುವವರನ್ನು ಏಕದೇಶಿಗಳು ಎಂದು ಮುಂದೆ ವ್ಯವಹರಿಸಿರುತ್ತೇವೆ.

೧. ಬೋಧಾಯನರಿಗೇ ವಿಶೇಷವಾಗಿ ಪಾರ್ವಣಶ್ರಾದ್ಧತಿಥಿನಿರ್ಣಯ ವನ್ನು ಮಾಡಿದೆ ಎಂದು ಏಕದೇಶಿಗಳು ಅರ್ಥಮಾಡುವ ಆನಂದಗಿರಿಸ್ವಾಮಿ ಕೃತವಾದ "ಸ್ಮೃತಿಸಾರಸಮುಚ್ಚಯ" ಎಂಬ ಗ್ರಂಥದ "ಬೋಧಾಯನಾ ಪಸ್ತಂಬಾನಾಂ ಸಾಯಾಹ್ನವ್ಯಾಪಿತ್ವಮ್, ಆಶ್ವಲಾಯನದ್ರಾಹ್ಯಾಯಣಾನಾಂ ಅಪರಾಹ್ಣವ್ಯಾಪಿತ್ವಂ ಇತಿ ಸಿದ್ಧಮ್" ಎಂಬ ವಚನ.

೨. ಕಲಾಮಾತ್ರವಾದರೂ ಸಾಯಾಹ್ನದಲ್ಲಿ ವ್ಯಾಪ್ತಿಯುಳ್ಳ ತಿಥಿಯನ್ನು ಬೋಧಾಯನರೂ ಕಾಣ್ವರೂ ಉತ್ತಮವಾದ ಪಾರ್ವಣಶ್ರಾದ್ಧತಿಥಿಯನ್ನಾಗಿ ಗ್ರಹಿಸಬೇಕೆಂಬ ಅಭಿಯುಕ್ತವಚನ.

೩. ಸರ್ವರಿಗೂ ಸಾಮಾನ್ಯವಾಗಿ ಸಾಯಾಹ್ನವ್ಯಾಪ್ತಿಯುಳ್ಳ ತಿಥಿಯನ್ನು ಉತ್ತಮಪಾರ್ವಣಶ್ರಾದ್ಧತಿಥಿಯನ್ನಾಗಿ ಹೇಳುವ ಸ್ಮೃತಿಗಳ ಮತ್ತು ನಿಬಂಧಗಳ ವಚನಗಳು.

## ೭. ವಿಮರ್ಶೆ

ಮೇಲೆ ಹೇಳಿರುವ ಬೋಧಾಯನರ ಏಕದೇಶಿಗಳು ಅನುಸರಿಸುತ್ತಿರುವ ಆಚಾರವು ಯಾವ ಶ್ರುತಿಸ್ಮೃತಿಗಳಿಗೂ ಸಮ್ಮತವಾದದ್ದಲ್ಲವೆಂಬುದನ್ನು ಸ್ವಲ್ಪ ವಿವರವಾಗಿ ತಿಳಿಸಬೇಕಾಗಿದೆ. ಮೊದಲನೆಯದಾಗಿ ಇವರು ಉದಾಹರಿಸುವ ವಚನಗಳಲ್ಲಿ ಕೆಲವು ಅಪ್ರಸಿದ್ಧನಿಬಂಧಕಾರರ ವಚನಗಳಾಗಿವೆ ಎಂಬುದನ್ನು ನೆನಪಿನಲ್ಲಿಡಬೇಕು. ಆದರೂ ಆ ವಚನಗಳನ್ನು ಸಂದರ್ಭಪುರಸ್ಸರವಾಗಿ ಇತರ ಪ್ರಸಿದ್ಧನಿಬಂಧಕಾರರ ವಚನಗಳಿಗೆ ಹೋಲಿಸಿ ಏಕವಾಕ್ಯತೆಯನ್ನು ಮಾಡುವ ಮೂಲಕವೂ, ಅವರೇ ಉದಾಹರಿಸುವ ಸ್ಮೃತಿವಚನಗಳ ಅಭಿಪ್ರಾಯವಿಮರ್ಶೆಯ ಮೂಲಕವೂ ವಿಚಾರಮಾಡಿದರೆ ಏಕದೇಶಿಗಳು ಹೇಳುವ ಅಭಿಪ್ರಾಯವು ಆ ವಚನಗಳಲ್ಲಿಯೂ ಹೊರಡುವದೇ ಇಲ್ಲವೆಂಬುದು ಸ್ಪಷ್ಟವಾಗುತ್ತದೆ.

(೧) ಬೋಧಾಯನರಿಗೇ ವಿಶೇಷವಾಗಿ ಪಾರ್ವಣಶ್ರಾದ್ಧತಿಥಿಯನ್ನು ನಿರ್ಣಯಿಸುವ ವಚನಗಳಿವೆಯೆ ?

ಏಕದೇಶಿಗಳು ಈ ಕೆಳಗಿನ ವಾಕ್ಯಗಳನ್ನು ಉದಾಹರಿಸುತ್ತಾರೆ:—

೧. ಸ್ಮೃತಿಸಾರಸಮುಚ್ಚಯಃ, ನೈಮಿತ್ತಿಕಕಾಂಡ ನವಮೋಲ್ಲಾಸ ೩೨—

**ಅಥ ಸಂವತ್ಸರಶ್ರಾದ್ಧಮುದ್ದಿಶ್ಯ ಕಾಲೋ ವಿಧೀಯತೇ –**

**ವ್ಯಾಸಃ–ಅಷ್ಟಾವಿಂಶತಿನಾಡೀಭಿಶ್ಶ್ರಾದ್ಧಂ ಸಾಂವತ್ಸರಂ ಭವೇತ್ ।**

**ಬ್ರಹ್ಮಕ್ಷತ್ರಿಯವೈಶ್ಯಾನಾಮೇವಂ ಯುಕ್ತತರಂ ಮತಮ್ ॥**

ಅರ್ಥ :— ಬ್ರಾಹ್ಮಣಕ್ಷತ್ರಿಯವೈಶ್ಯರಿಗೆ ಸಾಂವತ್ಸರಶ್ರಾದ್ಧವು ೨೮ ಘಳಿಗೆಗಳಿಂದ ಕೂಡಿದ್ದು ಹೆಚ್ಚುಯುಕ್ತವಾದದ್ದೆಂದು ಅಭಿಪ್ರಾಯವು.

**ಮಾಂಡವ್ಯಃ–ಪರೇದ್ಯುಸ್ಸಪ್ತವಿಂಶತ್ಯಾ ನಾಡ್ಯಾ ಯುಕ್ತಾ ಯದಾ ತಿಥಿಃ**

**ತದಾ ಸಾಂವತ್ಸರಂ ಶ್ರಾದ್ಧಂ ಕರ್ತವ್ಯಮಿತಿ ನಿಶ್ಚಯಃ ॥**

ಅರ್ಥ :— ಮಾರನೆಯ ದಿನ ೨೭ ಘಳಿಗೆಗಳಿಂದ ಕೂಡಿದ ತಿಥಿಯಿದ್ದಾಗ ಸಾಂವತ್ಸರಶ್ರಾದ್ಧವನ್ನು ಮಾಡಬೇಕೆಂದು ನಿರ್ಣಯವು.

ಹೀಗೆ ಎರಡು ವಿಧವಾದ ಅಭಿಪ್ರಾಯವಿರುವಾಗ ಹೇಗೆ ಮಾಡಬೇಕೆಂದು ಸಂಶಯವನ್ನು ತೋರಿಸಿ ವೃದ್ಧತಿಥಿಯಾಗಿದ್ದರೆ ೨೭ ಘಳಿಗೆಗಳಿರಬೇಕೆಂದೂ ಹ್ರಾಸತಿಥಿಯಾಗಿದ್ದರೆ ೨೮ ಘಳಿಗೆಗಳಿರಬೇಕೆಂದೂ ಒಂದು ವಿಧವಾಗಿ ನಿರ್ಣಯಿಸಿ, ಅಥವಾ ಎಂದು ಪಕ್ಷಾಂತರದಲ್ಲಿ ಬೋಧಾಯನರಿಗೆ ೨೮ ಘಳಿಗೆಗಳೂ ಆಪಸ್ತಂಬರಿಗೆ ೨೭ ಘಳಿಗೆಗಳೂ ಎಂದು ವಿವೇಕವು ಸಿದ್ಧವಾಗುತ್ತದೆ ಎಂದು ಬರೆದು ಅದಕ್ಕೆ ಪ್ರಮಾಣವಚನವಾಗಿ ಈ ವಾಕ್ಯವನ್ನು ಕೊಟ್ಟಿರುತ್ತಾರೆ:—

**ಗಾರ್ಗ್ಯಃ– ಆಪಸ್ತಂಬಮತೇ ಸಿದ್ಧಂ ಸಪ್ತವಿಂಶತಿನಾಡಿಕಾಃ ।**

**ಬೋಧಾಯನಮತೇ ಸಿದ್ಧಂ ಅಷ್ಟಾವಿಂಶತಿನಾಡಿಕಾಃ ॥**

ಅರ್ಥ :— ಆಪಸ್ತಂಬಮತದಲ್ಲಿ ೨೭ ಘಳಿಗೆಗಳೆಂತಲೂ, ಬೋಧಾಯನಮತದಲ್ಲಿ ೨೮ ಘಳಿಗೆಗಳೆಂತಲೂ ಸಿದ್ಧವಾಯಿತು.

ಈ ವಚನವನ್ನು ಹೇಳಿದ ಮೇಲೆ "ಬೋಧಾಯನಾಪಸ್ತಂಬಾನಾಂ ಸಾಯಾಹ್ನವ್ಯಾಪಿತ್ವಂ ಆಶ್ವಲಾಯನದ್ರಾಹ್ಯಾಯಣಾನಾಂ ಅಪರಾಹ್ಣವ್ಯಾಪಿತ್ವಂ ಯುಕ್ತಮ್" - ಎಂದು ತಾವು ನಿಗಮನವನ್ನು ಮಾಡಿದ್ದಾರೆ. ಇಲ್ಲಿ 'ಸಾಯಾಹ್ನವ್ಯಾಪಿತ್ವಂ' ಎಂಬ ಮಾತಿಗೆ ಆಧಾರವಾದ ೨೮ ಘಳಿಗೆಗಳು ಎಂಬಲ್ಲಿ ಉದಯದಿಂದ ೨೮ ಘಳಿಗೆಗಳೆಂದೇ ಅಲ್ಲವೆ, ಅರ್ಥ ? ಹೀಗೆ ಉದಯದಿಂದಲೂ ಇರುವ ಅಂದರೆ ಅಪರಾಹ್ಣಸಂಬಂಧವನ್ನು ಹೊಂದಿಯೇ ಇರುವ ೨೮ ಘಳಿಗೆಗಳುಳ್ಳ ಸಾಯಾಹ್ನವ್ಯಾಪಿತ್ವವು ಬೋಧಾಯನಾಪಸ್ತಂಬರಿಗೆ ಅಭಿ

ಪ್ರೇತವಾದದ್ದು ಎಂದು ಅರ್ಥವಾಗುತ್ತದೆ. ಈ ವಾಕ್ಯದಲ್ಲಿ ಕೇವಲ ಅಪರಾಹ್ಣವ್ಯಾಪ್ತತಿಥಿಯು ಶ್ರಾದ್ಧಕ್ಕೆ ತ್ಯಾಜ್ಯವೆಂದೇನೂ ಬರೆದಿಲ್ಲ. ಬರೀ ಸಾಯಾಹ್ನಸಂಬಂಧವನ್ನು ಹೊಂದಿರುವದೇ ಸಾಯಾಹ್ನವ್ಯಾಪಿತ್ವವು ಎಂದೂ ಹೇಳಿಲ್ಲ. ಹೀಗೆ ಹೇಳಿದ್ದಿದ್ದರೆ 'ಸಾಯಾಹ್ನವ್ಯಾಪಿತ್ವಂ' ಎಂಬ ಶಬ್ದವೂ ಅನ್ವರ್ಥವೂ ಆಗುತ್ತಿರಲಿಲ್ಲ; ಮತ್ತು ೨೮ ಘಳಿಗೆಗಳು ಎಂಬ ಮೂಲವಾಕ್ಯಕ್ಕೆ ವಿರೋಧವೂ ಬರುತ್ತದೆ. ಇದೂ ಅಲ್ಲದೆ ಇತರ ಅಪರಾಹ್ಣವ್ಯಾಪಿತ್ವವನ್ನು ವಿಧಿಸುವ ಸ್ಮೃತಿವಾಕ್ಯಗಳಿಗೂ ವಿರೋಧ ಬರುತ್ತದೆ. ಬೋಧಾಯನರಿಗೂ ಆಪಸ್ತಂಬರಿಗೂ ಈ ವಾಕ್ಯದಿಂದ ಉದಯದಿಂದ ೨೮ ಘಳಿಗೆಗಳುಳ್ಳ ಸಾಯಾಹ್ನವ್ಯಾಪಿತ್ವವನ್ನು ಹೇಳುವದರಿಂದ ಸರ್ವಸಮ್ಮತವಾದ ಪೂರ್ಣತಿಥಿಯನ್ನೇ ಇವರೂ ಹೇಳಿದ್ದಾರೆಂದು ಸಮಂಜಸವಾದ ಅರ್ಥ ಬರುತ್ತದೆ. ಆಶ್ವಲಾಯನರಿಗೂ ದ್ರಾಹ್ಯಾಯನರಿಗೂ ಅಪರಾಹ್ಣವ್ಯಾಪಿತ್ವವನ್ನೂ ಬೋಧಾಯನರಿಗೂ ಆಪಸ್ತಂಬರಿಗೂ ಉದಯದಿಂದ ಸಾಯಾಹ್ನದವರೆಗೂ ಇರುವ ಪ್ರಶಸ್ತವಾದ ಸಾಯಾಹ್ನವ್ಯಾಪಿತ್ವವನ್ನೂ ಹೇಳಿದ್ದಾರೆಂಬುದು ಸರ್ವಸಮ್ಮತವಾದ ಅರ್ಥ.

**೨. ಸಾಯಾಹ್ನವ್ಯಾಪಿನೀ ಗ್ರಾಹ್ಯಾ ಯಾಬೋಧಾಯನಕಾಣ್ವಯೋಃ।**
**ಕಲಾಮಾತ್ರಾಪಿ ಸಾ ಗ್ರಾಹ್ಯಾ ಪ್ರಶಸ್ತಂ ಪಿತೃಕರ್ಮಸು ॥**

ಅರ್ಥ— ಬೋಧಾಯನರೂ ಕಾಣ್ವರೂ ಒಂದು ಕಲೆಯಿಂದಲಾದರೂ ಸಾಯಾಹ್ನವ್ಯಾಪ್ತಿಯನ್ನು ಹೊಂದಿರುವ ತಿಥಿಯನ್ನು ಪಿತೃಕರ್ಮಗಳಲ್ಲಿ ಪ್ರಶಸ್ತವಾದದ್ದನ್ನಾಗಿ ಗ್ರಹಿಸಬೇಕು.

ಈ ವಾಕ್ಯವು ಯಾರದ್ದು ? ಎಂಬುದು ಗೊತ್ತಿಲ್ಲ. ಇದು ಪ್ರಶಸ್ತತಿಥಿಯನ್ನು ಹೇಳುವ ವಾಕ್ಯವಾಗಿದೆ. ಉದಯದಿಂದ ಆರಂಭಿಸಿ ಸಾಯಾಹ್ನದಲ್ಲಿ ಒಂದು ಕಲೆಯಾದರೂ ಇರುವ ತಿಥಿಯಾದರೇ ಪ್ರಶಸ್ತತಿಥಿಯಾಗುತ್ತದೆಯೇ ಹೊರತು ಅಪರಾಹ್ಣದಲ್ಲಿಯೂ ಇಲ್ಲದ ಸಾಯಾಹ್ನದಲ್ಲಿ ಮಾತ್ರ ಬಂದಿರುವ ತಿಥಿಯಾದರೆ ಸರ್ವಥಾ ಪ್ರಶಸ್ತತಿಥಿಯಾಗುವದೇ ಇಲ್ಲವೆಂಬುದನ್ನು ಹೇಳಲೇಬೇಕಾಗಿಲ್ಲ. ಅಪರಾಹ್ಣದಲ್ಲಿಲ್ಲದೆ ಸಾಯಾಹ್ನದಲ್ಲಿ ಒಂದು ಕಲೆ ಇದ್ದರೂ ಸಾಕು ಎಂದೇನೂ ಈ ವಾಕ್ಯದಲ್ಲಿ ಹೇಳಿಲ್ಲ. ಆದುದರಿಂದ ಅಪರಾಹ್ಣಬೋಧಕ ಯಾವ ವಿಶೇಷವಚನಗಳಿಗೂ ಇದು ಬಾಧಕವಾಗುವದೇ ಇಲ್ಲ. ಬೋಧಾಯನರ ಜೊತೆಯಲ್ಲಿ ಹೇಳಿರುವ ಕಾಣ್ವರು ಅಪರಾಹ್ಣವ್ಯಾಪ್ತತಿಥಿಯನ್ನೇ ಶ್ರುತಿಸ್ಮೃತಿಗಳ ಆಧಾರದಿಂದ ಆಚರಿಸುತ್ತಲಿದ್ದಾರೆಂಬುದು ಅಪರಾಹ್ಣವ್ಯಾಪ್ತಿಯನ್ನು

ಹೊಂದಿ ಸಾಯಾಹ್ನದಲ್ಲಿ ಒಂದು ಕಲೆಯಾದರೂ ಇರುವ ಪ್ರಶಸ್ತತಿಥಿಯನ್ನೇ ಹೇಳುತ್ತದೆ ಎಂಬುದಕ್ಕೆ ಗಮಕವೂ ಆಗುತ್ತದೆ.

ಹೀಗೆ (೧) ಸ್ಮೃತಿಸಾರಸಮುಚ್ಚಯಕಾರರು ಬೋಧಾಯನಮತದಲ್ಲಿ ೨೮ ಘಳಿಗೆಗಳೆಂದು ಸಿದ್ಧವಾಯಿತು ಎಂದು ಹೇಳಿದ ಗಾರ್ಗ್ಯವಾಕ್ಯದ ಆಧಾರದಿಂದ ನಿಗಮನಮಾಡಿರುವ 'ಬೋಧಾಯನಾನಾಂ ಸಾಯಾಹ್ನವ್ಯಾಪಿತ್ವಂ' ಎಂಬ ವಚನಕ್ಕೆ ಉದಯದಿಂದ ೨೮ ಘಳಿಗೆಗಳುಳ್ಳ ಸಾಯಾಹ್ನವ್ಯಾಪ್ತತಿಥಿಯನ್ನು ಹೇಳಿರುತ್ತಾರೆ. (೨) ಇವರು ಯಾರು? ಎಂದು ಗೊತ್ತಿಲ್ಲದ ಅಭಿಯುಕ್ತರೊಬ್ಬರು ಸಾಯಾಹ್ನದಲ್ಲಿ ಕಲಾಮಾತ್ರವಾದರೂ ಇರುವ ಪ್ರಶಸ್ತತಿಥಿಯನ್ನು ಅಂದರೆ ಉದಯದಿಂದ ಸಾಯಾಹ್ನದಲ್ಲಿ ಕಲಾಮಾತ್ರವಾದರೂ ಇರುವ ಪ್ರಶಸ್ತತಿಥಿಯನ್ನು ಬೋಧಾಯನರಿಗೆ ಹೇಳಿದ್ದಾರೆ. ಈ ಎರಡು ವಚನಗಳನ್ನು ಬಿಟ್ಟರೆ ಇನ್ನೆಲ್ಲಿಯೂ 'ಬೋಧಾಯನರಿಗೆ ಹೀಗೆ' ಎಂದು ವಿಶೇಷವಾಗಿ ಹೇಳುವದೇ ಕಂಡುಬಂದಿಲ್ಲ. ಇವೆರಡು ವಾಕ್ಯಗಳಂತೂ ಅಪರಾಹ್ಣದಲ್ಲಿಲ್ಲದ ಸಾಯಾಹ್ನವ್ಯಾಪ್ತಿಯನ್ನು ಹೇಳಲಾರವೆಂಬುದನ್ನು ನಿರ್ಣಯಿಸಿಯೇ ಆಗಿದೆ.

ಸಾಯಂವ್ಯಾಪ್ತತಿಥಿಯನ್ನು ಹೇಳುವ ವಾಕ್ಯಗಳ ತಾತ್ಪರ್ಯವೇನು ?

ಮೊದಲನೆಯದಾಗಿ ಸಾಯಂವ್ಯಾಪ್ತಿಯನ್ನು ಹೇಳುವ ವಾಕ್ಯಗಳನ್ನು ತೆಗೆದುಕೊಳ್ಳೋಣ. ಸಾಯಂವ್ಯಾಪ್ತಿ ಎಂದರೇನು ? ಇದಕ್ಕೆ ಉತ್ತರವನ್ನು ಏಕದೇಶಿಗಳು ಕೋಶದ ಆಧಾರದಿಂದ ಸಾಯಂಸಂಬಂಧವನ್ನು ಹೊಂದಿರುವ ತಿಥಿ, ಸಾಯಂವ್ಯಾಪ್ತತಿಥಿ ಎಂದು ಅರ್ಥವನ್ನು ಹೇಳುತ್ತಾರೆ. ಇದಕ್ಕೆ ಯಾವ ವಚನದ ಆಧಾರವೂ ಇಲ್ಲ. ಈ ಸಂದರ್ಭದಲ್ಲಿ ಸಾಯಂವ್ಯಾಪ್ತಿ ಎಂದರೇನೆಂಬುದನ್ನು ಸ್ಮೃತಿಕಾರರು ಯಾರೂ ಸ್ಪಷ್ಟಪಡಿಸದೇ ಇದ್ದಿದ್ದರೆ, ಅರ್ಥ ಹೊಂದುತ್ತಿದ್ದಿದ್ದರೆ, ಹಾಗೆ ಅರ್ಥಮಾಡಬಹುದಾಗಿತ್ತು ; ಆದರೆ ಅರ್ಥವಂತೂ ಹೊಂದುವದೇ ಇಲ್ಲವೆಂಬುದನ್ನು ಮೇಲೆಯೇ ತೋರಿಸಿದ್ದೇನೆ ; ಮುಂದೆಯೂ ತೋರಿಸುತ್ತೇನೆ. ಮುಂದೆ ಉದಾಹರಿಸಿರುವ "ಸ್ಮೃತ್ಯರ್ಥಸಾಗರ"ದ (೧೭) ವಾಕ್ಯವೂ, "ಧರ್ಮಪ್ರವೃತ್ತಿ"ಯ (೨೦೩) ವಾಕ್ಯಗಳೂ ಪಾರ್ವಣಶ್ರಾದ್ಧತಿಥಿನಿರ್ಣಯದ ಸಂಬಂಧದಲ್ಲಿ ಸಾಯಂವ್ಯಾಪ್ತಿ ಎಂದರೆ ಸೂರ್ಯೋದಯದಿಂದ ಆರಂಭಿಸಿ ಸಾಯಾಹ್ನದವರೆಗೂ ಇರುವದೆಂದೂ ಹಾರೀತವಾಕ್ಯವು ಅಪರಾಹ್ಣದಿಂದ ಆರಂ

ಥಿಸಿ ಸಾಯಾಹ್ನದವರೆಗೂ ಇರುವದೆಂದೂ, ಬರೀ ಸಾಯಾಹ್ನದಲ್ಲಿರುವದು ಅಲ್ಲವೆಂದೂ ಸ್ಪಷ್ಟವಾಗಿ ಹೇಳುತ್ತವೆ. ಹೀಗೆ ಸ್ಪಷ್ಟವಾಗಿ ನಿರ್ಣಯಿಸಿರುವದಕ್ಕೆ ವಿರುದ್ಧವಾಗಿ ಸ್ವಬುದ್ಧಿಯಿಂದ ಸಾಮಾನ್ಯಸಂಬಂಧವನ್ನು ಹೇಳುವ ಕೋಶವಾಕ್ಯವನ್ನು ಆಧಾರವಾಗಿಟ್ಟುಕೊಂಡು ಸಾಯಂಸಂಬಂಧವೇ ಸಾಯಂ ವ್ಯಾಪ್ತಿ ಎಂದು ಅರ್ಥವನ್ನು ಕಲ್ಪಿಸುವದು ಅಶಾಸ್ತ್ರೀಯವಾದದ್ದೆಂದು ಹೇಳಲೇ ಬೇಕಾಗಿಲ್ಲ.

ಸಾಯಂವ್ಯಾಪ್ತಿಯನ್ನು ಹೇಳುವ ವಾಕ್ಯಗಳು ಯಾವವು ?

೧. ವೇಂಕಟೇಶೀಯ ಪ್ರಯೋಗಮಾಲಾ ೬೨—

**ಯಸ್ಯಾಮಸ್ತಂ ರವಿರ್ಯಾತಿ ಪಿತರಸ್ತಾಮುಪಾಸತೇ |**
**ಸಾ ಪಿತೃಭ್ಯೋ ಯತೋ ದತ್ತೋ ಹ್ಯಪರಾಹ್ಣಸ್ಸ್ವಯಮ್ಭುವಾ**

ಅರ್ಥ :— ಯಾವ ತಿಥಿಯಲ್ಲಿ ಸೂರ್ಯನು ಅಸ್ತನಾಗುತ್ತಾನೋ ಆ ತಿಥಿಯನ್ನು ಪಿತೃಗಳು ಸೇವಿಸುತ್ತಾರೆ. ಏಕೆಂದರೆ ಅಪರಾಹ್ಣವು ಪಿತೃಗಳಿಗೆ ಬ್ರಹ್ಮನಿಂದ ಕೊಡಲ್ಪಟ್ಟ ಕಾಲವು.

ಮೊದಲನೆಯದಾಗಿ ಈ ವಾಕ್ಯದಲ್ಲಿ ಸಾಯಂವ್ಯಾಪ್ತಿ ಎಂಬ ಮಾತು ಬಂದಿಲ್ಲ. ಅಪರಾಹ್ಣದಲ್ಲಿದ್ದು ಸಾಯಾಹ್ನದಲ್ಲಿಯೂ ಇರುವ ತಿಥಿಯನ್ನೇ ಹೇಳಿರುತ್ತದೆಯೆಂದರಲ್ಲವೆ, "ಅಪರಾಹ್ಣವು ಪಿತೃಗಳಿಗೆ ಬ್ರಹ್ಮನಿಂದ ಕೊಡಲ್ಪಟ್ಟ ಕಾಲವು'' ಎಂದು ಹೇಳಿರುವ ಹೇತುವಚನವು ಹೊಂದುತ್ತದೆ ? ಬರೀ ಸಾಯಾಹ್ನದಲ್ಲಿ ಬಂದಿರುವ ತಿಥಿಯನ್ನು ತೆಗೆದುಕೊಂಡರೆ ಪಿತೃಗಳಿಗೆ ಬ್ರಹ್ಮನು ಕೊಟ್ಟ ಅಪರಾಹ್ಣದ ಸಂಬಂಧವೇ ಇಲ್ಲದೇಹೋಗುವದರಿಂದ ಹೇತುವಚನವು ಹೊಂದುವದೇ ಇಲ್ಲ. ಆದುದರಿಂದ ಉದಯದಿಂದ ಸಾಯಾಹ್ನದವರೆಗೆ ಇರುವ ತಿಥಿಯನ್ನೇ ಇಲ್ಲಿ ಹೇಳಿರುತ್ತದೆ ಎಂಬುದು ಸ್ಪಷ್ಟವಾಗಿದೆ. ಇದರಲ್ಲಿ ವಿಧಾಯಕ ಶಬ್ದವು ಯಾವದೂ ಇಲ್ಲದ್ದರಿಂದಲೂ 'ಪಿತರಸ್ತಾಮುಪಾಸತೇ' ಎಂದು ತಿಥಿಯನ್ನು ಹೊಗಳಿರುವದರಿಂದಲೂ. ಉದಯದಿಂದ ಸಾಯಂಕಾಲದವರೆಗೂ ಇರುವ ತಿಥಿಯನ್ನು ಹೊಗಳುವದಕ್ಕೆ ಬಂದಿರುವ ವಾಕ್ಯವಿದೆಂದು ಹೇಳುವದು ಯುಕ್ತವಾಗಿದೆ. ಈ ಪಕ್ಷದಲ್ಲಿ ನಾವು ಮೊದಲೇ ಉದಾಹರಿಸಿರುವಪ್ರಶಸ್ತತಿಥಿ ವಚನಗಳ ಗುಂಪಿಗೇ ಇದೂ ಸೇರತಕ್ಕದ್ದಾಗಿರುತ್ತದೆ.

೨. ವೇಂಕಟೇಶೀಯ ಪ್ರಯೋಗಮಾಲಾ ೬೨ ಬ್ರಹ್ಮಾ—

**ಯಸ್ಯಾಮಿನೋಽಸ್ತಮಭ್ಯೇತಿ ಭೇ ಚ ತಸ್ಯಾಂ ನರೋತ್ತಮಾಃ ।**
**ತಿಥ್ಯಾಂ ಕವ್ಯಂ ಪ್ರದಾಸ್ಯಾಮಿ ಪಿತೄಣಾಂ ತೃಪ್ತಿಕಾರಕಮ್ ॥**
**ತಸ್ಮಾದಸ್ತಮಯೇ ಭಾನೋಃ ಕಲಾಮಾತ್ರಾಪಿ ಯಾ ತಿಥಿಃ ।**
**ಸಕಲಾ ಸಾ ಭವೇನ್ನೄಣಾಮಾಬ್ದಿಕೇ ಶ್ರಾದ್ಧಕರ್ಮಣಿ ॥**

ಅರ್ಥ :— ಎಲೈ ಉತ್ತಮನರರೆ, ಯಾವ ತಿಥಿಯಲ್ಲಿಯೂ ಮತ್ತು ನಕ್ಷತ್ರದಲ್ಲಿಯೂ ಸೂರ್ಯನು ಅಸ್ತವನ್ನು ಹೊಂದುತ್ತಾನೆಯೋ ಆ ತಿಥಿಯಲ್ಲಿ ಪಿತೃಗಳಿಗೆ ತೃಪ್ತಿಕರವಾದ ಕವ್ಯವನ್ನು ಕೊಡುವೆನು. ಆದುದರಿಂದ ಅಸ್ತಮಯಕಾಲದಲ್ಲಿ ಯಾವ ತಿಥಿಯು ಒಂದು ಕಲೆಯಾದರೂ ಇರುತ್ತದೆಯೋ ಆ ತಿಥಿಯು ಆಬ್ದಿಕಶ್ರಾದ್ಧವನ್ನು ಮಾಡಲು ಸಂಪೂರ್ಣ ತಿಥಿಯಾಗುತ್ತದೆ.

ಇಲ್ಲಿಯೂ ಉದಯದಿಂದ ಅಸ್ತಮಯಕಾಲದಲ್ಲಿ ಒಂದು ಕಲೆಯಾದರೂ ಇದ್ದರೇ ಪೂರ್ಣತಿಥಿಯಾಗುತ್ತದೆ. ಆದುದರಿಂದ ಪ್ರಶಸ್ತತಿಥಿಯಾಗುತ್ತದೆ ಬರಿಯ ಸಾಯಂಕಾಲದಲ್ಲಿ ಹುಟ್ಟುವ ತಿಥಿಯಂತೂ ಪೂರ್ಣತಿಥಿಯಾಗುವಂತೆಯೇ ಇಲ್ಲ. ಈ ಕಾರಣದಿಂದ ಈ ವಚನವೂ ಪ್ರಶಸ್ತತಿಥಿಬೋಧಕವೇ ಹೊರತು ಶ್ರಾದ್ಧತಿಥಿವಿಧಾಯಕವಲ್ಲ.

೩. ಪ್ರಯೋಗಮಾಲಾ ೬೨ ನಾರದಃ—

**ಘಟಿಕಾರ್ಧಾತ್ಪರಂ ಯೋಽನ್ಯಂ ರವಿರ್ಯಾತ್ಯಸ್ತಪರ್ವತಮ್ ।**
**ಹ್ರಾಸೇ ವಾ ಸಕಲೇತ್ಯುಕ್ತಾ ವೃದ್ಧಾ ವಾಧಿಕ್ಯತಾ ತು ಯಾ ॥**

ಅರ್ಥ :— ಹ್ರಾಸದಲ್ಲಿ ಯಾವ ತಿಥಿಯು ಅಸ್ತಾನಂತರವೂ ಅರ್ಧಘಳಿಗೆ ಇರುತ್ತದೆಯೋ ವೃದ್ಧಿಯಲ್ಲಿ ಇನ್ನೂ ಹೆಚ್ಚಾಗಿರುತ್ತದೆಯೋ ಆ ತಿಥಿಯು ಪೂರ್ಣತಿಥಿಯು.

ಇಲ್ಲಿಯೂ ಉದಯದಿಂದ ಅಸ್ತಾನಂತರವೂ ಇರುವ ಪೂರ್ಣತಿಥಿಯನ್ನೇ ಹೇಳಿದೆ. ಕೇವಲ ಸಾಯಾಹ್ನದಲ್ಲಿ ಬಂದಿರುವ ತಿಥಿಯ ವಿಚಾರವೇ ಇಲ್ಲ. ಇದೂ ಪ್ರಶಸ್ತತಿಥಿಬೋಧಕವೆಂಬುದು ಸ್ಪಷ್ಟವೇ ಆಗಿದೆ. ವಿಧಾಯಕವಚನವಲ್ಲವೇ ಅಲ್ಲ.

೪. ಪ್ರಯೋಗಮಾಲಾ ೬೩ ವಸಿಷ್ಠಃ—

**ಪಿತ್ರ್ಯೇಽಸ್ತಮಯವೇಲಾಯಾಂ ಸ್ಪೃಷ್ಟಾ ಪೂರ್ಣಾ ನಿಗದ್ಯತೇ ।**
**ಹ್ರಾಸೇ ವೃದ್ಧೌ ಚ ಮಹತೀ ಯಸ್ಯಾ ತಸ್ಯಾಂ ದತ್ತಮಕ್ಷಯಮ್ ॥**

ಅರ್ಥ :— ಪಿತೃಕರ್ಮದಲ್ಲಿ ಯಾವ ಕ್ಷಯತಿಥಿಯು ಅಸ್ತಮಯಕಾಲವನ್ನು ಮುಟ್ಟಿರುತ್ತದೆಯೋ ವೃದ್ಧತಿಥಿಯು ಇನ್ನೂ ಹೆಚ್ಚಾಗಿರುತ್ತದೆಯೋ ಆ ತಿಥಿಯು ಪೂರ್ಣ ತಿಥಿಯು. ಅದರಲ್ಲಿ ಮಾಡಿದ ಶ್ರಾದ್ಧವು ಅಕ್ಷಯವಾದದ್ದು. ಇಲ್ಲಿಯೂ ಅಸ್ತಮಯಕಾಲವನ್ನು ಮುಟ್ಟಬೇಕಾದರೆ ಉದಯದಿಂದಲೇ ಆರಂಭಿಸಬೇಕೆಂಬುದು ಸ್ಪಷ್ಟವಾಗಿದೆ.

ಅಸ್ತಮಯದಲ್ಲಿ ಹುಟ್ಟಿದ ತಿಥಿಯಾದರೆ ಪೂರ್ಣತಿಥಿಯೂ ಆಗುವದೇ ಇಲ್ಲ. ಆದುದರಿಂದ ಉದಯದಿಂದ ಅಸ್ತಮಯಕಾಲವನ್ನು ಮುಟ್ಟುವ ಪೂರ್ಣ ತಿಥಿಯನ್ನೇ ಹೇಳಿದೆ. ಇಲ್ಲಿಯೂ ವಿಧಾಯಕಶಬ್ದವಿಲ್ಲ.

೫. ವೈದ್ಯನಾಥೀಯ ಸ್ಮೃತಿಮುಕ್ತಾಫಲವ್ ೨೪೫—

**ದಿನಾನ್ತೇ ಪಞ್ಚನಾಡ್ಯಸ್ತು ಪುಣ್ಯಾಃ ಪ್ರೋಕ್ತಾ ಮನೀಷಿಭಿಃ |**
**ಉದಯೇ ಚ ತಥಾ ಪಿತ್ರ್ಯೇ ಪೂರ್ವಾ ಸ್ಯಾದನ್ಯಥಾ ತಿಥಿಃ ||**

ಅರ್ಥ :— ಉದಯದಲ್ಲಿ ಐದು ಘಳಿಗೆಗಳು ದೇವಕಾರ್ಯಕ್ಕೂ ಸಾಯಂಕಾಲದಲ್ಲಿ ಐದು ಘಳಿಗೆಗಳು ಪಿತೃಕಾರ್ಯಕ್ಕೂ ಪುಣ್ಯಘಳಿಗೆಗಳೆಂದು ಹೇಳಲ್ಪಟ್ಟವೆ. ಹಾಗಿಲ್ಲದಿದ್ದರೆ ಪೂರ್ವತಿಥಿಯು ಗ್ರಾಹ್ಯವು.

ಕೇವಲ ಸಾಯಾಹ್ನದಲ್ಲಿ ಪಿತೃಕರ್ಮವನ್ನು ಬೇರೆ ವಚನದಿಂದ ನಿಂದಿಸಿರುವದರಿಂದ ಏನಾದರೂ ಕಾರಣದಿಂದ ಅಪರಾಹ್ಣವು ತಪ್ಪಿಹೋದಾಗ ಸಾಯಾಹ್ನದಲ್ಲಿಯೂ ಮಾಡಬಹುದೆಂದು ಗೌಣಕರ್ಮಕಾಲವನ್ನು ಹೇಳುವದಕ್ಕೆ ಬಂದಿರುತ್ತದೆ (ಕಾಲಮಾಧವೀಯ ಪುಟ ೯೭). ಈ ಗೌಣಕಾಲವನ್ನು ಹೊಗಳುವದಕ್ಕಾಗಿ ಸಾಯಂಕಾಲದ ೫ ಘಳಿಗೆಗಳು ಪಿತೃಗಳಿಗೆ ಪುಣ್ಯಕಾಲವೆಂದು ಹೇಳಿದೆ. ಸಾಯಂ
* ಕಾಲದ ತಿಥಿಯನ್ನು ವಿಧಿಸುವದಕ್ಕಲ್ಲ. ಮುಂದೆ ೧೫ನೇ ಪುಟವನ್ನು ನೋಡಿ.

ಸಾಯಾಹ್ನವ್ಯಾಪ್ತಿಯನ್ನು ನಿರ್ಣಯಿಸುವ ವಾಕ್ಯಗಳು ಯಾವವು ?

೧. ಸ್ಮೃತ್ಯರ್ಥಸಾಗರಃ ಪುಟ ೧೭—

**ಸೂರ್ಯೋದಯಮಾರಭ್ಯ ಆಸಾಯಾಹ್ನಂ ಮೃತತಿಥಿಃ ಸ್ಪೃಶೇಚ್ಚೇತ್ಸಾ ತಿಥಿಃ ಪಾರ್ವಣಶ್ರಾದ್ಧೇ ಉತ್ತಮಾ | ತದಭಾವೇ ಅಪರಾಹ್ಣವ್ಯಾಪ್ತಾ ||**

ಅರ್ಥ :— ಮೃತತಿಥಿಯು ಸೂರ್ಯೋದಯದಿಂದ ಆರಂಭಿಸಿ ಸಾಯಾಹ್ನವನ್ನು ಮುಟ್ಟಿದ್ದೇ ಆದರೆ ಆ ತಿಥಿಯು ಪಾರ್ವಣಶ್ರಾದ್ಧದಲ್ಲಿ ಉತ್ತಮತಿಥಿಯು. ಅದಿಲ್ಲದಿದ್ದರೆ ಅಪರಾಹ್ಣವ್ಯಾಪ್ತತಿಥಿಯು ಗ್ರಾಹ್ಯವು. * ಕಾಲಮಾಧವಃ 93/94
ಉದಿತೇ ದೈವತಂ ಭಾನೌ ಪಿತ್ರ್ಯಂ ಚಾಸ್ತಮಿತೇ ರವೌ ದ್ವಿಮುಹೂರ್ತಂ ತ್ರಿರಹ್ನಶ್ಚ ಪ್ರಾತಿಕಾರ್ಧವಸ್ತಮಿತ್ಯಯೋಃ ||
ತದೇತತ್ಸಾಮಾನ್ಯವ್ಯಾಪ್ತಿಶ್ಚೇತ್ಸಾಮಾನ್ಯಶಾಸ್ತ್ರಂ ರವೇ [illegible]
[illegible]

೨. ಧರ್ಮಪ್ರವೃತ್ತಿಃ ೨೦೩—

**ರವೇರುದಯಮಾರಭ್ಯ ಸಾಯಂ ಯಾ ಸ್ಪೃಶತೇ ತಿಥಿಃ ।**
**ಸೈವ ಪ್ರತ್ಯಾಬ್ದಿಕೇ ಗ್ರಾಹ್ಯಾ ಪೂರ್ವಾ ಸ್ಯಾದನ್ಯಥಾ ತಿಥಿಃ ॥**

ಅರ್ಥ :—ಸೂರ್ಯೋದಯದಿಂದ ಆರಂಭಿಸಿ ಸಾಯಂಕಾಲವನ್ನು ಯಾವ ತಿಥಿಯು ಮುಟ್ಟುತ್ತದೆಯೋ ಆ ತಿಥಿಯನ್ನೇ ಪ್ರತ್ಯಾಬ್ದಿಕಶ್ರಾದ್ಧತಿಥಿಯನ್ನಾಗಿ ಗ್ರಹಿಸಬೇಕು. ಹಾಗಿಲ್ಲದಿದ್ದರೆ ಅಂದರೆ ಉದಯದಿಂದ ಆರಂಭಿಸಿ ಅಪರಾಹ್ಣಕ್ಕೂ ಮುಂಚೆಯೇ ತಿಥಿಯು ಮುಗಿದುಬಿಟ್ಟಿದ್ದರೆ ಪೂರ್ವತಿಥಿಯನ್ನೇ ಶ್ರಾದ್ಧತಿಥಿಯನ್ನಾಗಿ ಗ್ರಹಿಸಬೇಕು.

೩. ಧರ್ಮಪ್ರವೃತ್ತಿಃ ೨೦೩—

**ತಿಥಿರ್ಯೋದಯಮಾರಭ್ಯ ಸಾಯಾಹ್ನಂ ಯದಿ ಚೇತ್ಸ್ಪೃಶೇತ್ ।**
**ಪ್ರತ್ಯಾಬ್ದಿಕೇ ಮಾಸಿಕೇ ಸಾ ಗ್ರಾಹ್ಯೇತಿ ಮನುರಬ್ರವೀತ್ ॥**

ಅರ್ಥ :— ತಿಥಿಯು ಉದಯದಿಂದ ಆರಂಭಿಸಿ ಸಾಯಾಹ್ನವನ್ನು ಮುಟ್ಟಿದ್ದೇ ಆದರೆ ಆ ತಿಥಿಯನ್ನು ಪ್ರತ್ಯಾಬ್ದಿಕತಿಥಿಯನ್ನಾಗಿಯೂ ಮಾಸಿಕತಿಥಿಯನ್ನಾಗಿಯೂ ಗ್ರಹಿಸಬೇಕೆಂದು ಮನುವು ಹೇಳಿದನು.

ಮೇಲ್ಕಂಡ ವಾಕ್ಯಗಳಿಂದ ಸಾಯಂಕಾಲದಲ್ಲಿ ಮಾತ್ರ ಹುಟ್ಟಿಬಂದಿದ್ದರೆ ಅದು ಸಾಯಂವ್ಯಾಪ್ತಿ ಎನ್ನಿಸುವದಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಏಕದೇಶಿಗಳು ಉದಾಹರಿಸುವ ನಿಬಂಧವಾಕ್ಯಗಳನ್ನು ಈ ದೃಷ್ಟಿಯಿಂದ ನೋಡಿದರೆ ಕೇವಲ ಸಾಯಂಕಾಲದಲ್ಲಿ ಮಾತ್ರ ಬಂದಿರುವ ತಿಥಿಯನ್ನು ಪಾರ್ವಣಶ್ರಾದ್ಧ ತಿಥಿಯನ್ನಾಗಿ ಗ್ರಹಿಸಲು ಯಾವ ಆಧಾರವೂ ಸಿಕ್ಕುವದಿಲ್ಲ. ಪ್ರತ್ಯುತ ಈ ವಾಕ್ಯಗಳಿಗೆ ವಿರೋಧ ಬರುತ್ತದೆ. ಅವರು ಉದಾಹರಿಸುವ ವಾಕ್ಯಗಳಲ್ಲಿ ಯಾವ ವಿಧಾಯಕವಾಕ್ಯವೂ ಇಲ್ಲವೆಂದು ತೋರಿಸಿರುತ್ತೇವೆ.

ಪಾರ್ವಣಶ್ರಾದ್ಧಕ್ಕೆ ಅಪರಾಹ್ಣವ್ಯಾಪ್ತಿಯ ಜೊತೆಗೆ ಸಾಯಾಹ್ನವ್ಯಾಪ್ತಿಯೂ ಆವಶ್ಯಕವೆ ?

ಆವಶ್ಯಕವಿಲ್ಲ. ಇದ್ದರೆ ಪ್ರಶಸ್ತವಾದ ತಿಥಿಯಾಗುತ್ತದೆ. ಅಪರಾಹ್ಣವ್ಯಾಪ್ತಿಯಂತೂ ಇದ್ದೇ ಇರಬೇಕು.

೧. ವೈದ್ಯನಾಥೀಯ ಸ್ಮೃತಿಮುಕ್ತಾಫಲವು ೨೪೫—

**ದಿನಾನ್ತೇ ಷಣ್ಮುಹೂರ್ತಾನಾದ್ಯೈಃ .... ಇತ್ಯಾದಿನಾ ಸಾಯಾಹ್ನವ್ಯಾಪ್ತಿರಾವಶ್ಯಕೀ ಇತಿ ಚೇನ್ನ ಯಮೇನ ನಿಷಿದ್ಧತ್ವಾತ್ ।**

ಅರ್ಥ :—ದಿನಾಂತದಲ್ಲಿ ಐದು ಘಳಿಗೆಗಳು ಪಿತೃಕರ್ಮಕ್ಕೆ ಪುಣ್ಯವಾದವು ಎಂಬುದರಿಂದ ಸಾಯಾಹ್ನವ್ಯಾಪ್ತಿಯೂ ಅವಶ್ಯಕವೆಂದಾಗಲಿ ಎಂದರೆ ಯಮನು ನಿಷೇಧಿಸಿದುದರಿಂದ ಅವಶ್ಯಕವಿಲ್ಲ.

೨. ಕಾಲಮಾಧವಃ ೯೭—

**ನನು ಸಾಯಾಹ್ನವ್ಯಾಪಿ ಕರ್ಮಕಾಲತ್ವಂ ಕ್ವಚಿತ್ಸ್ಮರ್ಯತೇ ದಿನಾನ್ತೇ ಇತ್ಯನೇನ ಇತಿ । ಮೈವಮ್ ಯಮೇನ ನಿಷಿದ್ಧತ್ವಾತ್ ॥**

ಅರ್ಥ :— ಕೆಲವೆಡೆಗಳಲ್ಲಿ ಸಾಯಂಕಾಲದಲ್ಲಿ ಐದು ಘಳಿಗೆಗಳು ಪುಣ್ಯವಾದವು ಎಂದು ಹೇಳಿರುವದರಿಂದ ಸಾಯಂವ್ಯಾಪ್ತಿಯುಳ್ಳ ಕಾಲವು ಕರ್ಮಕಾಲವಾಗಲಿ ಎಂದರೆ ಆಗುವದಿಲ್ಲ. ಯಮನು ಸಾಯಂಕಾಲವನ್ನು ಶ್ರಾದ್ಧಕರ್ಮಕಾಲವಲ್ಲವೆಂದು ನಿಷೇಧಿಸಿರುತ್ತಾನೆ.

ಕರ್ಮಕಾಲವು ಯಾವದೋ ಆ ಕಾಲದ ವ್ಯಾಪ್ತಿ ಇರುವ ತಿಥಿಯನ್ನೇ ಗ್ರಹಿಸಬೇಕೆಂಬುದು ಎಲ್ಲರಿಗೂ ಸಮ್ಮತವಾದ ವಿಷಯವಲ್ಲವೆ ?

ಸಾಯಂಕಾಲವನ್ನು ಯಮಾದಿಗಳು ನಿಷೇಧಿಸಿರುವದಲ್ಲದೆ ಈ ಮುಂದೆ ಉದಾಹರಿಸುವ ವಚನದಲ್ಲಿ ಬೋಧಾಯನರೇ ನಿಷೇಧಿಸಿರುತ್ತಾರೆ. ಸಾಯಂಕಾಲವು ಕರ್ಮಕಾಲವಲ್ಲವೆಂಬುದನ್ನು ಏಕದೇಶಿಗಳೂ ಒಪ್ಪಿರುತ್ತಾರೆ. ಅಪರಾಹ್ಣವೇ ಕರ್ಮಕಾಲವಾಗುವದರಿಂದ ಕರ್ಮಕಾಲವ್ಯಾಪ್ತತಿಥಿಯಾಗಬೇಕಾದರೆ ಬೋಧಾಯನರಿಗೂ ಅಪರಾಹ್ಣವ್ಯಾಪ್ತತಿಥಿಯಾಗಬೇಕೆಂದು ನಿಶ್ಚಯಿಸಲೇಬೇಕಾಗಿದೆ.

೧. ವೈದ್ಯನಾಥೀಯ ಸ್ಮೃತಿಮುಕ್ತಾಫಲಮ್ ೨೪೫ ಯಮಃ—

**ಸಾಯಾಹ್ನಸ್ತ್ರಿಮುಹೂರ್ತಸ್ಸ್ಯಾಚ್ಛ್ರಾದ್ಧಂ ತತ್ರ ನ ಕಾರಯೇತ್ ।**
**ರಾಕ್ಷಸೀ ನಾಮ ಸಾ ವೇಲಾ ಗರ್ಹಿತಾ ಸರ್ವಕರ್ಮಸು ॥**

ಅರ್ಥ :— ಸಾಯಾಹ್ನದಲ್ಲಿ ಮೂರು ಮುಹೂರ್ತಗಳಲ್ಲಿ ಶ್ರಾದ್ಧವನ್ನು ಮಾಡಬಾರದು. ಆ ವೇಳೆಯು ರಾಕ್ಷಸೀವೇಳೆಯಾಗಿರುವದರಿಂದ ಸರ್ವಕರ್ಮಗಳಿಗೂ ನಿಂದಿತವಾಗಿದೆ.

೨. ಪುರುಷಾರ್ಥಚಿನ್ತಾಮಣಿಃ ೪೬೮ **ಬೋಧಾಯನಃ**—

**ಚತುರ್ಥೇ ಪ್ರಹರೇ ಪ್ರಾಪ್ತೇ ಯಶ್ಶ್ರಾದ್ಧಂ ಕುರುತೇ ದ್ವಿಜಃ ।**
**ತದನ್ನಂ ರಾಕ್ಷಸೋ ಭುಙ್ಕ್ತೇ ನಿರಾಶಾಃ ಪಿತರೋ ಗತಾಃ ॥**

ಅರ್ಥ :-- ನಾಲ್ಕನೆಯ ಯಾಮವು ಬರಲಾಗಿ ಯಾವ ದ್ವಿಜನು ಶ್ರಾದ್ಧವನ್ನು ಮಾಡುತ್ತಾನೋ ಆ ಶ್ರಾದ್ಧಾನ್ನವನ್ನು ರಾಕ್ಷಸನು ಊಟಮಾಡುತ್ತಾನೆ. ಪಿತೃಗಳು ನಿರಾಶರಾಗಿ ಹೋಗುತ್ತಾರೆ.

೩. ಶ್ರಾದ್ಧಕ್ರಿಯಾಕೌಮುದೀ ೩೦೫, ಸ್ಮೃತ್ಯರ್ಥಸಾಗರ ೬೧, ಚಂದ್ರಿಕಾಯಾಂ ಮಾತ್ಸ್ಯೇ ೧೫, ಕಾಲಮಾಧವಃ ೯೭—

ಈ ಸ್ಥಳಗಳಲ್ಲೆಲ್ಲ ಸಾಯಂಕಾಲದಲ್ಲಿ ಶ್ರಾದ್ಧಕರ್ಮವನ್ನು ಮಾಡಬಾರದೆಂದು ನಿಷೇಧವಿದೆ.

ಕರ್ಮಕಾಲವ್ಯಾಪ್ತತಿಥಿಯೇ ಕರ್ಮತಿಥಿಯಾಗಬೇಕೆಂಬುವಕ್ಕೆ ಪ್ರಮಾಣವಚನಗಳು ಯಾವವು ?

ಕಾಲಮಾಧವಃ ೮೬—

**ಕರ್ಮಣೋ ಯಸ್ಯ ಯಃ ಕಾಲಸ್ತತ್ಕಾಲವ್ಯಾಪಿನೀ ತಿಥಿಃ |**
**ತಯಾ ಕರ್ಮಾಣಿ ಕುರ್ವೀತ ಹ್ರಾಸವೃದ್ಧೀ ನ ಕಾರಣಮ್ ||**

ಅರ್ಥ :-- ಯಾವ ಕರ್ಮಕ್ಕೆ ಯಾವ ಕಾಲವನ್ನು ಶಾಸ್ತ್ರದಲ್ಲಿ ವಿಧಿಸಿದೆಯೋ ಆ ಕಾಲದಲ್ಲಿ ವ್ಯಾಪಿಸಿರುವ ತಿಥಿಯನ್ನು ಆ ಕರ್ಮತಿಥಿಯನ್ನಾಗಿ ಗ್ರಹಿಸಬೇಕು. ಆ ಕರ್ಮಕಾಲವ್ಯಾಪ್ತತಿಥಿಯಲ್ಲಿ ಕರ್ಮವನ್ನು ಮಾಡಬೇಕು. ಇಲ್ಲಿ ಹ್ರಾಸವೃದ್ಧಿಗಳು ಕಾರಣವಲ್ಲ.

ಇಂತಹ ವಚನಗಳು ಹೇರಳವಾಗಿವೆ. ಇವು ವಾದಗ್ರಸ್ತವಲ್ಲದ್ದರಿಂದ ಹೆಚ್ಚು ವಚನಗಳನ್ನು ಉದಾಹರಿಸಿಲ್ಲ. ಅಪರಾಹ್ಣವೇ ಶ್ರಾದ್ಧಕ್ಕೆ ವಿಹಿತವೆಂದು ಆಗಿ, ಸಾಯಂಕಾಲವು ನಿಷಿದ್ಧವೆಂತ ಸ್ಮೃತಿಕಾರರೂ, ಬೋಧಾಯನರರೂ– ಈ ನಮ್ಮ ಏಕದೇಶಿಗಳೂ ಸಹ– ಐಕಕಂಠ್ಯದಿಂದ ಒಪ್ಪಿರುವಾಗ ವಿಹಿತವಾದ ಅಪರಾಹ್ಣವ್ಯಾಪ್ತತಿಥಿಯನ್ನು ಬಿಟ್ಟು ನಿಷಿದ್ಧವಾದ ಕೇವಲ ಸಾಯಂಕಾಲದ ತಿಥಿಯನ್ನೇ ಬೋಧಾಯನರು ವಿಶೇಷವಾಗಿ ಗ್ರಹಿಸಬೇಕೆಂದು ಯಾವ ಆಧಾರದಮೇಲೆ ನಿರ್ಣಯಿಸುತ್ತಾರೋ ಅದನ್ನು ಈ ನಮ್ಮ ಏಕದೇಶಿಗಳೇ ನಿರ್ಣಯಿಸಬೇಕು.

ಪಾರ್ವಣಶ್ರಾದ್ಧವನ್ನು ಮಾಡಲು ವಿಹಿತವಾದ ಕಾಲವ್ಯಾವುದು?

೧. ಶ್ರಾದ್ಧಚನ್ದ್ರಿಕಾ ೭೫ ಶ್ಲೋಕಗೌತಮಃ--

**ಊರ್ಧ್ವಂ ಮುಹೂರ್ತಾತ್ಕುತುಪಾದ್ಯನ್ಮುಹೂರ್ತಚತುಷ್ಟಯಮ್ |**
**ಮುಹೂರ್ತಪಞ್ಚಕಂ ಹ್ಯೇತತ್ಸ್ವಧಾಭವನಮಿಷ್ಯತೇ ||**

ಅರ್ಥ :— ಕುತುಪಮುಹೂರ್ತದಿಂದ ಮುಂದೆ ನಾಲ್ಕು ಮುಹೂರ್ತಗಳು ಒಟ್ಟು ಐದು ಮುಹೂರ್ತಗಳು ಪಾರ್ವಣಶ್ರಾದ್ಧಕರ್ಮಕಾಲವೆಂದು ಎಣಿಸಲ್ಪಟ್ಟಿರುತ್ತವೆ.

೨. ಪುರುಷಾರ್ಥಚಿನ್ತಾಮಣಿಃ ೪೬೧—

**ಕುತುಪಮಾರಭ್ಯ ಮುಹೂರ್ತಚತುಷ್ಟಯಮ್ ಪಾರ್ವಣಸ್ಯ ಮುಖ್ಯಃ ಕಾಲಃ ||**

ಅರ್ಥ :— ಕುತುಪಕಾಲದಿಂದ ಪ್ರಾರಂಭಿಸಿ ನಾಲ್ಕು ಮುಹೂರ್ತಗಳು ಪಾರ್ವಣ ಶ್ರಾದ್ಧಕ್ಕೆ ಮುಖ್ಯಕಾಲವು. ಅಂದರೆ ೧ ಘಂಟೆ ೩೬ ನಿಮಿಷಗಳಿಂದ ೩ ಘಂಟೆ ೩೬ ನಿಮಿಷಗಳವರೆಗೆ ನಾಲ್ಕು ಘಂಟೆಗಳ ಕಾಲವು.

## ಕುತುಪಕಾಲವ್ಯಾವದು ?

೧. ಧರ್ಮಸಿಂಧು ೩೦೧—

**ದಿನಸ್ಯ ಪಞ್ಚದಶೋ ಭಾಗೋ ಮುಹೂರ್ತಃ| ತತ್ರ ಸಪ್ತಮೋ ಗಾಂಧರ್ವಃ, ಅಷ್ಟಮೋ ಮುಹೂರ್ತಃ ಕುತುಪಃ, ನವಮೋ ರೌಹಿಣಃ||**

ಅರ್ಥ :— ಹಗಲನ್ನು ಹದಿನೈದು ಭಾಗಮಾಡಿದಾಗ ಒಂದೊಂದು ಭಾಗಕ್ಕೆ ಮುಹೂರ್ತವೆಂದು ಹೆಸರು ( ಎರಡೆರಡು ಘಳಿಗೆಗಳು ). ಅಲ್ಲಿ ೭ನೆಯ ಮುಹೂರ್ತಕ್ಕೆ ಗಾಂಧರ್ವವೆಂದೂ ಎಂಟನೆಯ ಮುಹೂರ್ತಕ್ಕೆ ಕುತುಪವೆಂದೂ, ಒಂಭತ್ತನೆಯ ಮುಹೂರ್ತಕ್ಕೆ ರೌಹಿಣವೆಂದೂ ಹೆಸರು. ಕುತುಪಕಾಲ ೧೧ ಘಂಟೆ ೩೬ ನಿಮಿಷಗಳಿಂದ ೧೨ ಘಂಟೆ ೨೪ ನಿಮಿಷಗಳವರೆಗೆ ; ರೌಹಿಣಕಾಲ ೧೨ ಘಂಟೆ ೨೪ ನಿಮಿಷಗಳಿಂದ ೧ ಘಂಟೆ ೧೨ ನಿಮಿಷಗಳವರೆಗೆ.

## ಶ್ರಾದ್ಧವನ್ನು ಆರಂಭಿಸುವ ಮುಖ್ಯಕಾಲವು ಯಾವದು ?

ಧರ್ಮಸಿಂಧುಃ ೩೦೧—

**ಏತಚ್ಚ ಪಾರ್ವಣಶ್ರಾದ್ಧಂ ಕುತುಪಾದಿಮುಹೂರ್ತಪಞ್ಚಕೇ ಕಾರ್ಯಮ್ । ನ ಸಾಯಾಹ್ನೇ। ನ ರಾತ್ರೌ | ನ ಪ್ರಾತಸ್ಸಂಗಮಯೋಃ ॥**

ಅರ್ಥ :— ಈ ಪಾರ್ವಣಶ್ರಾದ್ಧವು ಕುತುಪಾದಿ ಐದು ಮುಹೂರ್ತಗಳಲ್ಲಿ ಮಾಡತಕ್ಕದ್ದು. ಸಾಯಾಹ್ನದಲ್ಲಿಯೂ, ರಾತ್ರಿಯಲ್ಲಿಯೂ ಮತ್ತು ಪ್ರಾತಸಙ್ಗಮಕಾಲಗಳಲ್ಲಿಯೂ ಮಾಡತಕ್ಕದ್ದಲ್ಲ. ಅಂದರೆ ೧೧ ಘಂಟೆ ೩೬ ನಿಮಿಷಗಳಿಂದ ಮೂರು ಘಂಟೆ ೩೬ ನಿಮಿಷಗಳೊಳಗೆ ಮಾಡತಕ್ಕದ್ದು. ನಿಮಿತ್ತಾಂತರದಿಂದ ಕರ್ಮಕಾಲವು ತಪ್ಪಿದರೆ ಆ ದಿನದಲ್ಲಿ ಮಾಡಬಹುದೆಂಬ ಸಾಕಲ್ಯವಚನವು ಆಪದ್ಧರ್ಮದ ವಿಷಯವಾಗಿರುವದರಿಂದ ಕರ್ಮಕಾಲನಿರ್ಣಯವಾಕ್ಯವಾಗುವದಿಲ್ಲ. ಆದಕಾರಣ ಇದರಿಂದ ತಿಥಿನಿರ್ಣಯಕ್ಕೆ ಯಾವ ಪ್ರಯೋಜನವೂ ಬರುವಂತಿಲ್ಲ.

## ಅಪರಾಹ್ಣವನ್ನು ನಿರ್ಣಯಿಸುವ ಬಗೆ ಹೇಗೆ ?

ಕಾಲಮಾಧವಃ ೮೭—

**ಬಹುಶಾಸ್ತ್ರಾನುರೋಧೇನ ಪಞ್ಚಧಾ ವಿಭಾಗ ಏವ ಅತ್ರ ಗ್ರಾಹ್ಯಃ ಚತುರ್ಥೋ ಭಾಗಃ ಅಪರಾಹ್ಣಃ ॥**

ಅರ್ಥ :— ಶ್ರಾದ್ಧವಿಷಯದಲ್ಲಿ ಬಹಳ ಶಾಸ್ತ್ರಗಳಿಗೆ ಅನುಗುಣವಾಗಿ ಹಗಲನ್ನು ಐದು ಭಾಗವನ್ನು ಮಾಡಿದಾಗ ನಾಲ್ಕನೆಯ ಭಾಗವು ಅಪರಾಹ್ಣವು. ಅಂದರೆ ೧೮ ಘಳಿಗೆಗಳಿಂದ ೨೪ ಘಳಿಗೆಗಳು ಪೂರ್ತಿ. (ಒಂದು ಘಂಟೆ ಹನ್ನೆರಡು ನಿಮಿಷಗಳಿಂದ ಮೂರು ಘಂಟೆ ಮೂವತ್ತಾರು ನಿಮಿಷಗಳವರೆಗೆ).

ಸ್ಮೃತ್ಯರ್ಥಸಾಗರ ೧೭ರಲ್ಲಿಯೂ ಇದೇ ರೀತಿ ಐದು ಭಾಗವನ್ನೇ ಸ್ಪಷ್ಟವಾಗಿ ಹೇಳಿರುತ್ತದೆ. ಆ ವಿಚಾರದಲ್ಲಿಯೂ ಸರ್ವರಲ್ಲಿಯೂ ಸರ್ವತ್ರವೂ ದಿನವನ್ನು ಐದು ಭಾಗ ಮಾಡಿದಾಗ ನಾಲ್ಕನೆಯ ಭಾಗವನ್ನು ಅಪರಾಹ್ಣವೆಂದು ಎಣಿಸುವದೇ ಕಂಡುಬಂದಿರುತ್ತದೆ. ಕರ್ಮಕಾಲವನ್ನು ೧೧-೩೬ರಿಂದ ೩-೩೬ರ ವರೆಗೆ ಹೇಳಿರುವದರಿಂದಲೂ ಅಪರಾಹ್ಣವೆಂದರೆ ಮೇಲೆ ತಿಳಿಸಿರುವಂತೆ ೧-೧೨ ರಿಂದ ೩-೩೬ ಘಂಟೆಗಳವರೆಗೆ ಆಗುವದರಿಂದಲೂ ಕರ್ಮಕಾಲವ್ಯಾಪ್ತತಿಥಿಯೇ ಮುಖ್ಯವಾದ ಕರ್ಮತಿಥಿಯೆಂದು ಮೇಲೆ ಹೇಳಿರುವದರಿಂದಲೂ ಅಪರಾಹ್ಣವ್ಯಾಪ್ತತಿಥಿಯೇ ಪಾರ್ವಣಶ್ರಾದ್ಧತಿಥಿಯು ಎಂದು ಸರ್ವರಿಗೂ ಒಂದೇ ವಿಧವಾದ ನಿರ್ಣಯವೆಂಬುದು ಸುಸ್ಪಷ್ಟವಾಗಿರುತ್ತದೆ. 'ಅಪರಾಹ್ಣಃ ಪಿತೃಣಾಂ' ಎಂಬ ಶ್ರುತಿಯಲ್ಲಿ ಪೂರ್ವಾಹ್ಣ, ಮಧ್ಯಂದಿನ ಮತ್ತು ಅಪರಾಹ್ಣ ಎಂದು ಮೂರನ್ನೇ ಹೇಳಿದ್ದರೂ ಮಿಕ್ಕ ವಿಭಾಗವನ್ನು ನಿಷೇಧಿಸುವದಕ್ಕಾಗಲಿ ಹೀಗೆ ಮೂರು ವಿಭಾಗವನ್ನೇ ತೆಗೆದುಕೊಳ್ಳಬೇಕೆಂಬುದಕ್ಕಾಗಲಿ ಆ ವಚನ ಬಂದಿರುವದಿಲ್ಲ. ಈ ಮೂರು ಕಾಲವಿಭಾಗಗಳ ವಿನಿಯೋಗವನ್ನು ಮಾತ್ರ ಆ ವಚನವು ಹೇಳುತ್ತದೆ.

## ೧. ಏನಾದರೂ ಕಾರಣದಿಂದ ಅಪರಾಹ್ಣವು ತಪ್ಪಿಹೋದಾಗ ಹೇಗೆ ಮಾಡಬೇಕು ?

ಪುರುಷಾರ್ಥಚಿನ್ತಾಮಣಿಃ ೪೬೮--

**ಮುಖ್ಯತ್ವೇನ ನಿಷಿದ್ಧಸ್ಯಾಪಿ ಸಾಯಾಹ್ನಸ್ಯ ಗೌಣಕಾಲತ್ವ-ಮಾಹ ವ್ಯಾಸಃ ಸ್ವಕಾಲಾತಿಕ್ರಮೇ ಕುರ್ಯಾದ್ರಾತ್ರೇಃ ಪೂರ್ವಂ ಯಥಾ ವಿಧಿ ॥**

ಅರ್ಥ :— ಸಾಯಾಹ್ನವನ್ನು ಮುಖ್ಯಕಾಲವಲ್ಲವೆಂದು ನಿಷಿದ್ಧಿಸಿದ್ದರೂ ತನ್ನ ಕಾಲವು ಮೀರಿದಾಗ ರಾತ್ರಿಗಿಂತ ಮೊದಲು ಮಾಡಬೇಕೆಂದು ವ್ಯಾಸರು ಗೌಣಕಾಲವನ್ನಾಗಿ ಹೇಳುತ್ತಾರೆ. (ಇಲ್ಲಿ ಸಾಯಂಕಾಲವನ್ನು ಗೌಣಕಾಲವೆಂದು ಕಂಠೋಕ್ತವಾಗಿ ಹೇಳಿದೆ.)

೨. ರಾತ್ರಿಗಿಂತ ಮೊದಲು ಮುಗಿಸಲು ಸಾಧ್ಯವಿಲ್ಲದಾಗ ಹೇಗೆ ಮಾಡಬೇಕು ?

ಪುರುಷಾರ್ಥಚಿನ್ತಾಮಣಿಃ ೪೬೯—

**ಪೂರ್ವಂ ಆರಬ್ಧಸ್ಯ ರಾತ್ರಾವಪಿ ಸಮಾಪ್ತಿಮಾಹ ಆಪಸ್ತಂಬಃ ನ ಚ ನಕ್ತಂ ಶ್ರಾದ್ಧಂ ಕುರ್ವೀತ । ಆರಬ್ಧೇ ಚ ಅಭೋಜನಮಾ ಆಸಮಾಪನಾದಿತಿ ॥**

ಅರ್ಥ:— ಪೂರ್ವದಲ್ಲಿ ಆರಂಭಿಸಿದ ಶ್ರಾದ್ಧವನ್ನು ರಾತ್ರಿಯಲ್ಲಿಯೂ ಮುಗಿಸಬಹುದು ಎಂದು ಆಪಸ್ತಂಬರು ಹೇಳುತ್ತಾರೆ. "ರಾತ್ರಿಯಲ್ಲಿ ಶ್ರಾದ್ಧವನ್ನು ಮಾಡಬಾರದು, ಆರಂಭಿಸಿದ್ದನ್ನು ಮುಗಿಸಬೇಕು, ಮತ್ತು ಭೋಜನವಿಲ್ಲ".

೩. ರಾತ್ರಿಯಲ್ಲಿ ಯಾವ ಕಾರಣದಿಂದಲೂ ಆರಂಭಿಸಿ ಮುಗಿಸಕೂಡದೆ ?

ಕಾಲಮಾಧವಃ ೯೮–

**ರಾತ್ರೌ ಸಮಾಪ್ತಿರೇವ ಅಭ್ಯನುಜ್ಞಾಯತೇ ನ ತ್ವಾರಂಭಃ ಇತಿ । ಚೇನ್ನೈವಮ್ । ಆರಂಭಸ್ಯಾಪಿ ತಯಾ ಸಮಾಪ್ತ್ಯಾ ಉಪಲಕ್ಷಣೀಯತ್ವಾತ್ । ಆಬ್ದಿಕಶ್ರಾದ್ಧಪರಿತ್ಯಾಗೇ ಪ್ರತ್ಯವಾಯಬಾಹುಲ್ಯ ಸ್ಮರಣಾತ್ ॥**

ಅರ್ಥ:— ರಾತ್ರಿಯಲ್ಲಿ ಮುಗಿಸುವದಕ್ಕೆ ಮಾತ್ರ ಅಭ್ಯನುಜ್ಞೆ ಇದೆ. ಅರಂಭಕ್ಕೆ ಇಲ್ಲ ಎನ್ನುವದಾದರೆ ಹಾಗಲ್ಲ. ಸಮಾಪ್ತಿ ಮಾಡಬಹುದು ಎಂಬ ಅಭ್ಯನುಜ್ಞೆಯಿಂದ ಪ್ರಾರಂಭವನ್ನೂ ಮಾಡಿ ಮುಗಿಸಬಹುದೆಂದು ಲಕ್ಷಣೆಯಿಂದ ತಿಳಿಯಬಹುದು ; ಏಕೆಂದರೆ ಅಬ್ದಿಕಶ್ರಾದ್ಧವನ್ನು ಬಿಟ್ಟರೆ ಬಹಳ ಪ್ರತ್ಯವಾಯವು ಸ್ಮೃತಿಗಳಿಂದ ತಿಳಿಯಬರುತ್ತದೆ. (ಇದು ಪ್ರಕೃತ ಚರ್ಚೆಗೆ ಸಂಬಂಧಪಟ್ಟ ವಿಷಯವಲ್ಲದ್ದಾದರೂ ಶ್ರಾದ್ಧವಿಚಾರಪರಿಪೂರ್ತಿಗಾಗಿ ಪ್ರಾಸಂಗಿಕವಾಗಿ ಬರೆದಿರುತ್ತೇನೆ.)

ಅಪರಾಹ್ಣದಲ್ಲಿಲ್ಲದ ಕೇವಲ ಸಾಯಂಕಾಲದಲ್ಲಿ ಬಂದಿರುವ ತಿಥಿಯೂ ಗ್ರಾಹ್ಯವಾಗುವ ಸಂದರ್ಭವುಂಟೆ?

೧. ಪುರುಷಾರ್ಥಚಿನ್ತಾಮಣಿಃ ೪೬೧ ಧರ್ಮಸಿಂಧು ೩೦೧—

**ಯದಾ ದಿನದ್ವಯೇಽಪ್ಯಪರಾಹ್ಣಸಂಬಂಧೋ ನಾಸ್ತಿ ತದಾ ಪೂರ್ವೈವ ।**

ಅರ್ಥ:— ಎರಡೂ ದಿನಗಳಲ್ಲಿಯೂ ಅಪರಾಹ್ಣಸಂಬಂಧವಿಲ್ಲದಿರುವಾಗ ಪೂರ್ವ ದಿನವನ್ನೇ ಗ್ರಹಿಸಬೇಕು.

೨. ಕಾಲಮಾಧವಃ ೧೦೩—

**ದಿನದ್ವಯೇಽಪ್ಯಪರಾಹ್ಣಸ್ಪರ್ಶಾಭಾವೇ ಪೂರ್ವಾ ।**

ಅರ್ಥ:— ಎರಡೂ ದಿನಗಳಲ್ಲಿಯೂ ಅಪರಾಹ್ಣಸ್ಪರ್ಶವಿಲ್ಲದಿದ್ದರೆ ಪೂರ್ವ ತಿಥಿಯು ಗ್ರಾಹ್ಯವು.

೩. ವೈದ್ಯನಾಥೀಯ ಸ್ಮೃತಿಮುಕ್ತಾಫಲಮ್ ೨೪೫—

**ಅಹ್ನ್ಯಸ್ತಮಯವೇಲಾಯಾಂ ಕಲಾ ಮಾತ್ರಾ ಯದಾ ತಿಥಿಃ ।**
**ಸೈವ ಪ್ರತ್ಯಾಬ್ದಿಕೇ ಗ್ರಾಹ್ಯಾ ನ ಪರಾ ಪುತ್ರಹಾನಿದಾ**
**ಇತೀದಂ ಅಪರಾಹ್ಣದ್ವಯಸ್ಪರ್ಶಾಭಾವೇ ಸಾಯಂ ತ್ರಿಮು ಹೂರ್ತವ್ಯಾಪಿತಿಥಿಗ್ರಹಣಪರಮಿತಿ ದ್ರಷ್ಟವ್ಯಮ್ ॥**

ಅರ್ಥ:— ಹಗಲಿನಲ್ಲಿ ಅಸ್ತಮಯವೇಲೆಯಲ್ಲಿ ಕಲಾಮಾತ್ರವಾದರೂ ಯಾವಾಗ ತಿಥಿ ಇರುತ್ತದೆಯೋ ಆದೇ ತಿಥಿಯು ಪ್ರತ್ಯಾಬ್ದಿಕತಿಥಿಯಾಗಿ ಗ್ರಾಹ್ಯವಾದದ್ದು. ಪುತ್ರ ಹಾನಿಕರವಾದ ಪರತಿಥಿಯು ಗ್ರಾಹ್ಯವಲ್ಲ. ಈ ವಾಕ್ಯವು ಎರಡು ದಿನಗಳಲ್ಲಿಯೂ ಅಪರಾಹ್ಣಸ್ಪರ್ಶವಿಲ್ಲದಿರುವಾಗ ಸಾಯಂಕಾಲದಲ್ಲಿ ಮೂರು ಮುಹೂರ್ತವಿರುವ ತಿಥಿಯು ನ್ನು ಗ್ರಹಿಸಬೇಕು ಎಂದು ತಿಳಿಸುತ್ತದೆ ಎಂದು ತಿಳಿಯತಕ್ಕದ್ದು.

೪. ನಿರ್ಣಯಸಿಂಧುಃ ೩೩೫—

**ದ್ವ್ಯಹೇಽಪ್ಯವ್ಯಾಪಿನೀ ಚೇತ್ಸ್ಯಾನ್ಮೃತಾಹಸ್ಯ ಯದಾ ತಿಥಿಃ ।**
**ಪೂರ್ವವಿದ್ಧಾ ಪ್ರಕರ್ತವ್ಯಾ ತ್ರಿಮುಹೂರ್ತಾ ಭವೇದ್ಯದಿ ॥**
**— ಇತಿ ಸುಮಂತೂಕ್ತೇಃ ॥**

**ಅಹ್ನೋಽಸ್ತಮಯವೇಲಾಯಾಮಿತೀದಂ ತ್ರಿಮುಹೂರ್ತಸ್ಪೃತಿಃ ।**
**ಪೂರ್ವೇದ್ಯುಸ್ಸಾಯಂ ತ್ರಿಮುಹೂರ್ತಾಭಾವೇ ತು ಪರೈವ ॥**

ಅರ್ಥ:--ಯಾವಾಗ ಮೃತತಿಥಿಯು ಎರಡು ದಿನಗಳಲ್ಲಿಯೂ ಅಪರಾಹ್ಣದಲ್ಲಿ ವ್ಯಾಪಿಸಿದವಾಗಿರುವದಿಲ್ಲವೋ ಆಗ ತ್ರಿಮುಹೂರ್ತವುಳ್ಳ ಪೂರ್ವವಿದ್ಧತಿಥಿಯನ್ನು ಗ್ರಹಿಸಬೇಕು. ಹಗಲಿನಲ್ಲಿ ಅಸ್ತಮಯಸಮಯದಲ್ಲಿ ಕಲಾಮಾತ್ರವಾದರೂ ಇರುವ ತಿಥಿಯನ್ನು ಗ್ರಹಿಸಬೇಕು ಎಂಬುದು ಮೂರು ಮುಹೂರ್ತವನ್ನು ಹೊಗಳುವದಕ್ಕೆ ಬಂದಿರುತ್ತದೆ. ಹಿಂದಿನ ದಿನ ಸಾಯಂಕಾಲದಲ್ಲಿ ಮೂರು ಮುಹೂರ್ತವಿಲ್ಲದಿದ್ದರೆ ಪರತಿಥಿಯನ್ನೇ ಗ್ರಹಿಸಬೇಕು.

ಈ ಮೇಲಿನ ವಾಕ್ಯಗಳಿಂದ ಸರ್ವರೂ ಎರಡು ದಿನಗಳಲ್ಲಿಯೂ ಮೃತತಿಥಿಯು ಅಪರಾಹ್ಣದಲ್ಲಿ ಇಲ್ಲದಿರುವಾಗ ಮಾತ್ರವೇ ಬರೀ ಸಾಯಾಹ್ನದಲ್ಲಿ ಬಂದಿರುವ ಮೂರು ಮುಹೂರ್ತವುಳ್ಳ ತಿಥಿಯನ್ನು ಶ್ರಾದ್ಧತಿಥಿಯನ್ನಾಗಿ ಗ್ರಹಿಸಬೇಕೆಂದೂ ಮೂರು ಮುಹೂರ್ತವಿಲ್ಲದಿದ್ದರೆ "ತ್ರಿಮುಹೂರ್ತಾ ನ ಚೇದ್ವ್ಯಾಪ್ತ್ಯಾ ಪರೈವ ಕುತಪೇ ಹಿ ಸಾ" ಎಂಬ ಗೋಭಿಲವಚನದಂತೆ ಮಾರನೆಯ ದಿನವೇ ಕುತುಪಕಾಲದಲ್ಲಾದರೂ ಆ ತಿಥಿ ಇದ್ದರೆ ಅದನ್ನೇ ಗ್ರಹಿಸಬೇಕೆಂದೂ ಸ್ಪಷ್ಟವಾಗಿ ತಿಳಿಯುಬರುತ್ತದೆ. ಇದರಿಂದ ಅಪರಾಹ್ಣವು ಕರ್ಮಕ್ಕೆ ಮುಖ್ಯಕಾಲವೆಂದೂ, ಏಕದೇಶೀಯರು ಹೇಳುವಂತೆ ಬರೀ ಸಾಯಾಹ್ನದಲ್ಲಿ ಬಂದಿರುವ ತಿಥಿಯನ್ನು ಬೋಧಾಯನರು ಶ್ರಾದ್ಧತಿಥಿಯನ್ನಾಗಿ ಗ್ರಹಿಸಬೇಕೆಂದು ಹೇಳುವ ಅಭಿಪ್ರಾಯವು ನಿರಾಧಾರವಾದದ್ದೆಂದೂ ಸ್ಪಷ್ಟವಾಗಿ ತಿಳಿಯುಬರುತ್ತದೆ.

ಬೋಧಾಯನರೂ ಅಪರಾಹ್ಣವ್ಯಾಪ್ತತಿಥಿಯನ್ನೇ ಪಾರ್ವಣಶ್ರಾದ್ಧತಿಥಿಯನ್ನಾಗಿ ಹೇಳಿದ್ದಾರೆಂಬುವದಕ್ಕೆ ಏನಾದರೂ ಪ್ರಮಾಣವಚನವಿದೆಯೇ ?

'ಇದೆ'.(೧) 'ನಾನು ಬೋಧಾಯನಶಾಖೆಯವ'ನೆಂದು ತಾವೇ ಹೇಳಿಕೊಂಡಿರುವ ಶ್ರೀಮಾಧವಾಚಾರ್ಯರು ಅಪರಾಹ್ಣವ್ಯಾಪ್ತತಿಥಿಯನ್ನೇ ಪಾರ್ವಣಶ್ರಾದ್ಧತಿಥಿಯನ್ನಾಗಿ ವಿಧಿಸಿರುತ್ತಾರೆ. ಈ ವಾಕ್ಯವನ್ನು ಒನೆಯ ಪುಟದಲ್ಲಿ ಕೊಟ್ಟಿದೆ.

(೨) ಪುರುಷಾರ್ಥಚಿನ್ತಾಮಣಿಕಾರರೂ, 469ಕಾಲಮಾಧವರೂ,೧೦೧ ಮತ್ತು ನಿರ್ಣಯಸಿಂಧುಕಾರರೂ (೩೩೬) ಸಹ ಎರಡು ದಿನಗಳಲ್ಲಿಯೂ ಅಪರಾಹ್ಣದಲ್ಲಿ ಸಮವ್ಯಾಪ್ತಿ ಇದ್ದಾಗ ಹೇಗೆ ಮಾಡಬೇಕೆಂಬ ಪ್ರಶ್ನೆಗೆ ಉತ್ತರವಾಕ್ಯವನ್ನು ಬೋಧಾಯನರ ವಾಕ್ಯವನ್ನಾಗಿ ಹೇಳಿರುತ್ತಾರೆ. ಅಪರಾಹ್ಣದ್ವಯವ್ಯಾಪಿನ್ಯ ತೀತಸ್ಯ ಚ ಯಾ ತಿಥಿಃ। ಕ್ಷಯೇ ಪೂರ್ವಾ ಚ ಕರ್ತವ್ಯಾ ವೃದ್ಧೌ ಕಾರ್ಯಾ ತಥೋತ್ತರಾ ॥ ಎಂಬ ಬೋಧಾಯನರ ವಾಕ್ಯವಾದರೋ ಎರಡು ದಿನಗಳಲ್ಲಿಯೂ ಅಪರಾಹ್ಣವ್ಯಾಪ್ತಿಯು ಸಮವಾಗಿದ್ದರೆ ಮೃತಾಹತಿಥಿಯು ಕ್ಷಯತಿಥಿಯಾಗಿದ್ದರೆ ಪೂರ್ವತಿಥಿಯನ್ನೂ, ವೃದ್ಧತಿಥಿಯಾಗಿದ್ದರೆ ಪರತಿಥಿಯನ್ನೂ

ಗ್ರಹಿಸಬೇಕೆಂದು ಹೇಳಿರುತ್ತದೆ. ಮಾಧವರು ಕ್ಷಯವೃದ್ಧಿಗಳನ್ನು ಪರತಿಥಿಗೆ ನೋಡಬೇಕೆಂದು ಹೇಳಿರುತ್ತಾರೆ.

ಈ ಕಾರಣಗಳಿಂದ ಬೋಧಾಯನರೂ ಅಪರಾಹ್ಣವ್ಯಾಪ್ತತಿಥಿಯನ್ನೇ ಪಾರ್ವಣಶ್ರಾದ್ಧತಿಥಿಯನ್ನಾಗಿ ಹೇಳಿರುತ್ತಾರೆಂಬುದು ಸ್ಪಷ್ಟವಾಗುತ್ತದೆ. ಇವರಿಗೆ ಅಪರಾಹ್ಣವ್ಯಾಪ್ತತಿಥಿಯು ಇಷ್ಟವಿಲ್ಲದಿದ್ದಿದ್ದರೆ ಈ ಮೇಲಿನ ಸಂದೇಹವನ್ನು ಪರಿಹರಿಸಲು ಅವರು ಪ್ರಯತ್ನಿಸಿರುವದು ವ್ಯರ್ಥವಾಗುತ್ತಿತ್ತು. ಸಾಯಂಕಾಲದಲ್ಲಿರುವ ತಿಥಿಯೇ ಗ್ರಾಹ್ಯವೆಂದು ಅವರ ಮನಸ್ಸಿನಲ್ಲಿದ್ದಿದ್ದರೆ ಈ ಶ್ಲೋಕದಲ್ಲಿ ಸಾಯಂಕಾಲದಲ್ಲಿ ತಿಥಿ ಇಲ್ಲದಾಗ ಎಂಬ ವಿಶೇಷಣವನ್ನು ಈ ವಾಕ್ಯದಲ್ಲಿ ಇಡುವದು ಅತ್ಯವಶ್ಯವಾಗಿತ್ತು ; ಹಾಗೇನೂ ಮಾಡಿಲ್ಲ. ಇದರ ಬದಲು ಎರಡು ದಿನಗಳಲ್ಲಿಯೂ ಅಪರಾಹ್ಣದಲ್ಲಿಲ್ಲದೆ ಕೇವಲ ಸಾಯಾಹ್ನದಲ್ಲಿ ತ್ರಿಮುಹೂರ್ತವ್ಯಾಪಿಯಾದ ತಿಥಿ ಬಂದಿರುವಾಗ ಅದೂ ಗ್ರಾಹ್ಯವು ಎಂಬುದಕ್ಕೂ ವಚನವನ್ನು ಆಗಲೇ ಉದಾಹರಿಸಿರುತ್ತೇವೆ. ಇದರಿಂದ ಬೋಧಾಯನರೂ ಅಪರಾಹ್ಣಕ್ಕೇ ಪ್ರಾಧಾನ್ಯವನ್ನು ಕೊಟ್ಟಂತಾಯಿತು ಎಂದು ಸಿದ್ಧವಾಗುತ್ತದೆ. ಆದುದರಿಂದ ಬೋಧಾಯನರಿಗೂ ಅಪರಾಹ್ಣವ್ಯಾಪ್ತತಿಥಿಯೇ ಮುಖ್ಯವಾದ ಪಾರ್ವಣಶ್ರಾದ್ಧತಿಥಿಯೆಂದು ನಿರ್ಣಯಿಸತಕ್ಕದ್ದು ಯುಕ್ತವು.

ಅಪರಾಹ್ಣವ್ಯಾಪ್ತಿಗೆ ಎಲ್ಲಿಯಾದರೂ ನಿಷೇಧವಿದೆಯೆ ?

ಅಪರಾಹ್ಣವ್ಯಾಪ್ತಿಯನ್ನು ಪಾರ್ವಣಶ್ರಾದ್ಧಕ್ಕೆ ಎಲ್ಲಿಯೂ ನಿಷೇಧಿಸಿಲ್ಲ. ಪುರುಷಾರ್ಥಚಿನ್ತಾಮಣಿ ೪೬೮ ಕಾಲಮಾಧವ ೯೭—

**ಚತುರ್ಥೇ ಪ್ರಹರೇ ಪ್ರಾಪ್ತೇ ಯಶ್ಶ್ರಾದ್ಧಂ ಕುರುತೇ ನರಃ ।**
**ಆಸುರಂ ತದ್ಭವೇಚ್ಛ್ರಾದ್ಧಂ ದಾತಾ ತು ನರಕಂ ವ್ರಜೇತ್ ॥**

**ಚತುರ್ಥೇ ಪ್ರಹರೇ ಇತ್ಯಾದಿ ನಿಷೇಧಃ ಸಾಯಾಹ್ನಭಾಗಕಟಾಕ್ಷೇಣಾಯಂ ನಿಷೇಧಃ ನ ತ್ವಪರಾಹ್ಣಭಾಗಕಟಾಕ್ಷೇಣ ॥**

ಅರ್ಥ:— ನಾಲ್ಕನೆಯ ಪ್ರಹರವು ಬಂದಾಗ ಯಾವನು ಶ್ರಾದ್ಧವನ್ನು ಮಾಡುತ್ತಾನೋ ಆ ಶ್ರಾದ್ಧವು ಆಸುರಶ್ರಾದ್ಧವಾಗುತ್ತದೆ. ಶ್ರಾದ್ಧಮಾಡುವವನು ನರಕಕ್ಕೆ ಹೋಗುತ್ತಾನೆ- ಎಂಬೀ ನಿಷೇಧವು ನಾಲ್ಕನೆಯ ಯಾಮದ ಸಾಯಾಹ್ನಭಾಗಕ್ಕೆ ಸೇರಿದ್ದು; ಅಂದರೆ ಘಂಟೆ ೪-೪೭ರಿಂದ ಮುಂದಕ್ಕೆ ೬ ಘಂಟೆಯವರೆಗೆ. ಅಪರಾಹ್ಣಕ್ಕೆ ಸೇರಿದ್ದಲ್ಲ, ನಾಲ್ಕನೆಯ ಯಾಮದಲ್ಲಿ ಅಪರಾಹ್ಣಭಾಗವು ಅಂದರೆ ಮೂರು ಘಂಟೆಯ ಮೇಲೆ ೪೭ ನಿಮಿಷಗಳು ಮಾತ್ರವಿರುತ್ತದೆ. ಆ ಭಾಗಕ್ಕಲ್ಲ. (ಇಲ್ಲಿ ನಿಷೇಧವು ಸಾಯಾಹ್ನಭಾಗಕ್ಕೆಮಾತ್ರ ಸೇರಿದ್ದು ಎಂಬ ವಚನವನ್ನು ಲಕ್ಷಿಸಬೇಕು.)

ಈ ರೀತಿಯಲ್ಲಿ ಅಪರಾಹ್ಣವನ್ನು ಯಾರೂ ಎಲ್ಲಿಯೂ ನಿಷೇಧಿಸಿಲ್ಲ.

ಪಾರ್ವಣಶ್ರಾದ್ಧವನ್ನು ಮಾಡಲು ಅಪರಾಹ್ಣವಲ್ಲಿಲ್ಲದ ಕೇವಲ ಸಾಯಾಹ್ನದಲ್ಲಿ ಬಂದಿರುವ ತಿಥಿಯನ್ನು ಯಾರಾದರೂ ನಿಷೇಧಿಸಿದ್ದಾರೆಯೆ ?

೧. ಪುರುಷಾರ್ಥಚಿನ್ತಾಮಣಿಃ ೪೬೧—

**ಯಸ್ಯಾಮಪರಾಹ್ಣಸಂಬನ್ಧೇ ಸತಿ ಅಸ್ತಮಯಾನುವೃತ್ತಿಃ ಸಾ ಪಿತೃಕಾರ್ಯೇ ಪ್ರಶಸ್ತಾ ನ ತ್ವಸ್ತಮಯಮಾತ್ರಸಂಬನ್ಧಿನೀತ್ಯರ್ಥಃ—**

ಅರ್ಥ :— ಯಾವ ತಿಥಿಯಲ್ಲಿ ಅಪರಾಹ್ಣಸಂಬಂಧವಿದ್ದು ಅಸ್ತಮಯಾನುವೃತ್ತಿ ಇರುತ್ತದೆಯೋ ಆ ತಿಥಿಯು ಪಿತೃಕಾರ್ಯದಲ್ಲಿ ಪ್ರಶಸ್ತವಾದ ತಿಥಿಯು, ಬರೀ ಅಸ್ತಮಯಮಾತ್ರಸಂಬಂಧವುಳ್ಳ ತಿಥಿಯು ಅಲ್ಲ.

೨ ಕಾಲಮಾಧವ ೧೦೦ ಹಾರೀತಃ —

**ಅಪರಾಹ್ಣಃ ಪಿತೄಣಾನ್ತು ಯಾಪರಾಹ್ಣಾನುಯಾಯಿನೀ ।**
**ಸಾ ಗ್ರಾಹ್ಯಾ ಪಿತೃಕಾರ್ಯೇ ತು ನ ಪೂರ್ವಾಸ್ತಾನುಯಾಯಿನೀ ॥**

ಅರ್ಥ :— "ಅಪರಾಹ್ಣವು ಪಿತೃಗಳಿಗೆ" ಎಂಬಲ್ಲಿ ಯಾವ ತಿಥಿಯು ಅಪರಾಹ್ಣವನ್ನು ಅನುಸರಿಸಿರುತ್ತದೆಯೋ ಆ ತಿಥಿಯನ್ನು ಪಿತೃಕಾರ್ಯದಲ್ಲಿ ಗ್ರಹಿಸಬೇಕು, ಅಸ್ತವನ್ನು ಅನುಸರಿಸಿರುವ ಪೂರ್ವತಿಥಿಯನ್ನು ಗ್ರಹಿಸಬಾರದು,

(೩) ಪುರುಷಾರ್ಥಚಿಂತಾಮಣಿ ೪೬೮. ಬೋಧಾಯನರು ಚತುರ್ಥಪ್ರಹರದಲ್ಲಿ ಶ್ರಾದ್ಧವನ್ನು ಮಾಡಬಾರದೆಂದು ಹೇಳಿರುವದರಿಂದಲೂ, ಸಾಮಾನ್ಯವಾಗಿ ಕರ್ಮಕಾಲವ್ಯಾಪ್ತತಿಥಿಯೇ ಶ್ರಾದ್ಧತಿಥಿಯಾಗಬೇಕೆಂದು ಹೇಳಿರುವದರಿಂದಲೂ ಕರ್ಮಕಾಲವಲ್ಲದ ಕೇವಲ ಸಾಯಂವ್ಯಾಪ್ತತಿಥಿಯು ಶ್ರಾದ್ಧತಿಥಿಯಾಗುವುದಿಲ್ಲವೆಂಬುದು ಸುಸ್ಪಷ್ಟವಾಗಿರುತ್ತದೆ.

೪. ಸ್ಮೃತ್ಯರ್ಥಸಾರಃ ೬೧—

**ಮೃತಾಹೇ ಚ ಅಪರಾಹ್ಣವ್ಯಾಪಿನ್ಯೇವ ತಿಥಿರ್ಗ್ರಾಹ್ಯಾ, ಅಪರಾಹ್ಣಃ ಪಿತೄಣಾಂ ಸ್ವಯಂಭುವಾ ದತ್ತಃ, ನಾಸ್ತಮಯಃ ।**

ಅರ್ಥ:- ಅಪರಾಹ್ಣವು ಪಿತೃಗಳಿಗೆ ಬ್ರಹ್ಮನಿಂದ ಕೊಡಲ್ಪಟ್ಟ ಕಾಲವಾಗಿರುವದರಿಂದಲೂ, ಅಸ್ತಮಯವು ಅಲ್ಲದ್ದಾಗಿರುವದರಿಂದಲೂ ಮೃತಾಹದಲ್ಲಿ ಅಪರಾಹ್ಣವ್ಯಾಪಿನಿಯೇ ಆಗಿರುವ ತಿಥಿಯನ್ನು ಗ್ರಹಿಸಬೇಕು. ಅಸ್ತಮಯವು ಬ್ರಹ್ಮನು ಪಿತೃಗಳಿಗೆ ಕೊಟ್ಟ ಕಾಲವಲ್ಲದ್ದರಿಂದ ಎಂದು ಹೇಳಿದ್ದರಿಂದ ಅಸ್ತಮಯವ್ಯಾಪ್ತತಿಥಿಯನ್ನು ಗ್ರಹಿಸಬಾರದೆಂದೂ ಸಿದ್ಧವಾಗುತ್ತದೆ.

ಮೇಲಿನ ವಚನಗಳೆಲ್ಲ ಏಕದೇಶಿಗಳಿಗೆ ಅಚ್ಚುಮೆಚ್ಚಾಗಿರುವ ಕೇವಲ ಸಾಯಂಕಾಲವಲ್ಲಿರುವ ತಿಥಿಯನ್ನು ಗ್ರಹಿಸತಕ್ಕದ್ದಲ್ಲವೆಂದು ಐಕಮತ್ಯದಿಂದ ಹೇಳುತ್ತವೆ. ಏಕದೇಶಿಗಳ ವಾದಕ್ಕೆ ಎಡೆಯೇ ಇಲ್ಲವೆಂಬುದಕ್ಕೆ ಇದು ಒಂದೇ ವಿಷಯವು ಸಾಕು.

ಶ್ರಾದ್ಧತಿಥಿಯು ಉದಯದಿಂದ ಸಾಯಾಹ್ನವ್ಯಾಪ್ತಿಯನ್ನು ಹೊಂದದೆ ಇರುವಾಗ ಹೇಗೆ ನಿರ್ಣಯಿಸಬೇಕೆಂದು ಹೇಳಿದೆ ?

೧. ಸ್ಮೃತ್ಯರ್ಥಸಾಗರಃ ೧೭ ಪ್ರತಿಸಾಂವತ್ಸರಶ್ರಾದ್ಧತಿಥಿನಿರ್ಣಯಃ —

**ದಿವಸಂ ಪ್ರಾತಸ್ಸಂಗವೇತ್ಯಾದಿ ಪಞ್ಚಧಾ ವಿಭಜೇತ್ । ತತ್ರ ಸೂರ್ಯೋದಯಮಾರಭ್ಯ ಆಸಾಯಾಹ್ನಂ ಮೃತತಿಥಿಃ ಸ್ಪೃಶೇಚ್ಚೇತ್ಸಾ ತಿಥಿಃ ಪಾರ್ವಣೇ ಉತ್ತಮಾ । ತದಭಾವೇ ಅಪರಾಹ್ಣವ್ಯಾಪ್ತಾ ಗ್ರಾಹ್ಯಾ॥**

ಅರ್ಥ:-ಹಗಲನ್ನು ಪ್ರಾತಃ, ಸಂಗವ, ಮಧ್ಯಾಹ್ನ, ಅಪರಾಹ್ಣ ಮತ್ತು ಸಾಯಾಹ್ನವೆಂದು ಐದು ವಿಧವಾಗಿ ವಿಭಾಗಮಾಡಬೇಕು. ಸೂರ್ಯೋದಯದಿಂದ ಆರಂಭಿಸಿ ಸಾಯಾಹ್ನವನ್ನು ಮೃತತಿಥಿಯು ಮುಟ್ಟಿದ್ದೇ ಆದರೆ ಆ ತಿಥಿಯು ಪಾರ್ವಣಶ್ರಾದ್ಧಕ್ಕೆ ಉತ್ತಮ ತಿಥಿಯು. ಅದಿಲ್ಲದಿದ್ದರೆ ಅಪರಾಹ್ಣವ್ಯಾಪ್ತಿಯುಳ್ಳ ತಿಥಿಯು ಗ್ರಾಹ್ಯವು.

ಈ ವಾಕ್ಯದಿಂದ ಸಾಯಾಹ್ನವ್ಯಾಪ್ತಿ ಎಂದರೆ ಉದಯದಿಂದ ಸಾಯಾಹ್ನದ ಸಂಬಂಧವನ್ನು ಹೊಂದಿರುವದೆಂತಲೂ ಅದಿಲ್ಲದಿರುವಾಗ ಸರ್ವರೂ ಅಪರಾಹ್ಣವ್ಯಾಪ್ತತಿಥಿಯನ್ನೇ ಪಾರ್ವಣಶ್ರಾದ್ಧತಿಥಿಯಾನ್ನಾಗಿ ಗ್ರಹಿಸಬೇಕೆಂತಲೂ ಸ್ಪಷ್ಟವಾಗುತ್ತದೆ.

## ಉಪಸಂಹಾರ

ಶ್ರಾದ್ಧಕರ್ಮಕಾಲವು ಅಪರಾಹ್ಣವೇ ಎಂಬುದು ಸರ್ವಸಮ್ಮತವಾದ ವಿಷಯವಾಗಿದೆ. ಕರ್ಮಕಾಲವ್ಯಾಪ್ತವಾದ ತಿಥಿಯನ್ನೇ ಅಂದರೆ ಅಪರಾಹ್ಣವ್ಯಾಪ್ತತಿಥಿಯನ್ನೇ ಮುಖ್ಯವಾದ ಪಾರ್ವಣಶ್ರಾದ್ಧತಿಥಿಯನ್ನಾಗಿ ಹೇಳಿರುತ್ತಾರೆ. ಅಪರಾಹ್ಣವ್ಯಾಪ್ತತಿಥಿಯನ್ನು ನಿಷೇಧಮಾಡಿರುವದು ಯಾವುದೊಂದು ವಚನವೂ ಎಲ್ಲಿಯೂ ಸಿಕ್ಕುವುದಿಲ್ಲ. ಸಾಯಂಕಾಲವಲ್ಲಿ ಮಾತ್ರವೇ ಬಂದಿರುವ ತಿಥಿಯನ್ನು ಬೋಧಾಯನರು ಗ್ರಹಿಸಬೇಕು ಎಂಬ ಸ್ಪಷ್ಟೋಕ್ತಿಯು ಎಲ್ಲಿಯೂ ಸಿಕ್ಕುವದಿಲ್ಲ. ಸಾಯಂ

ಕಾಲದ ಸಂಬಂಧವನ್ನು ಹೇಳುವ ವಚನಗಳೆಲ್ಲ ಉದಯದಿಂದ ಸಾಯಂಕಾಲದವರೆಗೂ ವ್ಯಾಪ್ತವಾಗಿರುವ ತಿಥಿಯ ಪ್ರಾಶಸ್ತ್ಯವನ್ನೇ ಹೇಳುತ್ತವೆ. ಅಥವಾ ಎರಡು ದಿನಗಳಲ್ಲಿಯೂ ಅಪರಾಹ್ಣವ್ಯಾಪ್ತಿಯು ಸಿಕ್ಕದ ತಿಥಿಯ ಕಾಲವನ್ನು ಹೇಳುತ್ತವೆ. ಅಂತೂ ಕೇವಲ ಸಾಯಂಕಾಲದಲ್ಲಿ ಬಂದಿರುವ ತಿಥಿಯನ್ನು ಬೋಧಾಯನರಿಗೆ ವಿಶೇಷವಾಗಿ ವಿಧಿಸಿದೆ ಎಂಬುದು ನಿರಾಧಾರವಾದದ್ದಾಗಿದೆ, ಮತ್ತು ಶಿಷ್ಟಾಚಾರ ವಿರಹಿತವಾದದ್ದೂ ಆಗಿದೆ. ಇಷ್ಟೇ ಅಲ್ಲ. ಅಪರಾಹ್ಣಸಂಬಂಧವಿಲ್ಲದ ಕೇವಲ ಸಾಯಂಕಾಲದಲ್ಲಿ ಬಂದಿರುವ ತಿಥಿಯನ್ನು ಅಪರಾಹ್ಣಕಾಲವು ಸಿಕ್ಕದಅಗತಿಕವಾದ ಸಂದರ್ಭದಲ್ಲಿ ವಿನಾ ಸರ್ವಥಾತ್ಯಜಿಸಬೇಕೆಂದೇ ಎಲ್ಲಾ ಗ್ರಂಥಕಾರರೂ ಹೇಳಿರುತ್ತಾರೆ. ಕೆಲವು ವಚನಗಳ ಅರ್ಥವನ್ನು ತಪ್ಪಾಗಿ ತಿಳಿದುಕೊಂಡಿದ್ದರ ಫಲವಾಗಿ ಯಾರೋ ಕೆಲವರು ಸಾಯಂ ಸಂಬಂಧವಿರುವ ತಿಥಿಯು ಸಾಯಂವ್ಯಾಪ್ತತಿಥಿಯೆಂದೂ, ಇಂತಹ ಸಾಯಂವ್ಯಾಪ್ತತಿಥಿಯು ಬೋಧಾಯನರಿಗೆ ಹೇಳಿದ್ದೆಂದೂ ತಿಳಿದಿರುತ್ತಾರೆ. ಈ ತಿಳಿವಳಿಕೆಯೂ, ಆಚಾರವೂ ಶಾಸ್ತ್ರಸಮ್ಮತವಲ್ಲವೆಂದೂ ಶಿಷ್ಟಾಚಾರದಿಂದ ಅನುಗ್ರಹಿಸಲ್ಪಟ್ಟದ್ದಲ್ಲವೆಂದೂ ಹೇಳಲೇ ಬೇಕಾಗಿಲ್ಲ. ಅಪರಾಹ್ಣವ್ಯಾಪ್ತತಿಥಿಯು ವಿಹಿತವಾಗಿದೆ; ನಿಂದಿತವಾಗಿಲ್ಲ. ಬರೀ ಸಾಯಾಹ್ನದಲ್ಲಿ ಬಂದಿರುವ ತಿಥಿಯು ವಿಹಿತವಾಗಿಲ್ಲ; ನಿಂದಿತವಾಗಿದೆ. ಈ ಕಾರಣದಿಂದಲೂ ಕೇವಲ ಸಾಯಂಕಾಲದಲ್ಲಿ ಬಂದಿರುವ ತಿಥಿಯು ಗ್ರಾಹ್ಯವಲ್ಲವೆಂಬುದು ಸ್ಪಷ್ಟವಾಗಿರುತ್ತದೆ.

ಸ್ಮೃತಿಕಾರರೂ ನಿಬಂಧಕಾರರೂ ದರ್ಶಶ್ರಾದ್ಧದ ವಿಷಯದಲ್ಲಿ ಬೋಧಾಯನರಿಗೂ ಕಾಣ್ವರಿಗೂ ಬೇರೆ ವಿಧವಾದ ವ್ಯಾಪ್ತಿಯುಳ್ಳ ತಿಥಿಯನ್ನು ಸ್ಪಷ್ಟವಾಗಿ ಹೇಳಿರುವಂತೆ ಪಾರ್ವಣಶ್ರಾದ್ಧದವಿಷಯದಲ್ಲಿ ವಿಶೇಷರೀತಿಯಾದ ವ್ಯಾಪ್ತಿಯನ್ನು ಎಲ್ಲಿಯೂ ಹೇಳದಿರುವದು ಬೋಧಾಯನರಿಗೂ ಅಪರಾಹ್ಣವ್ಯಾಪ್ತತಿಥಿಯೇ ಇತರರಂತೆ ಪರಿಗ್ರಾಹ್ಯವು ಎಂಬುದನ್ನು ಸ್ಪಷ್ಟಪಡಿಸುತ್ತದೆ. ವಿಚಾರಪರರಾದ ಮಹನೀಯರು ಈ ವಿಮರ್ಶೆಯನ್ನು ಓದಿ ಇವರ ಸಾರಾಸಾರವನ್ನು ಗ್ರಹಿಸಿ ಯುಕ್ತ ರೀತಿಯಲ್ಲಿ ಆಚರಿಸಲು ಇದು ಸಹಾಯಕವಾದರೆ ನಾನು ಧನ್ಯನು.

# ಪ ರಿ ಶಿ ಷ್ಟ

ಬೋಧಾಯನರು ಗ್ರಹಿಸಬೇಕಾದ ಪಾರ್ವಣಶ್ರಾದ್ಧ ತಿಥಿಯನ್ನು ನಿರ್ಣಯಿಸುವ ಉದ್ದೇಶದಿಂದ ಬರೆದ ಪ್ರಕರಣವಿದಾದರೂ ಇದರಲ್ಲಿ ಬೋಧಾಯನರಲ್ಲದವರಿಗೂ ಗ್ರಾಹ್ಯವಾದ ಎಷ್ಟೋ ಅಂಶಗಳು ಇವೆ ಎಂಬುದು ವಾಚಕರಿಗೆ ಹೊಳೆಯದೆ ಹೋಗಲಾರದು. ಶ್ರಾದ್ಧಸಾಮಾನ್ಯದ ವಿಷಯದಲ್ಲಿ ತಿಳಿದಿರಬೇಕಾದ ಕೆಲವು ವಿಷಯಗಳನ್ನು ಇದಕ್ಕೆ ಸೇರಿಸಿದರೆ ಶ್ರಾದ್ಧತತ್ತ್ವ ಜಿಜ್ಞಾಸುಗಳಿಗೆಲ್ಲಾ ಉಪಯೋಗಕರವಾದೀತೆಂಬ ನಂಬಿಕೆಯಿಂದ ಈ ಪರಿಶಿಷ್ಟವನ್ನು ಸೇರಿಸಿರುತ್ತದೆ.

ಎರಡು ದಿನಗಳಲ್ಲಿಯೂ ಅಪರಾಹ್ಣವ್ಯಾಪ್ತಿಯು ಸಮವಾಗಿದ್ದಾಗ ಪಾರ್ವಣಶ್ರಾದ್ಧತಿಥಿನಿರ್ಣಯವನ್ನು ಹೇಗೆ ಮಾಡಬೇಕು ?

(ಕ) ಪುರುಷಾರ್ಥಚಿನ್ತಾಮಣಿ ೪೬೦, ೪೬೯—

**ಯದಾ ದಿನದ್ವಯೇಽಪ್ಯಪರಾಹ್ಣಸಮ್ಬನ್ಧಿನೀ ತದಾ ಪೂರ್ವಾ ।**

ಅರ್ಥ :— ಯಾವಾಗ ಎರಡು ದಿನಗಳಲ್ಲಿಯೂ ಅಪರಾಹ್ಣಸಂಬಂಧವು ಸಮವಾಗಿರುತ್ತದೆಯೋ ಆಗ ಪೂರ್ವತಿಥಿಯನ್ನೇ ಗ್ರಹಿಸಬೇಕು.

(ಖ) ಸ್ಮೃತಿಮುಕ್ತಾಫಲ ೨೫೪, ಕಾಲನಿರ್ಣಯಸಂಗ್ರಹೇ —

**ಕ್ಷಯೇ ಪೂರ್ವೋತ್ತರಾ ವೃದ್ಧೌ ವ್ಯಾಪ್ತಿಶ್ಚೇದಪರಾಹ್ಣಯೋಃ ।**
**ನ ಗ್ರಾಹ್ಯತಿಥಿಗೌ ವೃದ್ಧಿಕ್ಷಯೌ ಪೂರ್ವತಿಥೇಸ್ತು ತೌ ॥**

ಅರ್ಥ :— ಎರಡು ದಿನಗಳಲ್ಲಿಯೂ ಅಪರಾಹ್ಣದಲ್ಲಿ (ಸಮ)ವ್ಯಾಪ್ತಿ ಇದ್ದರೆ ಕ್ಷಯತಿಥಿಯಾಗಿದ್ದರೆ ಪೂರ್ವದಿನವನ್ನೂ ವೃದ್ಧತಿಥಿಯಾಗಿದ್ದರೆ ಪರದಿನವನ್ನೂ ಗ್ರಹಿಸಬೇಕು. ವೃದ್ಧಿಕ್ಷಯಗಳನ್ನು ವ್ಯಾಪ್ತತಿಥಿಗೆ ನೋಡಬಾರದು, ಪರತಿಥಿಗೆ ನೋಡಬೇಕು.

(ಗ) ಸ್ಮೃತಿಮುಕ್ತಾಫಲ ೨೫೪, ಷಡ್ಧರ್ಮೀಯೇ —

**ತುಲ್ಯಾ ಚೇದುಭಯಾಪರಾಹ್ಣಸಮಯೇ ಪೂರ್ವಾ ।**

ಅರ್ಥ :— ಎರಡು ದಿನಗಳಲ್ಲಿಯೂ ಅಪರಾಹ್ಣದಲ್ಲಿ ಸಮವ್ಯಾಪ್ತಿ ಇದ್ದರೆ ಪೂರ್ವದಿನವು ಗ್ರಾಹ್ಯವು.

(ಘ) ಸ್ಮೃತಿಮುಕ್ತಾಫಲ ೨೫೩, ಕಾಲಾದರ್ಶೇsಪಿ---

**ಸಮತ್ವೇ ಪೂರ್ವವಿದ್ಧೈವ ।**

ಅರ್ಥ :--- ಎರಡು ದಿನಗಳಲ್ಲಿಯೂ ಅಪರಾಹ್ಣವ್ಯಾಪ್ತಿಯು ಸಮವಾಗಿದ್ದರೆ ಪೂರ್ವವಿದ್ಧತಿಥಿಯೇ ಗ್ರಾಹ್ಯವು.

(ಙ) ಧರ್ಮಸಿಂಧು ೩೦೧---

**ದಿನದ್ವಯೇ ಅಪರಾಹ್ಣವ್ಯಾಪ್ತೌ ತದಸ್ಪರ್ಶೇ ವಾ ಅಂಶತಸ್ಸಮವ್ಯಾಪ್ತೌ ವಾ ಪೂರ್ವಾ ।**

ಅರ್ಥ :--- ಎರಡು ದಿನಗಳಲ್ಲಿಯೂ (ಸಮವಾಗಿ) ಅಪರಾಹ್ಣವ್ಯಾಪ್ತಿ ಇದ್ದರೂ, ಅಂಶದಿಂದ ಸಮವ್ಯಾಪ್ತಿ ಇದ್ದರೂ, ವ್ಯಾಪ್ತಿ ಇಲ್ಲದಿದ್ದರೂ ಪೂರ್ವದಿನವು ಗ್ರಾಹ್ಯವು.

ತತ್ರೈವ ಮಾಧವಾಚಾರ್ಯಸ್ತು ೩೦೧---

**ದಿನದ್ವಯೇ ಪೂರ್ವಾಪರಾಹ್ಣವ್ಯಾಪ್ತೌ ಅಂಶತಸ್ಸಮವ್ಯಾಪ್ತೌ ಚ ಉತ್ತರತಿಥೇಃ ಕ್ಷಯೇ ಪೂರ್ವಾ ವೃದ್ಧೌ ಉತ್ತರಾ ಗ್ರಾಹ್ಯಾ ॥**

ಅರ್ಥ :--- ಎರಡು ದಿನಗಳಲ್ಲಿಯೂ ಅಪರಾಹ್ಣವ್ಯಾಪ್ತಿ ಇದ್ದರೆ ಪೂರ್ವದಿನವು ಗ್ರಾಹ್ಯವು. ಅಂಶದಿಂದ ಸಮವ್ಯಾಪ್ತಿ ಇದ್ದರೂ ಉತ್ತರತಿಥಿಯು ಕ್ಷಯತಿಥಿಯಾಗಿದ್ದರೆ ಪೂರ್ವದಿನವೂ ವೃದ್ಧತಿಥಿಯಾಗಿದ್ದರೆ ಪರದಿನವೂ ಗ್ರಾಹ್ಯವು.

ಕಾಲಮಾಧವರು ೧೧೧ರಲ್ಲಿ, ಬೋಧಾಯನರೂ ಹೀಗೆಯೇ ಹೇಳುತ್ತಾರೆಂದು ಹೇಳಿದ್ದಾರೆ

(ಚ) ವೈದಿಕಸಾರ್ವಭೌಮರು ಪಿತೃಮೇಧಸಾರ ೨೮೫---

**ಯದ್ಯಪರಾಹ್ಣದ್ವಯೇ ಸಾ ಸ್ಯಾತ್ ತತ್ರಾಧಿಕಾ ಗ್ರಾಹ್ಯಾ। ಯದಿ ಸಮಾ ತದಾ ಪೂರ್ವಾ। ದ್ವಯೋಸ್ಸಾಯಂವ್ಯಾಪಿತ್ವೇ ಪರೈವ ಗ್ರಾಹ್ಯಾ। ಯದಿ ದ್ವಯೋರಪರಾಹ್ಣಯೋರ್ನ ಸ್ಯಾತ್ ಸಾಯಂಕಾಲೇ ತ್ರಿಮುಹೂರ್ತಗಾ ಗ್ರಾಹ್ಯಾ ಯದಿ ನ್ಯೂನಾ ಕುತುಪಕಾಲಿನೀ ಗ್ರಾಹ್ಯಾ ॥**

ಅರ್ಥ :--- ಮೃತತಿಥಿಯು ಎರಡು ದಿನಗಳಲ್ಲಿಯೂ ಅಪರಾಹ್ಣದಲ್ಲಿದ್ದರೆ ಅಧಿಕ ವ್ಯಾಪ್ತಿಯುಳ್ಳ ದಿನವನ್ನು ಗ್ರಹಿಸಬೇಕು. ಸಮವ್ಯಾಪ್ತಿಯುಳ್ಳದ್ದಾಗಿದ್ದರೆ ಪೂರ್ವದಿನವನ್ನು ಗ್ರಹಿಸಬೇಕು. ಎರಡು ದಿನಗಳಲ್ಲಿಯೂ ಸಾಯಾಹ್ನವ್ಯಾಪ್ತಿಯಿದ್ದರೆ ಪರದಿನವನ್ನೇ ಗ್ರಹಿಸಬೇಕು. ಎರಡು ದಿನಗಳಲ್ಲಿಯೂ ಅಪರಾಹ್ಣದಲ್ಲಿಲ್ಲದಿದ್ದರೆ ಸಾಯಂಕಾಲದಲ್ಲಿ ಮೂರು ಮುಹೂರ್ತವುಳ್ಳ ತಿಥಿಯ ದಿನವನ್ನು ಗ್ರಹಿಸಬೇಕು. ಅದೂ ಇಲ್ಲದಿದ್ದರೆ ಕುತುಪಕಾಲವ್ಯಾಪ್ತತಿಥಿಯನ್ನು ಗ್ರಹಿಸಬೇಕು.

(ಛ) ಎರಡು ದಿನಗಳಲ್ಲಿ ಅಪರಾಹ್ಣದಲ್ಲಿ ತಿಥಿಯು ವಿಷಮವ್ಯಾಪ್ತಿಯನ್ನು ಹೊಂದಿದ್ದರೆ ಹೇಗೆ ಮಾಡಬೇಕು ?

ಧರ್ಮಸಿಂಧು ೩೧, ಪುರುಷಾರ್ಥಚಿನ್ತಾಮಣಿ ೪೬೯—

**ಯತ್ರಾಧಿಕಾ ಸಾ ಮತಾ ॥**

ಅರ್ಥ :— ಯಾವ ದಿನವು ಅಪರಾಹ್ಣದಲ್ಲಿ ಹೆಚ್ಚು ವ್ಯಾಪ್ತಿಯನ್ನು ಹೊಂದಿರುತ್ತದೆಯೋ ಆ ದಿನವನ್ನು ಗ್ರಹಿಸಬೇಕು.

(ಜ) ಪಾರ್ವಣಶ್ರಾದ್ಧವನ್ನು ಮುಖ್ಯಕಾಲದಲ್ಲಿ ಅಂದರೆ ೧೧ಘಂಟೆ ೩೬ನಿಮಿಷಗಳಿಂದ ೩ಘಂಟೆ ೩೬ನಿಮಿಷಗಳಲ್ಲಿ ಮಾಡುವದಕ್ಕೆ ಏನಾದರೂ ಕಾರಣದಿಂದ ಆಗದಿದ್ದಾಗ ಹೇಗೆ ಮಾಡಬೇಕು ?

ಪುರುಷಾರ್ಥಚಿನ್ತಾಮಣಿ ೪೬೮—

**ಮುಖ್ಯತ್ವೇನ ನಿಷಿದ್ಧಸ್ಯಾಪಿ ಸಾಯಾಹ್ನಸ್ಯ ಗೌಣಕಾಲತ್ವಮಾಹ ವ್ಯಾಸಃ – ಸ್ವಕಾಲಾತಿಕ್ರಮೇ ಕುರ್ಯಾದ್ರಾತ್ರೇಃ ಪೂರ್ವಂ ಯಥಾವಿಧಿ ।**

ಅರ್ಥ :— ಸಾಯಾಹ್ನವನ್ನು ಮುಖ್ಯಕಾಲವಲ್ಲವೆಂದು ನಿಷಿದ್ಧಿಸಿದ್ದರೂ ಉಕ್ತಕಾಲವು ಮೀರಿದ ಪಕ್ಷದಲ್ಲಿ ಗೌಣಕಾಲವಾಗಿ ರಾತ್ರಿಯ ಪ್ರಥಮಯಾಮದಲ್ಲಿ ಶಾಸ್ತ್ರವಿಧಿಯನ್ನು ಮೀರದೆ ಪಾರ್ವಣಶ್ರಾದ್ಧವನ್ನು ಮಾಡಬೇಕೆಂದು ವ್ಯಾಸರು ಹೇಳುತ್ತಾರೆ.

ಆರಂಭಿಸಿದ್ದ ಶ್ರಾದ್ಧವನ್ನು ರಾತ್ರಿಯ ಪ್ರಥಮಯಾಮದಲ್ಲಿ ಮುಗಿಸಬಹುದು– ಎಂದು ಆಪಸ್ತಂಬರೂ ಪುರುಷಾರ್ಥಚಿನ್ತಾಮಣಿಕಾರರೂ ಹೇಳಿದ್ದಾರೆ. ಕಾಲಮಾಧವರು (೯೮) ರಾತ್ರಿಯಲ್ಲಿ ಸಮಾಪ್ತಿಯನ್ನು ಹೇಳಿರುವದರಿಂದ ಆರಂಭವನ್ನೂ ಮಾಡಿ ಮುಗಿಸಬಹುದು ಎಂದು ಲಕ್ಷಣೆಯಿಂದ ಅರ್ಥ ಮಾಡಿರುತ್ತಾರೆ. ಆಬ್ದಿಕಶ್ರಾದ್ಧವನ್ನು ಬಿಟ್ಟರೆ ಬಹಳ ದೋಷಗಳನ್ನು ಹೇಳಿರುವದರಿಂದ ಹೀಗೆ ಅರ್ಥವನ್ನು ಮಾಡಬೇಕೆಂದು ಹೇಳಿರುತ್ತಾರೆ.

(ಝ) ಪಾರ್ವಣಶ್ರಾದ್ಧವನ್ನು ಕುತುಪಕಾಲ (೧೧ ಘಂಟೆ ೩೬ನಿಮಿಷ)ಕ್ಕಿಂತ ಮುಂಚೆ ಆರಂಭಿಸಬಹುದೆ ?

೧. ಕಾಲಮಾಧವ ೯೮, ಶಿವರಾಘವಸಂವಾದೇ—

**ಕುತುಪಾದಥವಾಪ್ಯರ್ವಾಗಾಸನಂ ಕುತುಪೇ ಭವೇತ್ ।**

**ಇತಿ ಉಪಕ್ರಮದ್ವಯಂ ದರ್ಶಿತಮ್ ।**

**ಪ್ರಾತಃಕಾಲೇ ತು ನ ಶ್ರಾದ್ಧಂ ಪ್ರಕುರ್ವೀತ ದ್ವಿಜೋತ್ತಮಃ ।**

**ಇತ್ಯನೇನ ಪ್ರಾತಃಕಾಲೋ ನಿಷಿದ್ಧಃ। ಯದ್ಯಪಿ ಸಂಗವೋ ನ ಸಾಕ್ಷಾನ್ನಿಷಿದ್ಧಃ ತಥಾಪಿ ಕುತುಪಮುಹೂರ್ತೇ ಮುಖ್ಯೋಪಕ್ರಮಸ್ಯ, ಗಾಂಧರ್ವಮುಹೂರ್ತೇ (೧೦ ಘಂಟೆ ೪೮ ನಿಮಿಷದಿಂದ ೧೧ ಘಂಟೆ ೩೬ ನಿಮಿಷಗಳ ವರೆಗೆ) ಗೌಣೋಪಕ್ರಮಸ್ಯ ಅಭಿಧಾನೇ ಸತಿ ಅರ್ಥಾನ್ನಿಷೇಧಃ ಪರಿಶಿಷ್ಯತೇ ॥**

ಅರ್ಥ :— ಪಾರ್ವಣಶ್ರಾದ್ಧವನ್ನು ಕುತುಪಕಾಲದಲ್ಲಾಗಲಿ (೧೧ ಘಂಟೆ ೩೬ ನಿಮಿಷಗಳಿಂದ ೧೨-೨೪ರ ವರೆಗೆ) ಅಥವಾ ಅದಕ್ಕಿಂತ ಮುಂಚೆ ಗಾಂಧರ್ವಕಾಲದಲ್ಲಾಗಲಿ (೧೦ ಘಂಟೆ ೪೮ ನಿಮಿಷದಿಂದ ೧೧ ಘಂಟೆ ೩೬ ನಿಮಿಷಗಳವರೆಗೆ) ಪ್ರಾರಂಭಿಸಬಹುದು. ಆಸನವನ್ನು ಕುತುಪಕಾಲದಲ್ಲಿಯೇ ಕೊಡಬೇಕು= ಎಂದು ಎರಡು ಕಾಲವನ್ನು ಪ್ರಾರಂಭಕಾಲವನ್ನಾಗಿ ಹೇಳಿದೆ. ಪ್ರಾತಃಕಾಲದಲ್ಲಿ ದ್ವಿಜನು ಶ್ರಾದ್ಧವನ್ನು ಮಾಡಬಾರದೆಂದು ಪ್ರಾತಃಕಾಲವನ್ನು ನಿಷೇಧಿಸಿದ್ದಾರೆ. ಸಂಗಮಕಾಲವನ್ನು ಸಾಕ್ಷಾತ್ತಾಗಿಯೇ ನಿಷೇಧಿಸದೆ ಇದ್ದರೂ ಮುಖ್ಯೋಪಕ್ರಮಕ್ಕೆ ಕುತುಪಕಾಲವನ್ನೂ ಗೌಣೋಪಕ್ರಮಕ್ಕೆ ಗಾಂಧರ್ವಕಾಲವನ್ನೂ ಹೇಳಿ ಸಂಗಮಕಾಲವನ್ನು ಹೇಳದೆ ಇರುವದರಿಂದ ಅರ್ಥಾತ್ಸಂಗಮಕಾಲವನ್ನು ನಿಷೇಧಿಸಿದಂತೆಯೇ ಆಯಿತು.

ಇದರಿಂದ ಕುತುಪಕಾಲದಲ್ಲಿ ಆರಂಭಿಸುವದು ಮುಖ್ಯವಾದದ್ದು, ಗಾಂಧರ್ವಕಾಲದಲ್ಲಿ ಉಪಕ್ರಮಿಸುವದು ಗೌಣವಾದದ್ದು ಎಂದು ನಿರ್ಣಯಿಸಿರುತ್ತಾರೆ.

(ಇ) ಪಾರ್ವಣಶ್ರಾದ್ಧವನ್ನು ಮಾಡಲು ವಿಘ್ನ ಬಂದರೆ ಹೇಗೆ ಮಾಡಬೇಕು?

ಧರ್ಮಸಿಂಧು ೩೩೫ —

**ನಿಮಂತ್ರಣೋತ್ತರಂ ವಿಪ್ರಸ್ಯ ಸೂತಕೇ ಮೃತಕೇ ವಾ ಪ್ರಾಪ್ತೇ ಆಶೌಚಂ ನ । ನಿಮನ್ತ್ರಣಞ್ಚ ದ್ವಿತೀಯಕ್ಷಣರೂಪಮ್ । ಕರ್ತುಸ್ತು ಪಾಕಪರಿಕ್ರಿಯೋತ್ತರಂ ಆಶೌಚಾಭಾವಃ। ಪಾಕಪರಿಕ್ರಿಯಾ ಚ ಸಮಂತ್ರಕಂ ಪಾಕಪ್ರೋಕ್ಷಣಮ್ । ಮಮ ತು ಸಂಕಟಾಭಾವೇ ಪಾಕಪರಿಕ್ರಿಯೋತ್ತರಮಪಿ ಕರ್ತುರಾಶೌಚೇ ತದನ್ತೇ ಶ್ರಾದ್ಧಮ್ ಇತಿ ಪ್ರತಿಭಾತಿ । ವ್ಯಾಧ್ಯಾದಿವಿಘ್ನೇ ವಿಸ್ಮೃತೌ ಚ ಅಮಾವಾಸ್ಯಾಯಾಂ ಕೃಷ್ಣಶುಕ್ಲೈಕಾದಶ್ಯೋರ್ವಾರ್ಷಿಕಮ್ ॥ ಪ್ರತ್ಯಾಬ್ದಿಕಂ ಮಾಸಿಕಞ್ಚ ಭಾರ್ಯಾರಜೋದೋಷೇಽಪಿ ತದ್ದಿನೇ ಏವ ಕಾರ್ಯಮಿತ್ಯೇಕಃ ಪಕ್ಷಃ। ಪಞ್ಚಮೇಽಹನಿ ಕಾರ್ಯಮಿತ್ಯಪರಃ ಪಕ್ಷಃ । ಪಕ್ಷದ್ವಯೇಽಪಿ ಗ್ರಂಥ**

**ಸಮ್ಮತಿಃ ಶಿಷ್ಟಾಚಾರಸಮ್ಮತಿಶ್ಚ ವರ್ತೇತೇ । ಭಾರ್ಯಾನ್ತರಸತ್ತ್ವೇ ತದ್ದಿನ ಏವೇತಿ ಸರ್ವಸಮ್ಮತಮ್ ॥**

ಅರ್ಥ:–ನಿಮನ್ತ್ರಣವಾದಮೇಲೆ ನಿಮನ್ತ್ರಿತಬ್ರಾಹ್ಮಣನಿಗೆ ಸೂತಕವಾಗಲೀ ಮೃತಕವಾಗಲೀ ಬಂದರೆ ಆಶೌಚವಿಲ್ಲ. ನಿಮನ್ತ್ರಣವೆಂದರೆ ಎರಡನೆಯ ಸಲ ಕೊಡುವ ಕ್ಷಣವು. ಕರ್ತೃವಿಗೆ ಪಾಕಪರಿಕ್ರಿಯೆ ಆದಮೇಲೆ ಆಶೌಚವಿಲ್ಲ. ಪಾಕಪರಿಕ್ರಿಯೆ ಎಂದರೆ ಮಂತ್ರಪೂರ್ವಕವಾದ ಪ್ರೋಕ್ಷಣೆಯು. ಸಿಂಧುಕಾರರ ಮತದಲ್ಲಿ ಸಂಕಟವಿಲ್ಲದಿದ್ದರೆ ಪಾಕಪರಿಕ್ರಿಯೆ ಆದಮೇಲೂ ಕರ್ತೃವಿಗೆ ಆಶೌಚ ಬಂದರೆ ಆಶೌಚ ಕಳೆದಮೇಲೆಯೇ ಶ್ರಾದ್ಧವನ್ನು ಮಾಡಬೇಕೆಂದು ಹೇಳಿದ್ದಾರೆ. ವ್ಯಾಧ್ಯಾದಿಗಳಿಂದ ವಿಘ್ನ ಬಂದರೂ, ಮರೆತುಹೋದರೂ ಅಮಾವಾಸ್ಯೆಯಲ್ಲಾಗಲೀ ಶುಕ್ಲಕೃಷ್ಣೈಕಾದಶೀದಿನಗಳಲ್ಲಾಗಲೀ ವಾರ್ಷಿಕಶ್ರಾದ್ಧವನ್ನು ಮಾಡಬೇಕು. ಪ್ರತಿಸಾಂವತ್ಸರಿಕಶ್ರಾದ್ಧವನ್ನೂ, ಮಾಸಿಕಶ್ರಾದ್ಧವನ್ನೂ ಹೆಂಡತಿಯು ಹೊರಗಾಗಿದ್ದರೂ ಆ ದಿನದಲ್ಲಿಯೇ ಮಾಡಬೇಕೆಂದು ಒಂದುಪಕ್ಷ. ಐದನೆಯ ದಿನದಲ್ಲಿ ಮಾಡಬೇಕೆಂದು ಇನ್ನೊಂದುಪಕ್ಷ. ಎರಡು ಪಕ್ಷಗಳಿಗೂ ಗ್ರಂಥಸಮ್ಮತಿಯೂ, ಶಿಷ್ಟಾಚಾರಸಮ್ಮತಿಯೂ ಇವೆ. ಇಬ್ಬರು ಹೆಂಡರಿದ್ದು ಒಬ್ಬಳು ಶುದ್ಧಳಾಗಿದ್ದರೆ ಆ ದಿನದಲ್ಲಿಯೇ ಮಾಡಬೇಕೆಂಬುದು ಸರ್ವಸಮ್ಮತವಾದದ್ದಾಗಿದೆ.

(ಟ) ತಾಯಿತಂದೆಗಳ ಶ್ರಾದ್ಧವು ಒಂದೇ ದಿನದಲ್ಲಿ ಬಂದರೆ ಹೇಗೆ ಮಾಡಬೇಕು?

ಧರ್ಮಸಿಂಧು ೩೩೫–

**ಪಿತ್ರೋರ್ಮೃತಾಹೈಕ್ಯೇ ಪೂರ್ವಂ ಪಿತುಶ್ಶ್ರಾದ್ಧಂ ತತಃ ಪಾಕಭೇದೇನ ಮಾತುಶ್ಶ್ರಾದ್ಧಂ ಕುರ್ಯಾತ್ ॥**

ಅರ್ಥ:— ತಾಯಿತಂದೆಗಳ ಶ್ರಾದ್ಧವು ಒಂದೇ ದಿನದಲ್ಲಿ ಬಂದರೆ ಮೊದಲು ತಂದೆಯ ಶ್ರಾದ್ಧವನ್ನೂ ಅನಂತರ ತಾಯಿಯ ಶ್ರಾದ್ಧವನ್ನೂ ಪಾಕಭೇದದಿಂದ ಮಾಡಬೇಕು.

(ಠ) ಮಲಮಾಸದಲ್ಲಿ ಶ್ರಾದ್ಧವನ್ನು ಮಾಡಬೇಕೆ?

ಧರ್ಮಸಿಂಧು ೪–

**ಮಲಮಾಸಮೃತಾನಾಂ ಮಲಮಾಸ ಏವ ಪ್ರತಿಸಾಂವತ್ಸರಿಕಶ್ರಾದ್ಧಂ ಕರ್ತವ್ಯಮ್ । ಶುದ್ಧಮಾಸೇ ಮೃತಾನಾಂ ಪ್ರತ್ಯಾಬ್ದಿಕಂ ಶ್ರಾದ್ಧಂ ಮಲಮಾಸೇ ನ ಕರ್ತವ್ಯಮ್ । ಶುದ್ಧ ಏವ ಕಾರ್ಯಮ್ । ಶುದ್ಧಮಾಸೇ ಮೃತಾನಾಂ ಪ್ರಥಮಾಬ್ದಿಕಂ ತು ಮಲಮಾಸ ಏವ ಕಾರ್ಯಮ್ । ನ ಶುದ್ಧೇ । ದ್ವಿತೀಯಾಬ್ದಿಕಂ ತು ಶುದ್ಧ ಏವ ॥**

ಅರ್ಥ :— ಮಲಮಾಸದಲ್ಲಿ ಸತ್ತವರಿಗೆ ಪ್ರತಿಸಾಂವತ್ಸರಿಕ ಶ್ರಾದ್ಧವನ್ನು ಮಲ ಮಾಸದಲ್ಲಿಯೇ ಮಾಡಬೇಕು. ಶುದ್ಧಮಾಸದಲ್ಲಿ ಮೃತರಾದವರಿಗೆ ಮಲಮಾಸದಲ್ಲಿ ಪ್ರತ್ಯಾಬ್ದಿಕಶ್ರಾದ್ಧವನ್ನು ಮಾಡಬಾರದು ; ಶುದ್ಧಮಾಸದಲ್ಲಿಯೇ ಮಾಡಬೇಕು. ಶುದ್ಧ ಮಾಸದಲ್ಲಿ ಮೃತರಾದವರಿಗೆ ಪ್ರಥಮಾಬ್ದಿಕಶ್ರಾದ್ಧವನ್ನು ಮಲಮಾಸದಲ್ಲಿಯೇ ಮಾಡ ಬೇಕು. ದ್ವಿತೀಯಾಬ್ದಿಕಶ್ರಾದ್ಧವನ್ನು ಶುದ್ಧಮಾಸದಲ್ಲಿಯೇ ಮಾಡಬೇಕು.

ಸ್ಮೃತಿಮುಕ್ತಾಫಲ ೨೭೮ ಚಂದ್ರಿಕಾಯಾಮ್ —

**ಆಬ್ದಿಕಂ ಪ್ರಥಮಂ ಯತ್ಸ್ಯಾತ್ತತ್ಕುರ್ವೀತ ಮಲಿಮ್ಲುಚೇ |**
**ತ್ರಯೋದಶೇ ಚ ಸಂಪ್ರಾಪ್ತೇ ಕುರ್ವೀತ ಪುನರಾಬ್ದಿಕಮ್ ||**

ಅರ್ಥ :— ಪ್ರಥಮಾಬ್ದಿಕಶ್ರಾದ್ಧವನ್ನು ಮಲಮಾಸದಲ್ಲಿ ಮಾಡಬೇಕು. ಪುನ ರಾಬ್ದಿಕ ಶ್ರಾದ್ಧವನ್ನು ೧೩ನೆಯ ತಿಂಗಳು ಬರಲಾಗಿ ಆಗ ಮಾಡಬೇಕು.

ಸ್ಮೃತಿಮುಕ್ತಾಫಲ ೨೭೮—

**ಮಲಮಾಸಶ್ಚ ಯೋ ಮಾಸಸ್ಸಮಾಸಃ ಪಾಪಸಂಜ್ಞಕಃ ।**
**ತ್ಯಕ್ತ್ವಾ ತಮುತ್ತರೇ ಕುರ್ಯಾತ್ಪಿತ್ರ್ಯ ದೈವಾದಿಕಾಃ ಕ್ರಿಯಾಃ ||**

ಅರ್ಥ :— ಮಲಮಾಸವು ಪಾಪಮಾಸವೆಂಬ ಹೆಸರುಳ್ಳದ್ದು. ಅದರಲ್ಲಿ ದೈವಪಿತ ಕರ್ಮಗಳನ್ನು ಮಾಡಬಾರದು. ಅದನ್ನು ಬಿಟ್ಟು ಮುಂದಿನ ಶುದ್ಧಮಾಸದಲ್ಲಿ ಮಾಡಬೇಕು.

**ಮಲಮಾಸಮೃತಾನಾಂ ತು ಮಲಮಾಸ ಏವ ಕಾರ್ಯಾಣಿ |**

ಅರ್ಥ :— ಮಲಮಾಸದಲ್ಲಿ ಸತ್ತವರಿಗೆ ಮಲಮಾಸದಲ್ಲಿಯೇ ಶ್ರಾದ್ಧವನ್ನು ಮಾಡಬೇಕು.

(ಡ) ಸೌರಮಾನರೀತಿಯಿಂದ ಒಂದು ತಿಂಗಳಲ್ಲಿ ಚಾಂದ್ರಮಾನ ರೀತಿಯಿಂದ ಎರಡು ತಿಥಿಗಳು ಬಂದಾಗ ಯಾವ ತಿಥಿಯನ್ನು ಶ್ರಾದ್ಧ ತಿಥಿಯನ್ನಾಗಿ ಗ್ರಹಿಸಬೇಕು ?

ಸ್ಮೃತಿಮುಕ್ತಾಫಲ ೨೩೭—

**ಮಾಸ್ಯೇಕಸ್ಮಿನ್ದ್ವ್ಯೇ ತಿಥೀ ಚೇತ್ಪರಸ್ಯಾಮ್ | ಪರಸ್ಯಾಂ ದುಷ್ಟಾಯಾಂ ಪೂರ್ವಮೇವ ||**

ಅರ್ಥ :— ಸೌರಮಾನರೀತ್ಯಾ ಒಂದು ತಿಂಗಳಲ್ಲಿ ಚಾಂದ್ರಮಾನದ ರೀತಿಯಿಂದ ಎರಡು ತಿಥಿಗಳು ಬಂದರೆ ಪರತಿಥಿಯಲ್ಲಿಯೇ ಮಾಡಬೇಕು. ಪರತಿಥಿಯು ದುಷ್ಟವಾಗಿದ್ದರೆ ಪೂರ್ವತಿಥಿಯಲ್ಲಿಯೇ ಮಾಡಬೇಕು.

**ತತ್ರೈವ ಸೌರಮಾಸೇ ತಿಥಿದ್ವಯಸಂಭವೇ ಮಾಸಿಕಾಬ್ದಿಕಯೋಃ ಪರಾ ಗ್ರಾಹ್ಯಾ ।**

**ಮಾಸೇ ಸಂವತ್ಸರೇ ಚೈವ ತಿಥಿದ್ವೈಧಂ ಯದಾ ಭವೇತ್ ।**

**ತತ್ರೋತ್ತರೋತ್ತಮಾ ಜ್ಞೇಯಾ ಪೂರ್ವಾ ಸ್ಯಾತ್ತು ಮಲಿಮ್ಲುಚಾ॥**

ಅರ್ಥ :— ಸೌರಮಾನರೀತಿಯಲ್ಲಿ ಒಂದು ತಿಂಗಳಲ್ಲಿ ಚಾಂದ್ರಮಾನರೀತಿಯಿಂದ ಎರಡ ತಿಥಿಗಳು ಬಂದರೆ ಮಾಸಿಕಶ್ರಾದ್ಧಕ್ಕೂ ಸಂವತ್ಸರಶ್ರಾದ್ಧಕ್ಕೂ ಪರತಿಥಿಯನ್ನು ಗ್ರಹಿಸ ಬೇಕು. ಏಕೆಂದರೆ ಅವುಗಳಲ್ಲಿ ಉತ್ತರತಿಥಿಯು ಉತ್ತಮತಿಥಿಯು, ಪೂರ್ವತಿಥಿಯು ಮಲತಿಥಿಯು.

(೩) ವಿಭಕ್ತರೂ ಅವಿಭಕ್ತರೂ ಹೇಗೆ ಮಾಡಬೇಕು ?

ನಿರ್ಣಯಸಿಂಧು ೩೫೭--

**ವಿಭಕ್ತೈಸ್ತು ಪೃಥಕ್ಕಾರ್ಯಂ ಪ್ರತಿಸಂವತ್ಸರಾದಿಕಮ್ ।**
**ಏಕೇನೈವಾವಿಭಕ್ತೇಷು ಕೃತೇ ಸರ್ವೈಸ್ತು ತತ್ಕೃತಮ್ ॥**
**ಸಾಂವತ್ಸರಾತ್ಪೂರ್ವಾಣಿ ಮಾಸಿಕಾನ್ಯೇಕತ್ರೈವ ।**

ಅರ್ಥ :— ವಿಭಕ್ತರಾದ ಸಹೋದರರು ಪ್ರತಿಸಾಂವತ್ಸರಾದಿ ಶ್ರಾದ್ಧಗಳನ್ನು ಬೇರೆ ಬೇರೆ ಮಾಡಬೇಕು. ಪಾಲಾಗದವರಾಗಿದ್ದರೆ ಒಬ್ಬ ಮಾಡಿದರೆ ಎಲ್ಲರೂ ಮಾಡಿದಂತೆಯೇ ಆಗುತ್ತದೆ. (ಬಾಕಿಯವರೂ ಅದರಲ್ಲಿ ಭಾಗಿಗಳಾಗಿರಬೇಕು). ಸಾಂವತ್ಸರಿಕಶ್ರಾದ್ಧಕ್ಕಿಂತ ಮೊದಲು ಮಾಡುವ ಷೋಡಶ ಶ್ರಾದ್ಧಗಳನ್ನು ವಿಭಕ್ತರಾಗಿದ್ದರೂ ಬೇರೆಬೇರೆ ಮಾಡ ಬಾರದು. ಒಂದೇ ಕಡೆಯಲ್ಲಿ ಮಾಡಬೇಕು.

(೮) ಶ್ರಾದ್ಧಕರ್ತೃಭೋಕ್ತೃಗಳ ನಿಯಮವು ಯಾವದು ?

ಧರ್ಮಸಿಂಧು ೩೦೯—

**ಸ್ತ್ರೀಸಂಗ ಪುನರ್ಭೋಜನಾನೃತಭಾಷಣಾಧ್ಯಾಪನದ್ಯೂತಾಽಯಾಸಭಾರೋದ್ವಹನಹಿಂಸಾದಾನಪ್ರತಿಗ್ರಹಚೌರ್ಯಾಧ್ವಗಮನದಿವಾಸ್ವಾಪ ಕಲಹಾದಿವರ್ಜನಂ ಕರ್ತೃಭೋಕ್ತ್ರುಭಯಧರ್ಮಾಃ ॥**

ಅರ್ಥ :— ಸ್ತ್ರೀಸಂಗ, ಎರಡನೆಯ ಸಲ ಭೋಜನ, ಸುಳ್ಳುಹೇಳುವದು, ವೇದ ವನ್ನು ಹೇಳಿಕೊಡುವದು, ಜೂಜಾಡುವದು, ಆಯಾಸಭಾರವನ್ನು ಹೊರುವದು, ಹಿಂಸೆ ದಾನ, ಪ್ರತಿಗ್ರಹ, ಕಳ್ಳತನ, ದಾರಿ ನಡೆಯುವದು, ಹಗಲುನಿದ್ದೆ ಮತ್ತು ಜಗಳ ಇವೇ ಮೊದಲಾದವನ್ನು ಶ್ರಾದ್ಧವನ್ನು ಮಾಡುವವನೂ ನಿಮಂತ್ರಿತರಾದ ಬ್ರಾಹ್ಮಣರೂ ಸಹ ಬಿಡಬೇಕು.

(ತ) ಹೇಳಿದ ಬ್ರಾಹ್ಮಣರನ್ನು ಬಿಡಬಹುದೆ ?

ಧರ್ಮಸಿಂಧು ೩೧೦—

**ಪ್ರಮಾದೇನ ನಿಮನ್ತ್ರಿತವಿಪ್ರತ್ಯಾಗೇ ಯತ್ನೇನ ವಿಪ್ರಃ ಪ್ರಸಾದನೀಯಃ । ಬುದ್ಧಿಪೂರ್ವಕತ್ಯಾಗೇ ಚಾಂದ್ರಾಯಣಂ ಪ್ರಾಯಶ್ಚಿತ್ತಮ್ ।**

ಅರ್ಥ :— ನಿಮನ್ತ್ರಿತಬ್ರಾಹ್ಮಣನನ್ನು ಪ್ರಮಾದದಿಂದ ಬಿಟ್ಟರೆ ಪ್ರಯತ್ನಪಟ್ಟು ಆತನನ್ನು ಸಮಾಧಾನಪಡಿಸಬೇಕು. ಬುದ್ಧಿಪೂರ್ವಕವಾಗಿ ಬಿಟ್ಟರೆ ಚಾಂದ್ರಾಯಣವೆಂಬ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕು.

(ಥ) ಹೇಳಿಸಿಕೊಂಡ ಬ್ರಾಹ್ಮಣನು ಬೇರೆ ಕಡೆಗೆ ಊಟಕ್ಕೆ ಹೋದರೂ ಬರುವವನ್ನು ಸಾವಕಾಶಮಾಡಿದರೂ ಏನು ದೋಷ ?

ಧರ್ಮಸಿಂಧು ೩೧೦—

**ಆಮಂತ್ರಿತಸ್ತು ಯೋ ವಿಪ್ರೋ ಭೋಕ್ತುಮನ್ಯತ್ರ ಗಚ್ಛತಿ ।**
**ನರಕಾಣಾಂ ಶತಂ ಗತ್ವಾ ಚಾಂಡಾಲೇಷ್ವಭಿಜಾಯತೇ ॥**

ಅರ್ಥ :— ನಿಮಂತ್ರಣಮಾಡಿಸಿಕೊಂಡ ಬ್ರಾಹ್ಮಣನು ಬೇರೆ ಕಡೆಗೆ ಊಟಕ್ಕೆ ಹೋದರೆ ನೂರಾರು ನರಕಗಳಿಗೆ ಹೋಗಿ ಚಾಂಡಾಲರಲ್ಲಿ ಹುಟ್ಟುತ್ತಾನೆ.

ಧರ್ಮಸಿಂಧು ೩೧೦—

**ಆಮಂತ್ರಿತಸ್ತು ಯಶ್ಶ್ರಾದ್ಧೇ ವಿಲಂಬಂ ಕುರುತೇ ದ್ವಿಜಃ ।**
**ದೇವದ್ರೋಹೀ ಪಿತೃದ್ರೋಹೀ ಪಚ್ಯತೇ ನರಕೇಷು ಸಃ ॥**

ಅರ್ಥ :— ಶ್ರಾದ್ಧದಲ್ಲಿ ಆಮಂತ್ರಿತ ಬ್ರಾಹ್ಮಣನು ಸಾವಕಾಶವನ್ನು ಮಾಡಿದ್ದೇ ಆದರೆ ದೇವದ್ರೋಹಿಯೂ, ಪಿತೃದ್ರೋಹಿಯೂ ಆಗಿ ನರಕಗಳಲ್ಲಿ ಬಹು ಯಾತನೆಗಳಿಗೆ ಸಿಕ್ಕಿ ನರಳುತ್ತಾನೆ.

(ದ) ಶ್ರಾದ್ಧಾಂಗತಿಲತರ್ಪಣವನ್ನು ಯಾವಾಗ ಕೊಡಬೇಕು ?

ಧರ್ಮಸಿಂಧು ೩೩೭—

**ವಾರ್ಷಿಕಶ್ರಾದ್ಧೇ ಪರೇದ್ಯುರೇವ ಶ್ರಾದ್ಧೀಯದೇವತಾತ್ರಯೋದ್ದೇಶೇನ ತಿಲತರ್ಪಣಂ ಕಾರ್ಯಮ್ । ಸಕೃನ್ಮಹಾಲಯೇ ಸರ್ವಪಿತ್ರ್ಯುದ್ದೇಶೇನ ಪರೇದ್ಯುರೇವ ತಿಲತರ್ಪಣಂ ಕಾರ್ಯಮ್ ।**

**ದರ್ಶಾಂಗ ತರ್ಪಣಸ್ತು ದ್ವಾದಶಪಿತ್ರ್ಯಾ ಉದ್ದಿಶ್ಯ ಶ್ರಾದ್ಧಾತ್ಪೂರ್ವ ಮೇವ । ಷೋಡಶಶ್ರಾದ್ಧೇಷು ತರ್ಪಣಂ ನಾಸ್ತಿ ।**

ಅರ್ಥ :— ವಾರ್ಷಿಕಶ್ರಾದ್ಧದಲ್ಲಿ ಅಲ್ಲಿ ಬರುವ ಮೂರು ದೇವತೆಗಳ ಉದ್ದೇಶದಿಂದ ತಿಲತರ್ಪಣವನ್ನು ಮಾರನೆಯ ದಿನದಲ್ಲಿ ಕೊಡಬೇಕು. ಸಕೃನ್ಮಹಾಲಯದಲ್ಲಿ ಸರ್ವಪಿತೃಗಳ ಉದ್ದೇಶದಿಂದ ತಿಲತರ್ಪಣವನ್ನು ಮಾರನೆಯ ದಿನದಲ್ಲಿ ಕೊಡಬೇಕು. ದರ್ಶಶ್ರಾದ್ಧದಲ್ಲಿ ಶ್ರಾದ್ಧವನ್ನು ಮಾಡುವದಕ್ಕೆ ಮೊದಲೇ ೧೨ಪಿತೃಗಳ ಉದ್ದೇಶದಿಂದ ತಿಲತರ್ಪಣವನ್ನು ಕೊಡಬೇಕು. ಷೋಡಶಶ್ರಾದ್ಧದಲ್ಲಿ ತಿಲತರ್ಪಣವಿಲ್ಲ.

— —o— —

## ಷೋಡಶ ಮಾಸಿಕಗಳು

ಧರ್ಮಸಿಂಧು ೩೭೭—

**ಮಾಸಾದೌ ಮಾಸಿಕಂ ಕಾರ್ಯಮಾದ್ಯಂ ತ್ವೇಕಾದಶೇಽಹನಿ।**
**ಏಕದ್ವಿತ್ರಿದಿನೈರೂನೇ ತ್ರಿಭಾಗೇನೋನ ಏವ ವಾ ॥**

ಅರ್ಥ:— ಮಾಸಾದಿಯಲ್ಲಿ ಮಾಸಿಕಶ್ರಾದ್ಧವನ್ನು ಮಾಡಬೇಕು. ಆದ್ಯಮಾಸಿಕವನ್ನು ಪನ್ನೊಂದನೆಯ ದಿನದಲ್ಲಿ ಮಾಡಬೇಕು. ಊನಮಾಸಿಕಗಳನ್ನು ಅಂದರೆ ಊನಮಾಸಿಕ, ಊನಷಾಣ್ಮಾಸಿಕ, ಊನಾಬ್ದಿಕ ಮಾಸಿಕಗಳನ್ನು ಆಯಾ ಮಾಸಿಕದ ದಿನಕ್ಕೆ ಒಂದು, ಅಥವಾ, ಎರಡು, ಅಥವಾ ಮೂರು ದಿನಗಳನ್ನು ಮಧ್ಯೆ ಬಿಟ್ಟು ಮಾಡತಕ್ಕದ್ದು. ಅಥವಾ ಮೂರು ಭಾಗ ಕಡಿಮೆ ಇರುವಾಗ ಮಾಡತಕ್ಕದ್ದು.

(ಒಳ್ಳೆಯ ದಿನವನ್ನು ನೋಡಿ ಮಾಡಬೇಕಾಗಿರುವುದರಿಂದ ಹೀಗೆ ಮೂರು ನಾಲ್ಕು ದಿನಗಳನ್ನು ಹೇಳಿರುತ್ತಾರೆ.) ಉದಾಹರಣೆಗೆ ಪಂಚಮಿಶ್ರಾದ್ಧವನ್ನು ಒಂದು ದಿನ ಮಧ್ಯೇ ಬಿಟ್ಟು ತದಿಗೆಯ ದಿನದಲ್ಲಾಗಲೀ ಎರಡು ದಿನಗಳನ್ನು ಮಧ್ಯೇ ಬಿಟ್ಟು ಬಿದಿಗೆಯ ದಿನದಲ್ಲಾಗಲೀ ಮೂರು ದಿನಗಳನ್ನು ಮಧ್ಯೇ ಬಿಟ್ಟು ಪ್ರತಿಪತ್ತಿಥಿಯಲ್ಲಾಗಲೀ ಮಾಡತಕ್ಕದ್ದು.

ಈ ಊನಮಾಸಿಕಗಳನ್ನು ಮಾಡಬಾರದ ತಿಥಿಗಳು ಯಾವವು?

**ದ್ವಿಪುಷ್ಕರೇ ಚ ನಂದಾಸು ಸಿನೀವಾಲ್ಯಾಂ ಭೃಗೋರ್ದಿನೇ |**
**ಚತುರ್ದಶ್ಯಾಂ ಚ ನೋನಾನಿ ಕೃತ್ತಿಕಾಸು ತ್ರಿಪುಷ್ಕರೇ ||**

ಅರ್ಥ:- ೧೪, ೩೦ ತಿಥಿಗಳಲ್ಲಿಯೂ ಶುಕ್ರವಾರದಲ್ಲಿಯೂ ಕೃತ್ತಿಕಾನಕ್ಷತ್ರವಿರುವ ತಿಥಿಯಲ್ಲಿಯೂ ದ್ವಿಪುಷ್ಕರ ತ್ರಿಪುಷ್ಕರಗಳಲ್ಲಿಯೂ, ನಂದಾತಿಥಿಗಳಲ್ಲಿಯೂ ತ್ರಿಪಾದಿನಕ್ಷತ್ರಗಳಲ್ಲಿಯೂ, ಊನಮಾಸಿಕಗಳನ್ನು ಮಾಡಬಾರದು. ದ್ವಿಪುಷ್ಕರ ಮತ್ತು ತ್ರಿಪುಷ್ಕರಗಳು:- ತ್ರಿಪಾದಿನಕ್ಷತ್ರಗಳೂ, ಭದ್ರತಿಥಿ ಮತ್ತು ಆದಿತ್ಯ, ಸೋಮ ಮತ್ತು ಮಂಗಳವಾರಗಳೊಂದು ಇವುಗಳಲ್ಲಿ ಎರಡು ಮಾತ್ರ ಸೇರಿದರೆ ದ್ವಿಪುಷ್ಕರವೆಂದೂ ಮೂರು ಸೇರಿದರೆ ತ್ರಿಪುಷ್ಕರವೆಂದೂ ಹೆಸರು. ನಂದಾತಿಥಿಗಳು ಪ್ರತಿಪತ್, ಷಷ್ಠೀ ಮತ್ತು ಏಕಾದಶೀ ತಿಥಿಗಳು. ಊನಮಾಸಿಕಗಳನ್ನು ಈ ಮೇಲೆ ಹೇಳಿರುವ ನಿಷಿದ್ಧತಿಥಿಗಳನ್ನು ಬಿಟ್ಟು ಉಳಿದ ತಿಥಿಗಳಲ್ಲಿ ಮಾಡತಕ್ಕದ್ದು.

---

## ತ್ರೈಪಕ್ಷಿಕಶ್ರಾದ್ಧತಿಥಿಃ

**ತ್ರೈಪಕ್ಷಿಕಂ ತ್ರಿಪಕ್ಷೇ ಚ |**

ಅರ್ಥ:- ತ್ರೈಪಕ್ಷಿಕಶ್ರಾದ್ಧವನ್ನು ಮೂರನೆಯಪಕ್ಷದಲ್ಲಿ ಮೃತತಿಥಿಯಲ್ಲಿ ಮಾಡಬೇಕು.

ಹನ್ನೆರಡನೆಯ ದಿವಸ ಸಪಿಂಡೀಕರಣಶ್ರಾದ್ಧವನ್ನು ಮಾಡುವ ಪಕ್ಷದಲ್ಲಿ ಹನ್ನೊಂದನೆಯ ದಿವಸವೇ ಈ ಹದಿನಾರು ಶ್ರಾದ್ಧಗಳನ್ನೂ ಅಪಕರ್ಷಣಮಾಡಿ ಏಕೋದ್ದಿಷ್ಟವಿಧಾನದಿಂದ ಏಕಕಾಲದಲ್ಲಿಯೇ ಮಾಡಬೇಕು. ಹೀಗೆ ಇವುಗಳನ್ನು ಒಂದೇ ದಿನ ಅಪಕರ್ಷಣಮಾಡಿ ಹದಿನಾರು ಶ್ರಾದ್ಧಗಳನ್ನು ಮಾಡಿದ್ದರೂ ಪುನಃ ಅವನ್ನು ಆಯಾ ಕಾಲದಲ್ಲಿ ಬದುಕಿದ್ದರೆ ಮಾಡಲೇಬೇಕು.

ಧರ್ಮಸಿಂಧುಃ ೩೭೭—

**ಏತಾನಿ ದ್ವಾದಶಾಹಾದೌ ಸಪಿಂಡನಾತ್ಪೂರ್ವಂ ಕೃತಾನ್ಯಪಿ ಪುನಃ ಸಾಪಿಂಡ್ಯೋತ್ತರಂ ಸ್ವಸ್ವಕಾಲೇ ಪಾರ್ವಣವಿಧಿನಾ ಕಾರ್ಯಾಣಿ |**

ಅರ್ಥ— ಈ ಷೋಡಶಶ್ರಾದ್ಧಗಳನ್ನು ೧೧, ೧೨ನೆಯ ದಿನಗಳಲ್ಲಿ ಸಪಿಂಡ ಶ್ರಾದ್ಧಕ್ಕಿಂತ ಮೊದಲು ಅಪಕರ್ಷಮಾಡಿ ಮಾಡಿದ್ದರೂ ಸಾಪಿಂಡ್ಯವಾದ ಮೇಲೂ ತಿರುಗಿ ಆಯಾ ಕಾಲದಲ್ಲಿ ಅವನ್ನು ಪಾರ್ವಣವಿಧಾನದಿಂದ ಮಾಡಬೇಕು.

ಧರ್ಮಸಿಂಧುಃ ೩೭೭ —

**ಯೇ ತು ದ್ವಾದಶಾಹೇ ಸಪಿಂಡನಂ ಕೃತ್ವಾ ತ್ರಯೋದಶಾಹಾದೌ ಆದ್ಯಮಾಸಿಕಸಹಿತಾನಾಂ ಷೋಡಶಾನಾಂ ಪುನರಾವೃತ್ತಿಂ ಕುರ್ವನ್ತಿ ತೇ ಭ್ರಾನ್ತಾಃ॥**

ಅರ್ಥ:- ಹನ್ನೆರಡನೆಯ ದಿವಸ ಸಪಿಂಡನವನ್ನು ಮಾಡಿ ಹದಿಮೂರನೆಯ ದಿನವೇ ಮೊದಲಾದ ದಿನಗಳಲ್ಲಿ ಆದ್ಯಮಾಸಿಕಸಹಿತವಾದ ೧೬ ಶ್ರಾದ್ಧಗಳನ್ನು ಯಾರು ಪುನರಾವೃತ್ತಿಮಾಡಿ ಮಾಡುತ್ತಾರೋ ಅವರು ಭ್ರಾಂತರು.

**ಷರಾ:** ಆಂಧ್ರ, ಕರ್ಣಾಟಕ, ಕನ್ಮೆಗಳು ಮುಂತಾದವರಲ್ಲಿ ೧೩ನೆಯ ದಿವಸ ಮಾಸಾನುಮಾಸಿಕ ಶ್ರಾದ್ಧಗಳನ್ನು ಪುನಃ ಮಾಡುವ ಪದ್ಧತಿ ಕಂಡು ಬಂದಿದೆ. ಶಾಸ್ತ್ರದಲ್ಲಿ ಹೀಗೆ ಮಾಡುವವರು ಭ್ರಾಂತರು ಎಂದಿದೆ. ಇನ್ನೆಲ್ಲಿಯೂ ಹೀಗೆ ಮಾಡಬೇಕೆಂದು ವಿಧಿಸಿರುವದು ಕಂಡುಬಂದಿಲ್ಲ. ಆದರೂ ದೂರದೃಷ್ಟಿಯುಳ್ಳ ಹಿರಿಯರು ಜೀವಮಾನವು ಅಸ್ಥಿರವಾದದ್ದೆಂದು ತಿಳಿದು ಪುನಃ ಮತ್ತೊಂದಾವೃತ್ತಿ ಮಾಡಿರಲಿ ಎಂದು ಆಚರಣೆಗೆ ತಂದಿರಬಹುದೆಂದು ಊಹಿಸಬೇಕಾಗಿದೆ.

**ಶಾಸ್ತ್ರದಲ್ಲಂತೂ ಹೀಗೆ ಮಾಡಬೇಕೆಂದು ವಿಧಿಸಿಲ್ಲ.**

**ಸ್ವಸ್ತಿ**

**ಶುಭಂ ಭವತು**

ಅಧ್ಯಾತ್ಮಪ್ರಕಾಶ ಮುದ್ರಣಾಲಯ, ಹೊಳೆನರಸೀಪುರ.